ಕನ್ನಡ ವಿಶ್ವವಿದ್ಯಾಲಯ
ಹಂಪಿ

೨೦೧೩-೧೪ನೇ ಸಾಲಿನಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಎಂ.ಫಿಲ್. ಪದವಿಗಾಗಿ ಅರ್ಪಿಸಿದ ನಿಬಂಧ

"ಡಾ|| ನಾ.ಡಿಸೋಜರ ಕಥೆಗಳ ವಸ್ತು ವಿವೇಚನೆ"

ನಿಬಂಧಕಾರರು

ಶ್ರೀಕಂಠಿ.ಎ

ನೋಂದಣಿ ಸಂಖ್ಯೆ - KVTMKS - 00673
ಕನ್ನಡ ಎಂ.ಫಿಲ್ ವಿದ್ಯಾರ್ಥಿ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಎ.ಆರ್. ಮದನಕುಮಾರ್

ಎಂ.ಎ., ಪಿಎಚ್.ಡಿ.,
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮಹಿಳಾ ಸರ್ಕಾರಿ ಪದವಿ ಕಾಲೇಜು, ಮಂಡ್ಯ

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

೨೦೧೩-೧೪

ಕನ್ನಡ ವಿಶ್ವವಿದ್ಯಾಲಯ
ಹಂಪಿ

೨೦೧೩–೧೪ನೇ ಸಾಲಿನಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಎಂ.ಫಿಲ್. ಪದವಿಗಾಗಿ ಅರ್ಪಿಸಿದ ನಿಬಂಧ

"ಡಾ॥ ನಾ.ಡಿಸೋಜರ ಕಥೆಗಳ ವಸ್ತು ವಿವೇಚನೆ"

ನಿಬಂಧಕಾರರು

ಶ್ರೀಕಂಠಿ.ಎ

ನೋಂದಣಿ ಸಂಖ್ಯೆ – KVTMKS - 00673
ಕನ್ನಡ ಎಂ.ಫಿಲ್ ವಿದ್ಯಾರ್ಥಿ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಎ.ಆರ್. ಮದನಕುಮಾರ್
ಎಂ.ಎ., ಪಿಎಚ್.ಡಿ.,
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮಹಿಳಾ ಸರ್ಕಾರಿ ಪದವಿ ಕಾಲೇಜು, ಮಂಡ್ಯ

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

೨೦೧೩–೧೪

ಮಾರ್ಗದರ್ಶಕರ ಪ್ರಮಾಣಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಎಂ.ಫಿಲ್ ಪದವಿಯ ವಿದ್ಯಾರ್ಥಿಯಾದ **ಶ್ರೀಕಂಠಿ.ಎ** ಅವರು ನನ್ನ ಮಾರ್ಗದರ್ಶನದಲ್ಲಿ **"ಡಾ॥ ನಾ.ಡಿಸೋಜರ ಕಥೆಗಳ ವಸ್ತು ವಿವೇಚನೆ"** ಎಂಬ ಶೀರ್ಷಿಕೆಯ ನಿಬಂಧವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಒಪ್ಪಿಸಲು ಸಿದ್ಧಪಡಿಸಿದ್ದಾರೆ.

ಈ ನಿಬಂಧವನ್ನು ಈ ಹಿಂದೆ ಭಾಗಶಃವಾಗಲಿ, ಪೂರ್ಣವಾಗಿಯಾಗಲಿ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ಯಾವುದೇ ವಿಶ್ವವಿದ್ಯಾಲಯಗಳ ಪದವಿ ಡಿಪ್ಲೊಮಾ ಅಥವಾ ಯಾವುದೇ ಪರೀಕ್ಷೆಗಾಗಿ ಯಾವ ವಿಶ್ವವಿದ್ಯಾಲಯಕ್ಕೂ ಸಲ್ಲಿಸಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಮೈಸೂರು
ದಿನಾಂಕ: ೨೪-೦೬-೨೦೧೪

(ಡಾ. ಎ.ಆರ್.ಮದನಕುಮಾರ್)
ಮಾರ್ಗದರ್ಶಕರು
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮಹಿಳಾ ಸರ್ಕಾರಿ ಪದವಿ ಕಾಲೇಜು
ಮಂಡ್ಯ

ಅಭ್ಯರ್ಥಿಯ ಘೋಷಣಾ ಪತ್ರ

ಡಾ. ಎ.ಆರ್.ಮದನಕುಮಾರ್, ಸಹ ಪ್ರಾಧ್ಯಾಪಕರು, ಮಹಿಳಾ ಸರ್ಕಾರಿ ಪದವಿ ಕಾಲೇಜು, ಮಂಡ್ಯ ಇವರ ಮಾರ್ಗದರ್ಶನದಲ್ಲಿ **"ಡಾ॥ ನಾ.ಡಿಸೋಜರ ಕಥೆಗಳ ವಸ್ತು ವಿವೇಚನೆ"** ಎಂಬ ವಿಷಯದ ಬಗೆಗೆ ಸಂಶೋಧನೆ ನಡೆಸಿ ನಿಬಂಧವನ್ನು ಸಿದ್ದಪಡಿಸಲಾಗಿದೆ.

ಈ ನಿಬಂಧವನ್ನು ಈ ಹಿಂದೆ ಭಾಗಶಃವಾಗಲಿ, ಪೂರ್ಣವಾಗಿಯಾಗಲಿ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ಯಾವುದೇ ವಿಶ್ವವಿದ್ಯಾಲಯಗಳ ಪದವಿ, ಡಿಪ್ಲೊಮೋ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಮೈಸೂರು
ದಿನಾಂಕ: ೨೪-೦೬-೨೦೧೪

(ಶ್ರೀಕಂಠಿ.ಎ.)
೨೦೧೩-೧೪ನೇ ಸಾಲಿನ ಎಂ.ಫಿಲ್ ವಿದ್ಯಾರ್ಥಿ
ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಪರಿವಿಡಿ

"ಡಾ॥ ನಾ.ಡಿಸೋಜರ ಕಥೆಗಳ ವಸ್ತು ವಿವೇಚನೆ"

* * * * *

ಅಧ್ಯಾಯ – ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಕನ್ನಡ ಕಥಾಸಾಹಿತ್ಯದ ಸ್ವರೂಪ

ಪೀಠಿಕೆ:–

ಮಾನವ ಸಮಾಜಜೀವಿ, ಸಂಘಜೀವಿ, ಸಮಾಜ ಹೊರತುಪಡಿಸಿ ಆತ ಬದುಕಲಾರ. ಇಂದಿನ ಸಮಾಜವು ತೀವ್ರ ಸ್ವರೂಪದಲ್ಲಿ ಪರಿವರ್ತನೆಗೊಳ್ಳುತ್ತಿದ್ದು ಕೈಗಾರೀಕರಣ, ನಗರೀಕರಣ, ಹೊಸ–ಅವಿಷ್ಕಾರಗಳು ಶಿಕ್ಷಣದ ಪ್ರಭಾವ ಮುಂತಾದವುಗಳ ಫಲವಾಗಿ ಮಾನವನ ಆಲೋಚನೆಯ ರೀತಿ ಬದಲಾಗುತ್ತಿದೆ. ಸಂಸ್ಕೃತಿಗೆ ಪ್ರತಿಸಂಸ್ಕೃತಿಯ ಹೊಡೆತದಿಂದ ಸಮಾಜದ ಒಂದು ವರ್ಗ ಪ್ರತಿ ಸಂಸ್ಕೃತಿಯನ್ನು ಅನುಸರಿಸಿದವು. ಮತ್ತೊಂದು ವರ್ಗ ಎರಡನ್ನೂ ತಮ್ಮ ಅನುಕೂಲಕ್ಕೆ ಬಳಕೆ ಮಾಡಿಕೊಂಡವು. ಆದರೆ ಮೂಲ ಸಂಸ್ಕೃತಿಯ ಅನುಯಾಯಿಗಳ ಮುಗ್ಧತೆ, ನಂಬಿಕೆಗಳ ಮೇಲೆ ಪ್ರತಿಸಂಸ್ಕೃತಿಯವರು ಮಾಡುತ್ತಿರುವ ಶೋಷಣೆ ಬಯಲಿಗೆ ಬಂದಿದ್ದೇ ಸಾಹಿತ್ಯ ಬರವಣಿಗೆಯಿಂದಾಗಿ, ಸಾಹಿತ್ಯವು ಸಾಮಾಜಿಕ ಸಮಸ್ಯೆಗಳನ್ನು ತನ್ನ ತೆಕ್ಕೆಗೆ ಸೇರಿಸಿಕೊಂಡಾಗಲೆ ಹಿಂದುಳಿದ ವರ್ಗಗಳಿಗೆ ತಮ್ಮ ಮೇಲಾಗುತ್ತಿರುವ ಅನ್ಯಾಯದ ಅರಿವು ಮೂಡಿದ್ದು, ಸ್ವಾತಂತ್ರ್ಯಪೂರ್ವ ಅಂದರೆ ೧೯ನೇ ಶತಮಾನದವರೆಗೂ ಸಾಹಿತ್ಯ ಒಂದು ಕಲೆಯಾಗಿ, ಮೇಲ್ವರ್ಗದ ಬದುಕಿನ ಅನಾವರಣವೇ ಆಗಿತ್ತು. ಆದರೆ ಪಾಶ್ಚಾತ್ಯರ ಪ್ರಭಾವವಾದ ಮೇಲೆ ಸಾಹಿತ್ಯ ತನ್ನ ದಿಕ್ಕು ಬದಲಿಸಿ ಪ್ರತಿಭಟಿಸಿತು.

ಕನ್ನಡ ಸಾಹಿತ್ಯ ೨೦ನೇ ಶತಮಾನದಲ್ಲಿ ಹಲವಾರು ಪ್ರಕಾರಗಳನ್ನು ಸ್ವೀಕರಿಸಿ ಸಾಹಿತ್ಯ ರಚನೆಯಲ್ಲಿ ತೊಡಗಿಕೊಂಡಿತು. ಭಾವಗೀತೆ, ಕಾದಂಬರಿ, ಸಣ್ಣಕತೆ, ನಾಟಕ ಆತ್ಮಕಥೆ, ಮಹಾಕಾವ್ಯ ಮತ್ತು ಸಂಸ್ಕೃತಿ ಅಧ್ಯಯನ, ಸಂಶೋಧನೆಗಳು, ಸಾಹಿತ್ಯವನ್ನು ಚುರುಕುಗೊಳಿಸಿದ್ದವು. ಹೀಗೆ ವಿಪುಲವಾಗಿ ಬೆಳೆದಂತಹ ಸಾಹಿತ್ಯವನ್ನು ಸಂಶೋಧನೆ ತನ್ನ ವ್ಯಾಪ್ತಿಗೆ ಸೇರಿಸಿಕೊಂಡು ಹಲವು ಆಯಾಮಗಳೊಡನೆ ಅಧ್ಯಯನ ನಡೆಸುತ್ತಿದೆ. ಪ್ರಾಚೀನ ಕುರುಹುಗಳನ್ನು ಶೋಧಿಸಿ ತೆಗೆದು ಅಧ್ಯಯನ ನಡೆಸುವುದು, ಅದರ ಮೂಲಕ ರಾಜ್ಯ, ಭಾಷೆಯ ಪ್ರಾಚೀನತೆಯನ್ನು ಕಂಡುಹಿಡಿಯುವುದು ನಿಜವಾದ ಸಂಶೋಧನೆ ಎನಿಸಿಕೊಂಡಿತ್ತು. ಅದರ ಜೊತೆಗೆ ಇಂದು ಪ್ರಾಚೀನದಿಂದ ಇಂದಿನವರೆಗೆ ಬರೆದ ಸಾಹಿತ್ಯವನ್ನು ಸಂಶೋಧನೆಯ ವಸ್ತುವಾಗಿಸಿ ಅದರ ಮೂಲಕ

ಕವಿ, ಕಾಲ, ದೇಶ, ಭಾಷೆ, ವರ್ಗ, ವಂಶ, ಸಂಸ್ಕೃತಿಯನ್ನು ತಿಳಿಯುವ ಹೊಸ ಪ್ರಯತ್ನ ಆರಂಭಗೊಂಡಿದೆ.

ಹೊಸ ಅಧ್ಯಯನದ ಒಳಗೆ ತೌಲನಿಕ ಅಧ್ಯಯನ, ಒಬ್ಬ ಕವಿಯ ಸಾಹಿತ್ಯದ ಅಧ್ಯಯನ, ಭಾಷೆಯ ಅಧ್ಯಯನ, ಜನಪದ ಅಧ್ಯಯನ ಮತ್ತು ಪ್ರಕಾರಗಳ ಅಧ್ಯಯನವು ರೂಢಿಯಲ್ಲಿದೆ. ಪ್ರಕಾರಗಳಲ್ಲಿ ಮಹಾಕಾವ್ಯಗಳ ಅಧ್ಯಯನ, ಕಾದಂಬರಿಗಳ ಅಧ್ಯಯನ, ಕಾವ್ಯಗಳ ಅಧ್ಯಯನಗಳು ನಡೆದಷ್ಟು ಸಣ್ಣಕಥೆಗಳ ಮೇಲೆ ಇನ್ನೂ ಸಾಕಷ್ಟು ಅಧ್ಯಯನಗಳು ನಡೆಯುತ್ತಿವೆ. ಅದರ ಮೂಲಕ ಸಾಹಿತ್ಯದ ವಾಸ್ತವ ನಡಿಗೆಯನ್ನು ಅರಿಯುವ ಯೋಗ್ಯ ಅಧ್ಯಯನಗಳು ಸಂಶೋಧನೆಯ ಮೂಲಕ ಸಿಗುತ್ತಿರುವುದು ಸಂತೋಷದ ಸಂಗತಿ. ಹೀಗೆ ಕನ್ನಡ ಸಾಹಿತ್ಯವು ಹಲವಾರು ಪ್ರಕಾರಗಳನ್ನು ತನ್ನ ತೆಕ್ಕೆಯೊಳಗೆ ಸೇರಿಸಿಕೊಂಡು ಬೃಹತ್ತಾಗಿ ಬೆಳೆದು ಬಂದಿದೆ. ಇದರಲ್ಲಿ 'ಸಣ್ಣಕಥೆ' ಪ್ರಕಾರವು ಒಂದು. ಇತ್ತೀಚಿನ ದಿನಗಳಲ್ಲಿ ಇದು ಒಂದು ಪ್ರಕಾರವಾದರೂ ಪ್ರಾಚೀನದಿಂದಲೂ ಕಥೆ ಹೇಳುವ, ಕೇಳುವ ರೂಢಿ ಇದೆ. ನಮ್ಮ ಸಂಸ್ಕೃತಿಗೆ ಕನ್ನಡಿ ಹಿಡಿದಂತೆ ಜನಪದ ಕಥೆಗಳು ಜನರಿಂದ ಜನರಿಗೆ ಹಂಚಿಕೆಯಾಗುತ್ತಾ ಬಂದಿದೆ. ಇಂತಹ ಕಥೆಗಳಿಗೆ ಅಜ್ಜೀ ಕಥೆಗಳೆಂದು ಕರೆದದ್ದು ಉಂಟು. ಇಂತಹ ಕಥೆಗಳು ರಾಜಮಹಾರಾಜರ ಸಾಹಸವನ್ನು ಕುರಿತು ಕಾಲ್ಪನಿಕವಾಗಿ ರಚಿಸಲಾಗುತ್ತಿತ್ತು. ಇದು ೧೯ನೇ ಶತಮಾನದ ಮುದ್ದಣ್ಣನವರೆಗೂ ಮುಂದುವರೆಯುತ್ತಾ ಬಂದಿದೆ. ಆದರೆ ೨೦ನೇ ಶತಮಾನದ ಆರಂಭದಿಂದೀಚೆಗೆ ಭಾರತೀಯ ಜನಜೀವನದಲ್ಲಾದ ಬದಲಾವಣೆ, ಅನ್ಯ ಸಂಸ್ಕೃತಿಯ ಪ್ರಭಾವದಿಂದ ದೇಸಿ ಸಂಸ್ಕೃತಿಯ ಮೇಲಾಗಬಹುದಾದ ಹೊಡೆತದ ಅರಿವಿದ್ದ ಸ್ವತಂತ್ರಪೂರ್ವ ಲೇಖಕರು ದೇಸಿಯ ಚಿಂತನೆಯುಳ್ಳ ಕಥೆಗಳನ್ನು ರಚಿಸಿದರು. ಒಂದು ಉದ್ದೇಶವಿಟ್ಟು ಕಥೆ ಬರೆಯುವ ಪ್ರಯತ್ನ ಇಲ್ಲಿಂದಲೇ ಶುರುವಾಯಿತು. ಹೀಗೆ ಶುರುವಾದ ಕಥೆಗಳು ಆಯಾ ಕಾಲದ ಸಮಸ್ಯೆಗಳನ್ನು ವಸ್ತುವಾಗಿಸಿ, ಪರಿಹಾರವನ್ನೊದಗಿಸಿಯೋ, ಸಮಸ್ಯೆಯನ್ನು ತೋರಿಸುತ್ತಾ ಪರಿವರ್ತನೆಯ ಚಿಂತನೆಯನ್ನು ಬಿತ್ತುತ್ತಾ ಬಂದಿವೆ. ಭಾಷೆಯಲ್ಲಿ ಸರಳವಾಗಿ, ನೇರವಾಗಿ, ಸೂಕ್ಷ್ಮವಾಗಿ ಹೇಳುವ ಪ್ರವೃತ್ತಿ ಈ ಕಥನ ಸಾಹಿತ್ಯಕ್ಕೆ ಪ್ರಾಪ್ತವಾದುದು ಇತ್ತೀಚಿನ ಕಥೆಗಳ ಹೆಗ್ಗಳಿಕೆ.

ಅಧ್ಯಯನದ ಉದ್ದೇಶ, ವ್ಯಾಪ್ತಿ:–

ಇದುವರೆಗೂ ಕನ್ನಡದ ಸಣ್ಣಕತೆಗಳನ್ನು ಕುರಿತು, ಅವುಗಳ ಕಥಾವಸ್ತು, ತಂತ್ರ, ಪಾತ್ರ ವಿವೇಚನೆ, ಶೈಲಿ ಮುಂತಾದವುಗಳ ಬಗ್ಗೆ ಸಾಕಷ್ಟು ಸಂಶೋಧನಾತ್ಮಕ

ಅಧ್ಯಯನಗಳು ನಡೆದಿದ್ದರೂ ಅದು ಮುಗಿದಿಲ್ಲ, ಮುಗಿಯುವಂತದ್ದೂ ಅಲ್ಲ. ಸುಪ್ರಸಿದ್ಧ ಕತೆಗಾರರ ಕತೆಗಳೆಷ್ಟೋ ಇನ್ನೂ ಅಧ್ಯಯನದ ವ್ಯಾಪ್ತಿಗೆ ಬಂದಿಲ್ಲ. ಅದಲ್ಲದೆ ಎಲೆ ಮರೆಯ ಕಾಯಂತೆ ಇರುವ ಸಾಕಷ್ಟು ಉತ್ತಮ ಲೇಖಕರು ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಇದ್ದಾರೆ. ಉತ್ತಮ ಕತೆಗಳನ್ನು ರಚಿಸಿದ್ದಾರೆ. ಅವರನ್ನು ಗುರುತಿಸುವ ಪ್ರಯತ್ನದತ್ತ ಸಾಗಬೇಕಿದೆ. ಸಮಾಜಮುಖಿಯಾದ, ಬದುಕಿನ ವಾಸ್ತವತೆಯನ್ನು ಅದರ ಸೂಕ್ಷ್ಮ ಎಳೆಗಳನ್ನು ಬಿಚ್ಚಿ ನೋಡುವ ಪ್ರಯತ್ನ ಪೂರ್ಣಪ್ರಮಾಣದಲ್ಲಿ ಆಗಿಲ್ಲ. ಇಂತಹ ಸೂಕ್ಷ್ಮತೆಗಳ ಕಡೆಗೆ ಹೆಚ್ಚು ಗಮನನೀಡುವ ಉದ್ದೇಶದಿಂದ ಈ ಅಧ್ಯಯನ ಮಾಡುವ ಉತ್ಸಾಹವನ್ನು ತೋರಿದ್ದೇನೆ.

ಪ್ರಪಂಚದ ಹಲವಾರು ಕಥೆಗಳ ವಸ್ತುವಿನ ದೃಷ್ಟಿಯಲ್ಲಿ ವಿಚಾರ ಮಾಡುವುದಾದರೆ, ಪ್ರಾಚೀನ ಕಥೆಗಳಿಗೂ, ೨೦ನೇ ಶತಮಾನದಿಂದೀಚೆಗಿನ ಕಥೆಗಳಿಗೂ ಸೂಕ್ಷ್ಮ ಎಳೆಯ ಅಂತರವಿದೆ. ಹಿಂದಿನ ಕಥೆಗಳು ವ್ಯಕ್ತಿ ಕೇಂದ್ರಿತ ಹಾಗೂ ಕಾಲ್ಪನಿಕತೆಯುಳ್ಳ ಮನರಂಜನೆಯುಳ್ಳ ಕಥೆಗಳು. ಆದರೆ ಇಂದಿನ ಕಥೆಗಳು ವ್ಯಕ್ತಿಯ ಅಂತರಂಗದ ತುಡಿತಗಳುಳ್ಳ, ಜೀವನಾನುಭವದ, ಕಟು ವಾಸ್ತವದ ಕಥೆಗಳಾಗಿವೆ. ಈ ಎರಡು ಬಗೆಯ ವ್ಯತ್ಯಾಸಗಳಿಗೂ ಕಾಲಮಾನದ ಸಂಘರ್ಷ, ಸ್ವಾತಂತ್ರ್ಯ, ಸಮಾಜದ ನಡುವೆ ನಿಂತು ಯಾರನ್ನೂ ಹೊಗಳದೆ, ಯಾರನ್ನೂ ತೆಗಳದೆ, ಮಾನವೀಯ ಮೌಲ್ಯಗಳನ್ನು ತಿಳಿಸುವ ಕಥೆಗಳು. ಇಂತಹ ವಿಭಿನ್ನ ನೆಲೆಗಳುಳ್ಳ ಕಥೆಗಳು ವ್ಯಕ್ತಿ ಮತ್ತು ಸಮಾಜದ ಮೇಲೆ ಉಂಟುಮಾಡುವ ಪರಿಣಾಮಗಳು, ಆಗುವ ಬದಲಾವಣೆಗಳನ್ನು ಅಧ್ಯಯನದ ಮುಖಾಂತರ ಅರಿಯಬೇಕೆಂಬ ಆಸೆ ನನ್ನದು.

ಸಮಾಜದ ದಿನನಿತ್ಯ ಹೋರಾಟ ಇಂದು ಸಾಹಿತ್ಯದ ಬೆಂಬಲದೊಂದಿಗೆ ಹೆಚ್ಚು ಪರಿಣಾಮಕಾರಿಯಾದಂತಹ ಪ್ರಭಾವವನ್ನು ಬೀರುತ್ತಿದೆ. ಕಾಲದಿಂದ ಕಾಲಕ್ಕೆ ಸಾಹಿತ್ಯದ ಉದ್ದೇಶವು ಪರಿಸ್ಥಿತಿಗೆ ಅನುಗುಣವಾಗಿ ವ್ಯಕ್ತಿ ಮತ್ತು ಸಮಾಜಕ್ಕೆ ಅನುಕೂಲವೂ, ಅನಾನುಕೂಲವೂ ಆಗುತ್ತಾ ಬಂದಿದೆ. ಇಂತಹ ಸವಾಲುಗಳನ್ನರಿತ ಸಾಹಿತಿ ಸಾಮಾಜಿಕ ಬದ್ಧತೆಯ ಅರಿವುಳ್ಳ ಉತ್ತಮ ಕೃತಿಯ ರಚನೆಗೆ ಪ್ರಯತ್ನಿಸುತ್ತಾನೆ. ಇಂತಹ ಕೃತಿಗಳು ಸಾಮಾನ್ಯ ಓದುಗರ ಮನ ಮುಟ್ಟದೆ ಹೋಗಬಹುದು. ಆದರೆ ಒಬ್ಬ ಸಂಸ್ಕೃತಿ, ಸಮಾಜದ ಚಿಂತಕ ಒಪ್ಪುತ್ತಾನೆ. ಎಲ್ಲರನ್ನೂ ಈ ಚಿಂತನೆಯ ಎಡೆಗೆ ಎಳೆಯುವ ಬರಹಗಳ ಅವಶ್ಯಕತೆ ಇದೆ. ಅಂತಹ ಬರಹಗಳು ಬಂದಿರಲೂಬಹುದು. ಅಂತಹ ಕೃತಿಗಳನ್ನು ಒಬ್ಬ ಓದುಗ, ವಿಮರ್ಶಕ, ಸಂಶೋಧಕ ತನ್ನ ಸಮಗ್ರ ಓದಿನಿಂದ

ಸಮಾಜದ ಮುಂದಿಡುವ ಜವಾಬ್ದಾರಿ ಹೊತ್ತಿರುತ್ತಾನೆ. ಸಾಮಾಜಿಕ ಅರಿವನ್ನಿಟ್ಟು ಓದುವ ಪ್ರತಿಯೊಬ್ಬ ಓದುಗನೂ ಒಬ್ಬ ಸಂಶೋಧಕನೇ ಆಗುತ್ತಾನೆ.

ಇಪ್ಪತ್ತನೇ ಶತಮಾನದ ಸಾಹಿತ್ಯ ಚರಿತ್ರೆ ಅತ್ಯಂತ ವೈವಿಧ್ಯತೆ ಹಾಗೂ ವ್ಯಾಪಕತೆಯನ್ನು ಪಡೆದಿದೆ. ದೇಸೀಯ ಸಂಸ್ಕೃತಿಯ ಚಿಂತನೆಗೆ ದಿಕ್ಕು ತೋರಿ, ಎಲ್ಲೋ ಮರೆಯಾಗಿ ಯಾರಿಗೂ ಕಾಣದೆ ಇದ್ದ ಕಾಡುವಾಸಿಗಳ ಬದುಕೂ ಕೂಡ ನಮ್ಮ ಸಂಸ್ಕೃತಿ, ಕೆಳವರ್ಗದವರ ಬದುಕು ಕೂಡ ನಮ್ಮ ಸಂಸ್ಕೃತಿಯ ಭಾಗ ಎಂದು ಸಾಹಿತ್ಯಿಕ ರೂಪದಲ್ಲಿ ದಾಖಲಿಸಿದ ಕಾಲ. ಅದರಲ್ಲೂ ಕಥಾ ಸಾಹಿತ್ಯವಂತೂ ಅತಿ ಪರಿಣಾಮಕಾರಿಯಾಗಿ, ಸೂಕ್ಷ್ಮವಾಗಿ, ಪ್ರತಿಭಟನೆಯಾಗಿ, ನವೋದಯ, ನವ್ಯ, ಪ್ರಗತಿಶೀಲ, ದಲಿತ, ಬಂಡಾಯ ಪಂಥದ ಲೇಖಕರು ಬರೆದರು. ಕಥಾಸಾಹಿತ್ಯದ ಮೇಲೆ ಪಾಶ್ಚಾತ್ಯ ಪ್ರಭಾವ ಆರಂಭ ಕಾಲದಲ್ಲಿ ಆದರೂ ಸಹ ಸ್ವಂತಿಕೆಯಿಂದ ಸಣ್ಣ ಕಥೆಗಳನ್ನು ಬರೆದರೆನ್ನಬಹುದು. ಆದರೆ ಕಥೆಗಳ ಉದ್ದೇಶ ಬದಲಾದದ್ದು ಈ ಹಂತದಲ್ಲಿಯೇ ಅಲ್ಲಿಯವರೆಗೂ ಕೇವಲ ಮನರಂಜನೆಗಾಗಿ ಇದ್ದ ಕಥೆಗಳು ಒಂದು ಚಿಂತನೆಗೆ ಒಳಪಟ್ಟವು. ಅನೇಕ ಲೇಖಕರು ಜೀವನ ಏನೆಂದು ಬರೆದರೆ, ಕೆಲವರು ಜೀವನಾನುಭವಗಳನ್ನೇ ಕಥೆಯಾಗಿಸಿದರು, ಅಸ್ವಸ್ಥ ಸಮಾಜದ ಪ್ರತಿರೂಪವೇ ಕಥೆಯಾದವು, ನಿಜ ಜೀವನದಲ್ಲಾಗದ ಕೇವಲ ಮಾತಾಗಿರುವ ಆದರ್ಶಗಳೇ ಕಥೆಯಾದವು. ಸಂಸ್ಕೃತಿಯ ಪ್ರತಿಬಿಂಬವಾದ ದಾಂಪತ್ಯದ ಎಡರುತೊಡರುಗಳೇ ಕಥೆಯಾದವು. ಈ ರೀತಿಯ ಕಥೆಗಳು ಸಾಹಿತ್ಯಿಕ ಭಾಗವಾಗಿ ಸಮಾಜದ ಕನ್ನಡಿಯಾಗಿ ಪ್ರಸ್ತುತ ಕಾಲಮಾನದ ಜೊತೆ ಅಧ್ಯಯನ ನಡೆಸುವ ಉದ್ದೇಶ ಉತ್ತಮವೆನಿಸುತ್ತದೆ.

ಇದುವರೆಗೂ ಸಣ್ಣಕಥೆ ಅಥವಾ ಕಥಾಸಾಹಿತ್ಯ ಕುರಿತಂತೆ ನಡೆದಿರುವ ಪ್ರಮುಖ ಅಧ್ಯಯನಗಳೆಂದರೆ ೧) ಕನ್ನಡ ಕಥಾಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ ೨) ಶ್ರೀನಿವಾಸರ ಕಥಾಸಾಹಿತ್ಯ ೩) ನವೋದಯ ಕಥಾಸಾಹಿತ್ಯದಲ್ಲಿ ಗ್ರಾಮಸಮಾಜ ೪) ಆಧುನಿಕ ಸಣ್ಣ ಕಥೆಗಳಲ್ಲಿ ದಲಿತ ಜೀವನ ಹೀಗೆ ಕಥಾಸಾಹಿತ್ಯದ ಒಳಗೆ ವಿವಿಧ ರೀತಿಯ ಅಧ್ಯಯನಗಳು ನಡೆದಿವೆ. ಆದರೂ ಸಹ ಅಧ್ಯಯನ ವ್ಯಾಪ್ತಿಗೆ ಹೆಚ್ಚಾಗಿ ಒಳಪಡದೆ ಇರುವ ಸಾಕಷ್ಟು ಪ್ರಬುದ್ಧ ಕತೆಗಾರರು ಇದ್ದಾರೆ. ಅಂತಹ ಸರಳ, ಸಜ್ಜನಿಕೆಯ, ಸೃಜನಶೀಲ ಕತೆಗಾರರು ಹಾಗೂ ಕಾದಂಬರಿಕಾರರೂ ಆದ ನಾ.ಡಿಸೋಜ ಅವರೂ ಕೂಡ ಒಬ್ಬರು. ಸುಮಾರು ೫ ದಶಕಗಳಿಂದ ಬರವಣಿಗೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಮೂಲತಃ ಇವರು ವೃತ್ತಿಯಲ್ಲಿ ಲೋಕೋಪಯೋಗಿ

[illegible]

[illegible]

ಇಲಾಖೆಯಲ್ಲಿ ಗುಮಾಸ್ತರು. ಆದರೆ ಪ್ರವೃತ್ತಿಯಲ್ಲಿ ಸಾಹಿತ್ಯ ಬರವಣಿಗೆಯನ್ನು ಸ್ವೀಕರಿಸಿ ಕನ್ನಡ ಸಾಹಿತ್ಯ ಲೋಕಕ್ಕೆ ಸಾಕಷ್ಟು ಉತ್ತಮ ಕತೆಗಳು, ಕಾದಂಬರಿ, ನಾಟಕ, ಪ್ರಬಂಧಗಳು ಮೊದಲಾದವುಗಳನ್ನು ಕೊಡುಗೆಯಾಗಿ ನೀಡಿದ್ದಾರೆ. ಅದರಲ್ಲೂ ಮುಖ್ಯವಾಗಿ ಕಥಾಸಾಹಿತ್ಯಕ್ಕೆ ಇವರ ಕಾಣಿಕೆ ಅಪಾರವಾಗಿದ್ದು ಕನ್ನಡ ಸಾಹಿತ್ಯದಲ್ಲಿ ಅಪ್ರತಿಮ ಕತೆಗಾರರಾಗಿ ಮನ್ನಣೆ ಪಡೆದಿದ್ದಾರೆ. 'ಸಮಗ್ರ ಕಥೆಗಳು' ಎಂಬ ಶೀರ್ಷಿಕೆಯಡಿಯಲ್ಲಿ ಒಟ್ಟಾರೆಯಾಗಿ ೧೬೦ ಕತೆಗಳು ಮೂರು ಸಂಪುಟಗಳಲ್ಲಿ ಪ್ರಕಟಗೊಂಡಿವೆ. ಅವರ ಕತೆಗಳ ವಸ್ತುವಿನ ಹಂದರ ಬಹು ವಿಶಾಲವಾಗಿದೆ.

ಅಸ್ಪೃಶ್ಯತೆ, ಜಾತಿಪದ್ಧತಿ, ಶೋಷಣೆ, ಭ್ರಷ್ಟಾಚಾರ, ಬಡತನ, ಪರಿಸರ ಕಾಳಜಿ, ಕ್ರೈಸ್ತಧರ್ಮದ ಹಿನ್ನೆಲೆ, ಧರ್ಮ, ಸಂಸ್ಕೃತಿ, ನಂಬಿಕೆ, ಸಾಂಪ್ರದಾಯಿಕ ನಿಲುವುಗಳು, ಹದಗೆಟ್ಟ ರಾಜಕೀಯ ವ್ಯವಸ್ಥೆ ಇವೇ ಮೊದಲಾದ ವಿಷಯಗಳನ್ನು ವಸ್ತುವಾಗಿ ಉಳ್ಳ ಅವರ ಕತೆಗಳು ನೈಜ ಅನುಭವ ಹಾಗೂ ವಾಸ್ತವ ಸಂಗತಿಗಳನ್ನು ಹೆಚ್ಚಾಗಿ ಒಳಗೊಂಡಿರುವುದನ್ನು ಗಮನಿಸಬಹುದು. ಇವರ ಕಥಾಸಾಹಿತ್ಯವನ್ನಷ್ಟೇ ಪ್ರಸ್ತುತ ಎಂ.ಫಿಲ್‌ಗೆ ಸಾದರಪಡಿಸುವ ಪ್ರಬಂಧದ ವ್ಯಾಪ್ತಿ ಹಾಗೂ ಮಿತಿಗೆ ಅನುಗುಣವಾಗಿ ಆಯ್ಕೆ ಮಾಡಿಕೊಂಡು ನಾನು ಅಧ್ಯಯನಕ್ಕೆ ಒಳಪಡಿಸಿರುತ್ತೇನೆ. ಕ್ರಮಬದ್ಧವಾದ ಅಧ್ಯಯನದ ಅನುಕೂಲಕ್ಕಾಗಿ ಡಿಸೋಜ ಅವರ ಕತೆಗಳ ಕಥಾವಸ್ತು ಕುರಿತಾದ ವಿವೇಚನೆಯನ್ನು ಮೂರು ಮುಖ್ಯ ನೆಲೆಗಟ್ಟಿನಲ್ಲಿ ವಿವೇಚಿಸುವತ್ತ ಗಮನಹರಿಸಲಾಗುವುದು.

೧) ನಾ.ಡಿಸೋಜರ ಕತೆಗಳಲ್ಲಿ ಸಾಮಾಜಿಕ-ಸಾಂಸ್ಕೃತಿಕ ನೆಲೆಗಟ್ಟಿನ ಕತೆಗಳ ವಿವೇಚನೆ.

೨) ನಾ.ಡಿಸೋಜರ ಕತೆಗಳಲ್ಲಿ ಕ್ರೈಸ್ತಧರ್ಮದ ಹಿನ್ನೆಲೆಯ ಕತೆಗಳ ವಸ್ತುವಿವೇಚನೆ.

೩) ನಾ.ಡಿಸೋಜರ ಕತೆಗಳಲ್ಲಿ ಪರಿಸರ ಸಂಬಂಧಿ ಕಥಾವಸ್ತುವಿನ ವಿವೇಚನೆ.

ಮೊದಲ ಅಧ್ಯಾಯವಾದ 'ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಕನ್ನಡ ಕಥಾಸಾಹಿತ್ಯದ ಸ್ವರೂಪ'ದಲ್ಲಿ ಪ್ರಸ್ತುತ ಅಧ್ಯಯನಗಳ ಹೆಜ್ಜೆಯನ್ನು, ಈ ಅಧ್ಯಯನದ ಉದ್ದೇಶ, ವಿಷಯವ್ಯಾಪ್ತಿ ಹಾಗೂ ಕನ್ನಡ ಕಥಾಸಾಹಿತ್ಯ ಪರಂಪರೆಯ ಪ್ರಾರಂಭದ ಹಂತದಿಂದ ಯಾವ ಯಾವ ಪಂಥಗಳು ಬೆಳೆಸಿಕೊಂಡು ಬಂದಿವೆ, ಅದರ ಒಟ್ಟಾರೆ ಸ್ವರೂಪವನ್ನು ಹೇಳುತ್ತಾ, ಸಣ್ಣಕತೆಗಳ ಇಂದಿನ ಪ್ರಭಾವವನ್ನು ತಿಳಿಸಿಕೊಡಲಾಗಿದೆ.

[illegible]

'ನಾ.ಡಿಸೋಜ ಅವರ : ಬದುಕು – ಬರಹ' ಎರಡನೇ ಅಧ್ಯಾಯವಾಗಿದೆ. ಇದರಲ್ಲಿ ಕತೆಗಾರರ ಬಾಲ್ಯದಿಂದ ಇಂದಿನವರೆಗಿನ ಜೀವನ, ಕುಟುಂಬ, ಶೈಕ್ಷಣಿಕ ಹಿನ್ನೆಲೆ, ವೃತ್ತಿಜೀವನ, ಸಾಹಿತ್ಯಕ ಕೊಡುಗೆಗಳು ಹಾಗೂ ವ್ಯಕ್ತಿತ್ವದ ಕುರಿತಾಗಿ ಪರಿಪೂರ್ಣ ವಿಷಯವನ್ನು ತಿಳಿಸಿದ್ದೇನೆ.

'ನಾ ಡಿಸೋಜರ ಕತೆಗಳಲ್ಲಿ ಸಾಮಾಜಿಕ–ಸಾಂಸ್ಕೃತಿಕ ನೆಲೆಗಟ್ಟಿನ ಕತೆಗಳ ವಿವೇಚನೆ' ಮೂರನೇ ಅಧ್ಯಾಯವಾಗಿದ್ದು ಸಾಮಾಜಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಕತೆಗಳನ್ನು ವಿವೇಚಿಸಿದ್ದು, ವ್ಯವಸ್ಥೆಯ ಸದ್ಯದ ಪರಿಸ್ಥಿತಿಗಳೊಡನೆ ಹೋಲಿಸಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ಡಿಸೋಜರ ಕತೆಗಳಲ್ಲಿ ಕ್ರೈಸ್ತಧರ್ಮದ ಹಿನ್ನೆಲೆಯ ಕತೆಗಳ ವಸ್ತು ವಿವೇಚನೆ ಮಾಡಲಾಗಿದ್ದು ವಿಶಾಲ ದೃಷ್ಟಿಕೋನದಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

'ನಾ ಡಿಸೋಜರ ಕತೆಗಳಲ್ಲಿ ಪರಿಸರ ಸಂಬಂಧಿ ಕಥಾವಸ್ತುವಿನ ವಿವೇಚನೆ' ಐದನೇ ಅಧ್ಯಾಯವಾಗಿದ್ದು ಮುಳುಗಡೆ, ನದಿ, ಕಡಲು, ಕಾಡು ಸೇರಿದಂತೆ ವಿಶೇಷವಾಗಿ ಮಲೆನಾಡು, ಕರಾವಳಿಗೆ ಅನ್ವಯವಾಗುವ ಪರಿಸರದ ಅಂಶಗಳ ವಿವೇಚನೆ ಮಾಡಲಾಗಿದೆ.

ಒಟ್ಟಾರೆ ಅಧ್ಯಯನ ಏಕಮಾನವಾಗದೆ ಬಹುಮುಖವಾಗಿ ಎಲ್ಲೂ ನಿಲ್ಲದೆ ಹರಿವ ನೀರಾಗುವಂತೆ ಎಚ್ಚರವಹಿಸಲಾಗಿದೆ. ಈ ಹಿನ್ನೆಲೆಯಲ್ಲಿ ನಿಬಂಧಕ್ಕೆ ತನ್ನದೇ ಆದ ಸಾಮಾಜಿಕ ಮೌಲ್ಯ ಸಿಗುವಂತಾಗಲಿ. ಇಂತಹ ಬದುಕಿನ ಮೌಲ್ಯಗಳ ಕಡೆ ಹೆಚ್ಚು ಗಮನಕೊಡುವ ಆಶಯವೇ ಈ ಅಧ್ಯಯನವಾಗಿದೆ.

'ಕನ್ನಡ ಕಥಾಸಾಹಿತ್ಯದ ಸ್ವರೂಪ'

ಸಾಹಿತ್ಯದೇವಿಯ ವಿವಿಧ ರೂಪಗಳಲ್ಲಿ ಸಣ್ಣಕತೆಗಳದೂ ಒಂದು ವಿಶೇಷರೂಪ. ಯಾವುದೇ ಒಂದು ವಿಚಾರವನ್ನಾಗಲಿ ಜನತೆಯಲ್ಲಿ ಹರಡುವುದಕ್ಕೆ ಸಣ್ಣಕಥೆಯ ಸಾಹಿತ್ಯರೂಪ ಉತ್ತಮ ವಾಹಕವಾಗಿ ನಿಲ್ಲಬಹುದು. ಸಾಹಿತ್ಯ ಪ್ರಕಾರಗಳಲ್ಲಿ ಸಣ್ಣಕತೆ ಪ್ರಾಚೀನವಾದುದು. ಇದರ ಮೂಲವನ್ನು ಮೌಖಿಕ ಪರಂಪರೆಯಲ್ಲಿ ಕಾಣಬಹುದಾಗಿದೆ. ಅಕ್ಷರ ವಿದ್ಯೆಯಿಲ್ಲದ ಜನರೂ ಕೂಡ ಕಟ್ಟಿ ಹಾಡಿರುವ ಗೀತೆಗಳು, ಕಥೆಗಳು ಎಲ್ಲಾ ಭಾಷೆಗಳಲ್ಲಿಯೂ ಕಂಡುಬರುತ್ತದೆ. ಆದ್ದರಿಂದಲೇ ಜಾನಪದ ಸಾಹಿತ್ಯದ ಒಂದು ಪ್ರಕಾರವಾಗಿಯೂ ಸಣ್ಣಕತೆಗಳನ್ನು ಗುರುತಿಸಬಹುದು. ಪ್ರಾಚೀನ

ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತದಲ್ಲಿನ ಉಪಕಥೆಗಳು, ಪಂಚತಂತ್ರ, ಕಥಾಸರಿಸ್ಸಾಗರ, ಅರೇಬಿಯನ್ ನೈಟ್ಸ್ ಕನ್ನಡದ ಪ್ರಕಾರಕ್ಕೆ ಉತ್ತಮ ಉದಾಹರಣೆಗಳಾಗಿವೆ. ಮನುಷ್ಯ ಹುಟ್ಟಿದಂದಿನಿಂದಲೂ ಜೊತೆಜೊತೆಯಲ್ಲಿಯೇ ಕಥೆಗಳೂ, ಹುಟ್ಟಿಬಂದವು. ಹೀಗೆ ಒಬ್ಬರಿಂದ ಇನ್ನೊಬ್ಬರಿಗೆ ಸಾಗುತ್ತಿದ್ದ ಕಥೆಯು ಕಾಲ–ದೇಶ–ಪರಿಸರ ಹಾಗೂ ಅವರವರ ಮಾತಿನ ಕಲ್ಪನೆಗಳಿಗನುಸಾರವಾಗಿ ಬದಲಾಗುತ್ತಾ ಬೆಳೆಯುತ್ತಾ ಬಂದಿವೆ.

ಪ್ರಾಚೀನ ಕಥೆಗಳಿಗೂ ಇಂದಿನ ಕಥೆಗಳಿಗೂ ಸ್ವರೂಪದಲ್ಲಿ ಸಾಕಷ್ಟು ಬದಲಾವಣೆಗಳಿವೆ. "ತಾರ್ಕಿಕವಾಗಿ ಆಲೋಚಿಸಿದರೆ ಅವು ಸಣ್ಣಕತೆಗಳಂತೆ ಮನುಷ್ಯ ಕೇಂದ್ರಿತ ನೆಲೆಯುಳ್ಳವಲ್ಲ ; ಒಂದು ಬಗೆಯ ಭ್ರಮಾತ್ಮಕ ಕಲ್ಪನೆಗಳು".[೧] ಆದರೆ ಆಧುನಿಕ ಸಣ್ಣಕಥೆಗಳು ಅವುಗಳಿಗಿಂತ ತೀರಾಭಿನ್ನ ನೆಲೆಯುಳ್ಳವು. ವಸ್ತು, ಶೈಲಿ, ನಿರೂಪಣೆಯೂ ಕೂಡ ಬೇರೆಯಾಗಿದೆ ೨೦ನೇ ಶತಮಾನದ ಸಣ್ಣಕತೆಗಳು. ಪ್ರಾಚೀನ ಕಾಲದ ಕಥೆಗಳ ಕಸಿ ಮಾಡಿದ ಹೊಸ ಸೃಷ್ಟಿಯಾಗಿ ನಮ್ಮ ಮುಂದಿವೆ. ಅತ್ಯಂತ ಜನಪ್ರಿಯತೆಯನ್ನು ಪಡೆದಿವೆ.

ಕಾದಂಬರಿಯಂತೆ ಪ್ರಾಥಮಿಕ ಹಂತದಲ್ಲಿ ಯಶಸ್ಸು ಕಾಣದ ಸಣ್ಣಕಥೆ ನಂತರದ ದಿನಗಳಲ್ಲಿ ನೆಲೆಯೂರಿತು. ಹೊಸ ಪ್ರಕಾರದ ಯಾವುದೇ ಸಾಹಿತ್ಯ ಓದುಗರನ್ನು ಸೆಳೆಯುವಲ್ಲಿ ಸೋಲುತ್ತದೆ. ಪಾಶ್ಚಾತ್ಯ ಕಾದಂಬರಿಕಾರರಾದ ಡಿಕ್ಸನ್, ಸ್ಟೀಪನ್‌ಸನ್ ೧೯ನೇ ಶತಮಾನದಲ್ಲೆ ಸಣ್ಣಕಥೆಗಳನ್ನು ಬರೆದರಾದರೂ ಅವರ ಕಾದಂಬರಿಗೆ ಸಿಕ್ಕ ಮಾನ್ಯತೆ ಸಣ್ಣಕಥೆಗಳಿಗೆ ಸಿಗಲಿಲ್ಲ. ನಂತರ ಸಣ್ಣಕಥೆಗಳನ್ನು ಬರೆದೂ ಕೂಡ ಯಶಸ್ವಿಯಾದವರೆಂದರೆ ಅಮೆರಿಕಾದ 'ಎಡ್ಗರ್ ಆಲನ್ ಪೊ, ಓ ಹೆನ್ರಿ, ಇಂಗ್ಲೆಂಡಿನ ಅರ್ನಾಲ್ಡ್ ಬೆನೆಟ್, ಸಾಮರ್ ಸೆಟ್‌ಮಾಮ್, ಥಾಮಸ್ ಹಾಡಿಕ್ ಪ್ರಮುಖರು. ಆದರೂ ಇಂಗ್ಲಿಷ್ ಸಾಹಿತ್ಯದ ಯಾವ ಇತಿಹಾಸದಲ್ಲೂ ಸಣ್ಣಕಥೆಗೆ ಪ್ರತ್ಯೇಕ ಸ್ಥಾನ ಸಿಕ್ಕಿಲ್ಲ.

ಸಣ್ಣಕಥೆ ಇಂದಿಗೂ ಸಾಹಿತ್ಯ ವಿಮರ್ಶೆಯಲ್ಲಿ ನಿರ್ಲಕ್ಷ್ಯಕ್ಕೆ ಒಳಗಾದ ಸಾಹಿತ್ಯ ಪ್ರಕಾರವಾಗಿ ಉಳಿದಿದೆ. ಸಣ್ಣ ಕಥೆಯನ್ನು ಒಂದು ವಿಶಿಷ್ಟ ಸಾಹಿತ್ಯ ಪ್ರಕಾರವಾಗಿ ಗಂಭೀರವೆಂದು ತೆಗೆದುಕೊಂಡು, ಅದರಲ್ಲೂ ವಿಶೇಷವಾಗಿ ಕಾದಂಬರಿಗಿಂತ ಹೇಗೆ ಭಿನ್ನ ಎಂದು ಗುರುತಿಸುವ ಅದರ ವಿಶಿಷ್ಟ ಸಾಧ್ಯತೆಗಳನ್ನು ಎತ್ತಿತೋರಿಸುವ ಪ್ರತ್ಯೇಕ ಸಾಹಿತ್ಯ ಮೀಮಾಂಸೆ ಬೆಳೆದಿಲ್ಲ. ಸದ್ಯಕ್ಕೆ ಕಾದಂಬರಿ, ವಿಮರ್ಶೆಗೆ ಬಳಸುವ

ಮಾನದಂಡಗಳನ್ನು ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ಸಣ್ಣ ಕಥೆಯ ವಿಮರ್ಶೆಗೂ ಬಳಸಲಾಗುತ್ತಿದೆ.

ಕಾದಂಬರಿ ಮತ್ತು ಸಣ್ಣಕಥೆಗಳೆರಡರ ನಡುವೆ ಮೇಲುನೋಟಕ್ಕೆ ಗಾತ್ರದಲ್ಲಿಯೇ ಭಿನ್ನತೆಯನ್ನು ಗುರುತಿಸಬಹುದು. ಆದರೆ ವಸ್ತು, ಕಥೆ, ಜೀವನಸೃಷ್ಟಿ, ಸಂಭಾಷಣೆ ನಿರೂಪಣೆ, ದೃಷ್ಟಿಕೋನ, ಓದಿಸಿಕೊಳ್ಳುವ ಸಮಯ, ವಿಚಾರದ ಆಳ ಎರಡರಲ್ಲೂ ಭಿನ್ನತೆ ಇದ್ದರೂ ಅವೆರಡೂ ಒಂದೇ ಅಲ್ಲ. 'ಸಣ್ಣಕಥೆ ಕಾದಂಬರಿಯ ಸಂಕ್ಷಿಪ್ತ ರೂಪ' ಎಂಬ ಮಾರ್ಕ್ ಶೋರರ್ ಹೇಳಿಕೆ ಕಾದಂಬರಿ ಮತ್ತು ಸಣ್ಣಕಥೆಗಳ ನಡುವೆ ಇರುವ ವ್ಯತ್ಯಾಸವನ್ನು ತಿಳಿಸುತ್ತದೆ. ಆದರೆ ಕನ್ನಡದ 'ಸುಬ್ಬಣ್ಣ', 'ನಿಗೂಢ ಮನುಷ್ಯರು', 'ಒಡಲಾಳ'ದಂತಹ ಕೃತಿಗಳನ್ನು ಸಣ್ಣಕಥೆ ನೀಳ್ಗತೆ, ಕಾದಂಬರಿ ಈ ಮೂರರಲ್ಲಿ ಯಾವುದಕ್ಕೆ ನಿರ್ಧರಿಸಿ ಹೇಳುವ ಗೊಂದಲ ಇನ್ನೂ ಇದೆ. ಹಾಗಾಗಿ ಕಾದಂಬರಿ ಮತ್ತು ಸಣ್ಣಕಥೆಯ ಇಂತಹ ಹೋಲಿಕೆ ವ್ಯತ್ಯಾಸಗಳನ್ನಿಟ್ಟುಕೊಂಡು ನಾವು ಅವುಗಳ ಸ್ವರೂಪ, ವೈಶಿಷ್ಟ್ಯತೆಗಳನ್ನು ತಿಳಿಯಬೇಕಾಗಿದೆ.

ಪ್ರತಿಯೊಂದು ಸಾಹಿತ್ಯ ಪ್ರಕಾರವೂ ಗ್ರಹಿಸುವ ಜೀವನದ ಸ್ವರೂಪ ಭಿನ್ನವಾಗಿರುತ್ತದೆ ಮತ್ತು ಅದು ಜೀವನವನ್ನು ಗ್ರಹಿಸುವ ರೀತಿ ಕೂಡ ಅದಕ್ಕೆ ವಿಶೇಷವಾಗಿರುತ್ತದೆ. ತನ್ನನ್ನು ತಾನು ಓದಿಸಿಕೊಳ್ಳುವಾಗಲೇ ತಾನು ಇಂಥ ಪ್ರಕಾರಕ್ಕೆ ಸೇರಿದ್ದೆಂದು ಸಹಜವಾಗಿ ತಿಳಿಯುವಂತಿರುತ್ತದೆ. ಹಾಗಾಗಿ ಓದುಗರು ಆ ರೂಢಿಗಳನ್ನು ಸಹಜವೆಂದು ಒಪ್ಪಿಕೊಳ್ಳುವಂತೆ ಒತ್ತಾಯಿಸುತ್ತದೆ. ಒಂದು ಪ್ರಕಾರದಲ್ಲಿ ಸಹಜವೆನ್ನಿಸುವ ಸಂಗತಿ ಮತ್ತೊಂದರಲ್ಲಿ ಅಸಹಜವೆನ್ನಿಸುತ್ತದೆ. ಆದ್ದರಿಂದ ಸಣ್ಣಕಥೆ ಕುರಿತು ಅನೇಕ ವಿದ್ವಾಂಸರು ವಿವಿಧ ರೀತಿಯ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ.

ಪ್ರಸಿದ್ಧ ಕಥೆಗಾರ ಫ್ರ್ಯಾಂಕ್ ಓ ಕಾನರ್ "ಸಣ್ಣಕಥೆ ಮತ್ತು ಕಾದಂಬರಿಗಳ ನಡುವೆ ಇರುವ ಅಂತರ ಉದ್ದದ್ದಲ್ಲ"[1] ಎನ್ನುತ್ತಾನೆ. ಕಾದಂಬರಿ ಅನ್ವಯಿಕ ಕಥನಕಲೆ, ಸಣ್ಣಕಥೆ ಶುದ್ಧ ಕಥನ ಕಲೆ ಎಂದಿದ್ದಾನೆ. ಕಾದಂಬರಿ ತನ್ನೊಳಗೆ ಅನವಶ್ಯಕ ವಿವರಣೆಯನ್ನು ಒಳಗೊಂಡಿರಬಹುದು. ಆದರೆ ಸಣ್ಣಕಥೆಗೆ ಸಂಕ್ಷಿಪ್ತತೆಯ ಉಸಿರು. ಇದುವರೆಗೂ ಚಿಕ್ಕ ಪ್ರಕಾರವಾಗಿಯೇ ಸಣ್ಣಕಥೆ ಗುರುತಿಸಿಕೊಂಡುಬಂದಿದೆ. ಇದು ಸಂಕೀರ್ಣತೆ, ವಿವರಣೆ, ಸೂಕ್ಷ್ಮತೆ, ಜೀವನದ ಹರವು, ಗುಣ ಮೊದಲಾದ ಅವಶ್ಯಕ ಅಂಶಗಳನ್ನೊಳಗೊಂಡ ಕಾದಂಬರಿಯಂತೆ ಅಲ್ಲ. ಏಕೆಂದರೆ ಇದರ ವ್ಯಾಪ್ತಿಯೇ ಚಿಕ್ಕದು ಹಾಗಾಗಿ ಇದನ್ನು ವೈಯಕ್ತಿಕ ಕಲೆ ಎಂದೇ ಹೇಳಬಹುದು. ಈ ಹಿನ್ನೆಲೆಯಲ್ಲಿ ವ್ಯಕ್ತಿಗಳ ಅನುಭವ, ಅನಿಸಿಕೆ, ಬದಲಾವಣೆಯ ಮಿಂಚು, ಒಳನೋಟಗಳನ್ನು ಅತ್ಯಂತ

ಹರಿತವಾಗಿ ಹೇಳಬಲ್ಲದು. ಆದರೆ ಅದು ಪ್ರಕಟಿಸುವ ದರ್ಶನ ಸೀಮಿತ ಚೌಕಟ್ಟಿಗೆ ಒಳಪಟ್ಟಿದ್ದು. ಇಲ್ಲಿನ ಅರ್ಥ ಅಶಾಶ್ವತವೂ, ಪೂರ್ಣವಾಗಿರದೆ ಆಂಶಿಕವಾಗಿರುತ್ತದೆ. ಜೀವನದ ಒಂದು ಸಾಧ್ಯತೆಯಾಗಿರುತ್ತದೆ.

ಸಣ್ಣಕಥೆಯು ಜೀವನಕ್ಕೆ ಬೇಕಾದ ಸಣ್ಣ ಸಣ್ಣ ಅರಿವನ್ನಷ್ಟೇ ನೀಡಲು ಸಾಧ್ಯ. ಕಾದಂಬರಿಯಂತೆ ಬದುಕಿನ ನೈತಿಕ ಬದಲಾವಣೆಯನ್ನು ನೀಡಲು ಸಾಧ್ಯವಿಲ್ಲ. ಕಾದಂಬರಿ ಬದುಕಿನ ಎಲ್ಲ ಸ್ತರದ ಅರಿವನ್ನು ಹಂತಹಂತವಾಗಿ ನಿಧಾನಗತಿಯಲ್ಲಿ ವಿವರಿಸುತ್ತದೆ. ಇದು ಸಣ್ಣಕಥೆಯಲ್ಲಿ ಸಾಧ್ಯವಿಲ್ಲ. ಹಾಗಾಗಿ ಇವೆರಡೂ ಪ್ರಕಾರ ರಚನೆಯ ದೃಷ್ಟಿಯಿಂದ ಭಿನ್ನತೆ ಹೊಂದಿವೆ. "ಕಾದಂಬರಿಯ ಮುಖ್ಯ ಕಥಾವಸ್ತುವಿಗೆ ಸಮಾನಾಂತರವಾಗಿ ಇಲ್ಲವೆ ವೈದೃಶ್ಯವಾಗಿ ಉಪಕಥಾವಸ್ತು ಬೇಕಾಗುತ್ತದೆ. ಆದರೆ ಸಣ್ಣಕಥೆ ಈ ಗೊಡವೆಗೆ ಹೋಗದೆ ನೈತಿಕ ಸಾಕ್ಷಾತ್ಕಾರವನ್ನು ಒಂದು ಅನಿಸಿಕೆಯಂತೆ ತಟ್ಟನೆ ಮಿಂಚಿಸಿಬಿಡುತ್ತದೆ"[೩] ಇದರ ಶಕ್ತಿ ಇರುವುದು ಅನಿಸಿಕೆಯ ತೀವ್ರತೆಯಲ್ಲಿ ಅಭಿವ್ಯಕ್ತಿಯ ಸಂಕ್ಷಿಪ್ತತೆಯಲ್ಲಿ ಹೇಳಿ ಮುಗಿಸುತ್ತದೆ. "ಸಣ್ಣಕಥೆಯ ಪಾತ್ರಗಳು ಬದುಕಿನ ಬಲಿಪಶುಗಳು, ಅವಮಾನಿತರು, ನೊಂದವರು, ಹತಾಶರು ಮತ್ತು ಅನಾಥರು ಆಗಿರಬಹುದು; ಆಗಿರುತ್ತಾರೆ"[೪] ಕನ್ನಡ ಕಥಾ ಸಾಹಿತ್ಯದ ಮಟ್ಟಿಗಂತೂ ನಿಜ. ಉತ್ಸಾಹ, ಜೀವನ ಗೆಲ್ಲುವ ಛಲದ ಪಾತ್ರಗಳು ವಿರಳ ಎನ್ನಬಹುದು. ಕನ್ನಡದ ಅನೇಕ ಉತ್ತಮ ಕಥೆಗಳಲ್ಲಿ "ಪಾಶವೀ ಪರಿಸರದ ಹಿಡಿತದಲ್ಲಿ ಸಿಕ್ಕಿ ಸೋತ ಮಾನವೀಯ ಆಶೋತ್ತರಗಳ ಕಲಾತ್ಮಕ ಚಿತ್ರಣ"[೫] ಇರುವುದನ್ನು ಗಮನಿಸಬಹುದು.

ಸಣ್ಣಕಥೆಯೂ ಹೆಚ್ಚು ನಿರೂಪಣಾ ಶೈಲಿಯಿಂದ ಕೂಡಿದ್ದು, ಯಾವುದೇ ಅನುಭವದ ಕಂಡ ದೃಶ್ಯದ ಬಿಡಿ ಬಿಡಿ ಮುಖಗಳನ್ನು ಮಾತ್ರ ಹೇಳಲು ಸಾಧ್ಯ. ಜೀವನದ ವಿವಿಧ ಅನುಭವಗಳಾದ ಅಸಹಕಾರ, ಹಿಂಸೆ, ಬಂಧನ, ನೋವು, ಗೆಲುವು ಹೀಗೆ ಮೊದಲಾದ ಅಂಶಗಳನ್ನು ವಿಂಗಡಿಸಿ ಒಂದು ಬಾರಿಗೆ ಒಂದನಷ್ಟೇ ಹೇಳುತ್ತದೆ. ಹಾಗಾಗಿ ಸಣ್ಣ ಕಥೆಯನ್ನು ಪ್ರಕಾರವಾಗಿ ಆಯ್ದುಕೊಳ್ಳುವುದರಿಂದ, ಆತನ ಜೀವನದ ವಿಶಿಷ್ಟ ಆಯ್ಕೆ ಇದಾಗಿದೆ.

ಇಂತಹ ಸಣ್ಣಕಥೆಯು ಕನ್ನಡ ಸಾಹಿತ್ಯದಲ್ಲಿ ಹಲವಾರು ಹಂತಗಳಲ್ಲಿ ವ್ಯಕ್ತಿ ಮತ್ತು ಸಮಾಜಕ್ಕೂ ಅವಿನಾಭಾವ ಸಂಬಂಧವನ್ನು ಹೊಂದುತ್ತಾ ಸಾಗಿಬಂದಿರುವುದನ್ನು ಈ ಕೆಳಗಿನ ಹಂತಗಳಲ್ಲಿ ಗಮನಿಸಬಹುದು.

ಸ್ವಾತಂತ್ರ್ಯಪೂರ್ವದ ಕಥಾಸಾಹಿತ್ಯ:-

ಸ್ವಾತಂತ್ರ್ಯಪೂರ್ವದ ವಸಾಹತುಶಾಹಿ ಪ್ರಭುತ್ವದ ವಿರುದ್ಧ ತೀವ್ರವಾದ ವಿರೋಧದ ನಡುವೆ ಕನ್ನಡ ಸಾಹಿತ್ಯ ಸೃಷ್ಟಿಯಾಗತೊಡಗಿತು. ಇಪ್ಪತ್ತನೆಯ ಶತಮಾನದ ಆದಿಯಿಂದ ಸ್ವಾತಂತ್ರ್ಯ ಬರುವವರೆಗಿನ ಕಥಾಸಾಹಿತ್ಯ ಚಾರಿತ್ರಿಕ ಒತ್ತಡ, ಸಂಘರ್ಷಗಳ ಒತ್ತಡದಿಂದಲೇ ಸೃಷ್ಟಿಯಾಯಿತು. ಹಳಗನ್ನಡ ಸಾಹಿತ್ಯಕ್ಕೆ ತದ್ವಿರುದ್ಧವಾದ ಕಥಾ ಸಾಹಿತ್ಯ ಇದಲ್ಲ. ಹಾಗೆಯೇ ಕೇವಲ ಸ್ವಾತಂತ್ರ್ಯ ಅಪೇಕ್ಷೆಗೆ ಸೃಷ್ಟಿಯಾದ ನವೋದಯದ ಕಾವ್ಯಸಾಹಿತ್ಯವೂ ಅಲ್ಲ. "ಸ್ವಾತಂತ್ರ್ಯ ಪೂರ್ವ ಘಟ್ಟದ ಕಥಾಸಾಹಿತ್ಯ ಮುಖ್ಯವಾಗಿ ಮಾನವ ಮತ್ತು ಸಮಾಜ ಕೇಂದ್ರಿತವಾದದ್ದು. ಈ ಎರೆಡರ ಸಂಬಂಧಗಳ ವಾಸ್ತವ ವಿಶ್ಲೇಷಣೆ, ಆದರ್ಶ ಮಾನವನ ವ್ಯಕ್ತಿತ್ವದ ನಿರ್ಮಾಣ ಮತ್ತು ಮಾನವ ಸ್ವಭಾವದ ಮಜಲುಗಳ ಹುಡುಕಾಟವಾಗಿದೆ. ಈ ಶೋಧನೆ ಅಥವಾ ಅನ್ವೇಷಣೆಯೇ ಈ ಘಟ್ಟದ ಕಥಾ ಸಾಹಿತ್ಯದ ಮುಖ್ಯ ಕಾಳಜಿಯಾಗಿದೆ."[೬] ಹಾಗಾಗಿ ನವೋದಯದ ಲೇಖಕರ ಮೇಲಿದ್ದ ಹೊರೆ ವ್ಯಕ್ತಿಯನ್ನು ಸಮಾಜಕ್ಕೆ ಉಪಯುಕ್ತರನ್ನಾಗಿಸುವುದೇ ಆಗಿದೆ. ಜವಾಬ್ದಾರಿಗಳನ್ನು ಎಚ್ಚರಿಸುವುದೇ ಆಗಿತ್ತು. ಇದಕ್ಕೆ ಪೂರಕವೆಂಬಂತೆ ಕಥಾ ಸಾಹಿತ್ಯ ಬೆಳೆಯತೊಡಗಿತು.

ಬಿ.ಎಂ.ಶ್ರೀ ಅವರು ತಮ್ಮ ಭಾಷಣದಲ್ಲಿ "ಕಥಾಸಾಹಿತ್ಯವು ಬಹಳ ಪುರಾತನ ಕಾಲದಿಂದಲೂ ಇದೆ ಎಂದೂ, ಹದಿನಾರನೆಯ ಶತಮಾನದ ಹೊತ್ತಿಗೆ ಅದು ಒಂದು ನಿರ್ದಿಷ್ಟ ಸ್ವರೂಪವನ್ನು ಪಡೆಯಿತೆಂದೂ, ಸಣ್ಣಕಥೆ ಬರೆಯುವುದು ಬಹಳ ಕಷ್ಟದ ಕೆಲಸವೆಂದೂ, ಚಿನ್ನದ ಒಡವೆಗೆ ತೇಮಾನ ತೆಗೆದು ನಯಮಾಡಿದಂತೆ ಕುಸುರಿ ಕೆಲಸ ಮಾಡಬೇಕೆಂದೂ ಕಿರಿದರಲ್ಲಿ ಹಿರಿದಾದ ಭಾವ, ಜ್ಞಾನ, ಅನುಭವಗಳನ್ನು ತುಂಬಿ ಜೀವನಕ್ಕೆ ಬೆಳಕು ಬೀರುವುದು ಅದರ ವೈಶಿಷ್ಟ್ಯವೆಂದೂ, ಮೈಸೂರಿನಲ್ಲಿ ಶ್ರೀನಿವಾಸರು ಮೊಟ್ಟಮೊದಲು ಕತೆಗಳನ್ನು ಬರೆದು ಜನಕ್ಕೆ ಸವಿ ತೋರಿಸಿ ಮಾರ್ಗದರ್ಶಕರಾದರೆಂದು"[೭] ಅಭಿಪ್ರಾಯಪಟ್ಟಿದ್ದಾರೆ. ಎಲ್ಲವೂ ಸ್ಪಷ್ಟತೆಯಿಂದಲೇ ಕೂಡಿದ್ದು ಮಾಸ್ತಿಯವರನ್ನು ನೆನೆದದ್ದು ಸೂಕ್ತ. ಸಣ್ಣಕತೆ ಎಂದು ಮೊದಲ ಬಾರಿಗೆ ಬಳಸಿದವರು ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು. ಇವರ ಹಿಂದಿನ ಪಂಜೆ ಮಂಗೇಶರಾಯರ (೧೯೯೦) ಅವಧಿಯಲ್ಲಿ ಸಣ್ಣಕತೆಯನ್ನು ಚಿಕ್ಕಕತೆ ಎಂದು ಕರೆಯುತ್ತಿದ್ದರು.

ನವೋದಯ ಕಾಲದ ಪ್ರಮುಖ ಕಥೆಗಾರರಲ್ಲಿ ಕುವೆಂಪು, ಬೇಂದ್ರೆ, ಶಿವರಾಮ ಕಾರಂತ, ಆನಂದಕಂದ, ಎಂ.ವಿ. ಸೀತಾರಾಮಯ್ಯ ಅವರು ಪ್ರಮುಖರು.

[illegible]

ಇವರೆಲ್ಲರೂ ಮಾಸ್ತಿಯವರ ಸಮಕಾಲೀನರೇ ಆಗಿದ್ದಾರೆ. ಇವರು ಬೇಡ ಸಮಾಜದ ಎಲ್ಲ ಸ್ತರದ ಜನರ ಬದುಕನ್ನು ಆಧರಿಸಿ ಕತೆಗಳನ್ನು ಬರೆದರು. ಈ ಕತೆಗಾರರಿಗೆಲ್ಲ ಗಾಂಧೀಜಿ, ಅರವಿಂದ, ಪರಮಹಂಸ, ವಿವೇಕಾನಂದ, ನ್ಯೂಟನ್, ಡಾರ್ವಿನ್ ತತ್ವಶಾಸ್ತ್ರ ಮತ್ತು ಮಾನವತಾವಾದದ ಪ್ರಭಾವ ಬೀರಿತು. ಅಹಿಂಸೆಯೇ ಮಾನವಧರ್ಮ ಎಂಬ ಆದರ್ಶವನ್ನು ಇವರ ಕಥೆಗಳಲ್ಲಿ ಕಾಣುತ್ತೇವೆ.

ಪ್ರಮುಖವಾಗಿ ಮಾಸ್ತಿಯವರ 'ರಂಗನ ಮದುವೆ' ಮೊದಲ ಕತೆ. ಇದು ೧೯೧೦ರಲ್ಲಿ ಪತ್ರಿಕೆಗಳಲ್ಲಿ ಪ್ರಕಟಗೊಂಡು ಹೆಸರುಮಾಡಿತ್ತು. ಇವರ ಕಥೆಗಳಲ್ಲಿ ಕಲಾತ್ಮಕತೆ, ಆಳವಾದ ಜೀವನಾನುಭವ ಮತ್ತು ಸಾಮಾಜಿಕ ಪ್ರಜ್ಞೆಯೇ ಜೀವಾಳ, ಹೆಚ್ಚು ನಿರೂಪಣಾ ಶೈಲಿ ಕಂಡುಬರುತ್ತದೆ. ಮಾಸ್ತಿ ನಂತರ ಎಂ.ಆರ್.ಕೃಷ್ಣಶಾಸ್ತ್ರಿಗಳು, ಕೊರಡ್ಕಲ್ ಶ್ರೀನಿವಾಸರು ಸಮಕಾಲೀನ ಹಂತದಲ್ಲೆ ಕತೆಗಳನ್ನು ಬರೆದವರು. ಇವರ ಕತೆಗಳು ಹಿಂದೂ ಸಂಸ್ಕೃತಿಯ ಮೌಲ್ಯಗಳ ಚೌಕಟ್ಟಿನೊಳಗೆ ರೂಪುಗೊಂಡವು. ಆನಂದರೂ ಸಹ ಮಾಸ್ತಿ ಪ್ರಭಾವದಲ್ಲೇ ಬೆಳೆದವರು. ಇವರ ಕಥೆಗಳು ಸಾಂಸಾರಿಕವಾದವು. ಗಂಡ-ಹೆಂಡತಿಯರ ಬಾಂಧವ್ಯ ಕುರಿತು ಕುಟುಂಬದ ಮಹತ್ವ ತಿಳಿಸುತ್ತಿದ್ದವು. ಮಾಸ್ತಿ ನಂತರದ ತಲೆಮಾರಿನ ನವೋದಯ ಕತೆಗಾರರೆಂದರೆ ರಂ.ಶ್ರೀ.ಮುಗುಳಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಪು.ತಿ.ನರಸಿಂಹಚಾರ್, ಶ್ರೀರಂಗರು ಪ್ರಮುಖವಾದವರು. ಸ್ತ್ರೀ ಲೇಖಕಿಯರಲ್ಲಿ ಆರ್.ಕಲ್ಯಾಣಮ್ಮ, ಸರಸ್ವತಿಬಾಯಿ ರಾಜವಾಡೆ, ಇವರು ಸ್ತ್ರೀಯರ ತ್ಯಾಗ, ಆದರ್ಶ, ನೋವು – ಇವು ಅವರ ಕಥಾವಸ್ತು. ನವೋದಯದ ನಂತರದ ದಿನಗಳಲ್ಲೂ ಈ ಮಾರ್ಗದಲ್ಲಿ ನಡೆದ ತ್ರಿವೇಣಿ, ಕೊಡಗಿನ ಗೌರಮ್ಮ, ತಮ್ಮ ಸಣ್ಣಕತೆಗಳಲ್ಲಿ ಹೆಣ್ಣಿನ ಮನಸ್ಸಿನ ತುಮುಲಗಳನ್ನು ಚಿತ್ರಿಸಿದ್ದಾರೆ. ತ್ರಿವೇಣಿ ಅವರು ಮನೋವೈಜ್ಞಾನಿಕ ದೃಷ್ಟಿಕೋನದಿಂದ ಹೆಣ್ಣಿನ ನಡವಳಿಕೆ ಹಾಗೂ ಹೆಣ್ಣು ಹೆಣ್ಣಿಗೆ ಒಳಿತಿಲ್ಲ ಎಂಬುದನ್ನು ಕತೆ ರೂಪದಲ್ಲಿ ತೆರೆದಿಟ್ಟಿದ್ದಾರೆ. ಇವರ ಹಾದಿಯಲ್ಲೆ ಎಂ.ಕೆ.ಇಂದಿರಾ, ವಾಣಿ, ಶಾಂತಾದೇವಿ ಕಣವಿ ಇನ್ನೂ ಮುಂತಾದವರು ಸಾಗಿ ಬಂದು ಕಥಾ ಪರಂಪರೆಯನ್ನು ಬೆಳೆಸಿದರು.

ಪ್ರಗತಿಶೀಲ ಪಂಥ ನವೋದಯದ ಆದರ್ಶ, ಅಹಿಂಸೆಯನ್ನು ತ್ಯಜಿಸಿ, ದುರ್ಬಲರ, ಶೋಷಿತರ ಜೀವನವನ್ನು ಕತೆಗಳಲ್ಲಿ ತರುವ ಪ್ರಯತ್ನ ಮಾಡಿದರು. ಸಮೂಹ ಹೋರಾಟಕ್ಕೆ ಪೂರಕವಾದ ಕತೆಗಳೇ ಹೆಚ್ಚು ರಚನೆಗೊಂಡವು. ಮಾರ್ಕ್ಸ್ ವಾದವೇ ಬೆನ್ನೆಲುಬಾಗಿ ಪ್ರಗತಿಶೀಲ ಪಂಥ ಹುಟ್ಟಿಕೊಂಡಿತಾದರೂ ಯಶಸ್ವಿಯಾಗಲಿಲ್ಲ. ಪ್ರಗತಿಶೀಲ ಚಳುವಳಿಯ ಮುಂದಾಳತ್ವವನ್ನು ಅ.ನ.ಕೃಷ್ಣರಾಯರು ವಹಿಸಿಕೊಂಡರು.

ಇವರು ಕಾದಂಬರಿಕಾರರಾಗಿ ಹಾಗೂ 'ಮಿಂಚು' ಎಂಬ ಕಥಾಸಂಕಲನ ಕೂಡ ಪ್ರಕಟಿಸಿದ್ದಾರೆ. ಕಾದಂಬರಿಯೇ ಇವರ ಪ್ರಮುಖ ಸೃಜನಶೀಲ ಮಾಧ್ಯಮವಾಯಿತಾದರೂ ವಸ್ತು, ತಂತ್ರದ ದೃಷ್ಟಿಯಿಂದ ಪ್ರಮುಖವೆನಿಸುವ ಕತೆಗಳನ್ನು ಬರೆದರು. ತಾ.ರಾ.ಸುಬ್ಬರಾಯರು, ಬಸವರಾಜ ಕಟ್ಟಿಮನಿ, ನಿರಂಜನರು, ಉಳಿದ ಪ್ರಮುಖ ಕತೆಗಾರರು, ವಾಸ್ತವ ಬದುಕಿನ ಹೀನ ಕೃತ್ಯಗಳನ್ನು ಬಡತನ, ಶೋಷಣೆಯನ್ನು ಕತೆಗಳ ಮೂಲಕ ಪ್ರತಿಭಟಿಸಿದ್ದಾರೆ. ನಿರಂಜನರ ಕೊನೆಯ ಗಿರಾಕಿ ಕತೆ ಅತ್ಯಂತ ಪ್ರಭಾವ ಬೀರುವ ಕತೆಯಾಗಿದೆ. ಹೀಗಾಗಿ ಹೆಚ್ಚು ವೈಚಾರಿಕತೆಯಿಂದ ಇಲ್ಲಿನ ಕತೆಗಳು ಕಂಡುಬಂದರೂ ಪರಿಹಾರವೇನೂ ತಿಳಿಸದೇ ಹೋದದ್ದು ಈ ಪಂಥದ ಹಿನ್ನೆಡೆಯಾಗಿ ಕಂಡುಬರುತ್ತದೆ.

ನಂತರ ಬಂದಂತಹ ನವ್ಯ ಸಾಹಿತ್ಯ ನವೋದಯ ಮತ್ತು ಪ್ರಗತಿಶೀಲ ಪಂಥಗಳ ಹಾಗೆ ಸಾಮಾಜಿಕ ಸಮಸ್ಯೆಗಳು, ವ್ಯಕ್ತಿ ಮತ್ತು ಸಮಾಜದ ವೈರುಧ್ಯಗಳನ್ನು, ಬಡವರ, ಶೋಷಿತರ ಹೋರಾಟಕ್ಕೆ ಹೆಚ್ಚು ಒತ್ತು ಸಿಕ್ಕಿತಾದರೂ ನವ್ಯದವರು ವ್ಯಕ್ತಿಯ ಆಂತರಿಕ ಸಮಸ್ಯೆಗಳಿಗೆ ಸ್ಪಂದಿಸಿದರು. ದೈಹಿಕಕ್ಕಿಂತ ಮಾನಸಿಕ ಸಮಸ್ಯೆಯ ಕಡೆ ಹೆಚ್ಚು ಗಮನಕೊಟ್ಟರು. ಈ ಕಾರಣದಿಂದಲೇ ನವ್ಯ ಸಾಹಿತ್ಯದ ಸ್ವರೂಪ ಮನೋವೈಜ್ಞಾನಿಕದ ಕಡೆ ವಾಲಿತು. ಸ್ವಾತಂತ್ರ್ಯದ ನಂತರದ ಸಮಸ್ಯೆಗಳಾದ ಕೌಟುಂಬಿಕ ಸಮಸ್ಯೆ, ಪಾಶ್ಚಾತ್ಯ ಪ್ರಭಾವ, ವಾಸ್ತವದ ಚಿತ್ರಣ, ನಿರುದ್ಯೋಗ ಸಮಸ್ಯೆ, ಮಾನವನ ಆಂತರಿಕ ಆಸೆಗಳು, ಅಂತರಂಗ – ಬಹಿರಂಗಗಳ ತೆರೆದ ಮುಖ, ಹೀಗೆ ಸಣ್ಣಕಥೆಗೆ ವಸ್ತುವೈವಿಧ್ಯತೆಯಿಂದ ಅದರ ವಿಸ್ತೀರ್ಣ ದೊಡ್ಡದಾಯಿತು. ಪ್ರೇಮಕಾಮದ ನಡುವಿನ ನಿಗೂಢತೆಯೇ ಇದರ ಕತೆಗಳ ಸ್ಥಾಯಿಭಾವ ಉತ್ತಮ ನಿರೂಪಣೆಯಿಂದ ಆರಂಭವಾಗುವ ಕತೆಗಳು ಪರಿಣಾಮಕಾರಿಯಾದ ಅಂತ್ಯ, ಕುತೂಹಲವೇ ಇದರ ಕತೆಗಳ ಲಕ್ಷಣ. ಫ್ರಾಯ್ಡ್ ಯೂಂಗ್‌ರ ಪ್ರಭಾವಕ್ಕೆ ಒಳಗಾದ ಪ್ರಮುಖ ನವ್ಯಕತೆಗಾರರೆಂದರೆ, ಯು.ಆರ್.ಅನಂತಮೂರ್ತಿ, ಯಶವಂತ ಚಿತ್ತಾಲ, ಶಾಂತಿನಾಥ ದೇಸಾಯಿ, ಪಿ.ಲಂಕೇಶ್, ಬಿ.ಸಿ.ರಾಮಚಂದ್ರ ಶರ್ಮ, ಪೂರ್ಣಚಂದ್ರ ತೇಜಸ್ವಿ, ದೇವನೂರು ಮಹಾದೇವ, ಪ್ರಮುಖರು.

ಪ್ರಮುಖವಾಗಿ ನವ್ಯಲೇಖಕರೆಲ್ಲರೂ ಮನುಷ್ಯನ ಮನಸ್ಸಿನ ಜಾಗೃತ ಹಾಗೂ ಸುಪ್ತಸ್ಥರಗಳಿದ್ದು, ಸುಪ್ತಚಿತ್ತದಲ್ಲಿ ನಮಗೆ ಅಪ್ರಿಯವಾದ ಆಸೆ, ಅನುಭವಗಳೆಷ್ಟೋ ಮುಳ್ಳಿನಂತೆ ಚುಚ್ಚಿಕೊಂಡಿದೆ ಎಂಬುದನ್ನು ಇವರು ತೆರೆದು ತೋರಿಸಿದರು. ಅನಂತಮೂರ್ತಿಯವರ 'ಕಾರ್ತಿಕ', ಘಟಶ್ರಾದ್ಧಗಳಲ್ಲಿ ಮಾನಸಿಕ ತೊಳಲಾಟವಿದೆ.

[illegible]

ಚಿತ್ತಾಲರ 'ಕತೆಯಾದಳು ಹುಡುಗಿ', 'ಸಿದ್ಧಾರ್ಥ'ಗಳಲ್ಲಿ ಮನೋವಿಶ್ಲೇಷಣೆ, ಸಂಕೇತಗಳ ಸಮರ್ಥ ಪ್ರಯೋಗವಿದೆ. ಮರಾಠಿಯಿಂದ ಸ್ಫೂರ್ತಿ ಪಡೆದ ದೇಸಾಯಿಯವರ 'ಮಂಜುಗೆಡ್ಡೆ', 'ಕ್ಷಿತಿಜ'ಗಳಲ್ಲಿ ಕಾಮ ಮತ್ತು ಮೂಲಭೂತ ಅವಶ್ಯಕತೆಗಳೇ ಕತೆಯಾಗಿವೆ. ಪಿ.ಲಂಕೇಶ್ 'ರೊಟ್ಟಿ', 'ನಿವೃತ್ತರು' ಕಥಾಸಂಕಲನಗಳಲ್ಲಿ ಮನುಷ್ಯನ ಸಣ್ಣತನ, ದುಷ್ಟ ನಡವಳಿಕೆಗಳನ್ನು ತೆರೆದು ತೋರಿಸಿದ್ದಾರೆ. ಬಿ.ಸಿ.ರಾಮಚಂದ್ರಶರ್ಮ ಹಟದಿಂದಲೇ ನವ್ಯತೆಯನ್ನು ಕನ್ನಡಕ್ಕೆ ತಂದವರು. 'ಸೆರಗಿನ ಕೆಂಡ', 'ನಗು' ಉತ್ತಮ ನವ್ಯಕತೆಗಳನ್ನು ತಮ್ಮ ತಂತ್ರ, ಭಾಷಾ ಶೈಲಿಯ ಮೂಲಕ ನೀಡಿದ್ದಾರೆ.

ಜಿ.ಎಸ್.ಸದಾಶಿವ ಅವರು ಮತ್ತೊಬ್ಬ ಪ್ರಮುಖ ನವ್ಯ ಕಥೆಗಾರ. ಇವರು ಕಥೆಗಳಲ್ಲಿ ಮನುಷ್ಯನ ಸಾಚಾ ಮೌಲ್ಯಗಳನ್ನು ಶೋಧಿಸುವ ಪ್ರಯತ್ನ ಮಾಡಿದ್ದಾರೆ. ನವ್ಯ ಮಾರ್ಗದಲ್ಲೇ ಬಂದರೂ ಸಹ ಭಿನ್ನಮಾರ್ಗದಲ್ಲಿ ನಡೆದ ಪೂರ್ಣಚಂದ್ರ ತೇಜಸ್ವಿ, ತಂದೆಯ ಹಾಗೆ ಪ್ರಕೃತಿಯ ಕೂಸು, ಇವರ 'ಅಬಚೂರಿನ ಪೋಸ್ಟಾಫೀಸು', 'ತಬರನ ಕಥೆ', 'ಹುಲಿಯೂರಿನ ಸರಹದ್ದು' ಮುಂತಾದ ಉತ್ತಮ ಕತೆಗಳನ್ನು ನೀಡಿದ್ದಾರೆ.

ಉಳಿದ ನವ್ಯ ತಲೆಮಾರಿನ ಲೇಖಕರು ಎಂದರೆ ಸುಮತೀಂದ್ರ ನಾಡಿಗ, ಗಿರಡ್ಡಿ ಗೋವಿಂದರಾಜು, ಟಿ.ಜಿ.ರಾಘವ, ಮುಂದಿನ ಕಿರಿಯ ತಲೆಮಾರಿನವರಲ್ಲಿ ಶ್ರೀ ಕೃಷ್ಣ ಆಲನಹಳ್ಳಿ, ರಾಘವೇಂದ್ರ ಖಾಸನೀಸ, ರಾಜಶೇಖರ ನೀರಮಾನ್ವಿ, ರಾಮಚಂದ್ರದೇವ ಮುಂತಾದವರು ಹಳ್ಳಿ ಹಾಗೂ ನಗರಗಳ ನಡುವೆ ಸಿಲುಕಿದ ವ್ಯಕ್ತಿಗಳ ಮಾನಸಿಕ ತೊಳಲಾಟವನ್ನು ತಮ್ಮ ತಮ್ಮ ಕತೆಗಳಲ್ಲಿ ತಂದಿದ್ದಾರೆ.

ಹೀಗೆ ಬೆಳೆದು ಬಂದ ನವ್ಯ ಸಣ್ಣಕತೆಗಳ ಮತ್ತೊಂದು ವೈಶಿಷ್ಟ್ಯವೆಂದರೆ ಮಹಿಳೆಯರ ಲೋಕದ ಅನುಭವಗಳು ಮಹಿಳೆಯರಿಂದಲೇ ಕತೆಗಳಲ್ಲಿ ರೂಪ ಪಡೆದಿದ್ದು, ಪುರುಷರು ಎಷ್ಟೇ ಬರೆದರೂ ಸಹಜ ಅನುಭವ ದೂರದ ಮಾತೇ. ಈ ಕಾಲಕ್ಕೆ ಮಹಿಳೆಯರು ಬರೆಯತೊಡಗಿದ ಮೇಲೆ ಅವರ ಸುಖ-ದುಃಖ, ನೋವು - ನಲಿವು, ತಾಜಾತನದ ಅನುಭವವನ್ನು ಜೀವಂತವಾಗಿ ಹಿಡಿದು ಕತೆಯಾಗಿಸುವ ಪ್ರಯತ್ನಮಾಡಿದರು.

ನವ್ಯದ ನಂತರ ಬಂದ ದಲಿತ ಬಂಡಾಯದ ಲೇಖಕರು ಸಣ್ಣಕಥಾ ಪ್ರಕಾರವನ್ನು ತುಂಬಾ ಶಕ್ತಿಯುತವಾಗಿ ಬೆಳೆಸಿದರು. ಇಲ್ಲಿನ ಕಥೆಗಳಲ್ಲಿ ಸ್ವಂತ ಅನುಭವ ಮತ್ತು ಲೋಕದ ಅನುಭವಗಳೆರಡೂ ಕಥೆಗಳಲ್ಲಿ ಅಭಿವ್ಯಕ್ತಗೊಂಡಿದೆ. ಪ್ರಮುಖವಾಗಿ ಸಮಾಜದೊಳಗಿನ ಲಿಂಗಭೇದ, ಜಾತಿಭೇದ, ಅಸ್ಪೃಶ್ಯತೆಯ ವಿರುದ್ಧ ಹೋರಾಡುವುದಾಗಿದೆ. ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ

ಶೋಷಣೆಗೆ ಒಳಗಾದವರ ಪರವಾಗಿದ್ದವರು, ಅವರ ಬದುಕನ್ನು ಸಾಹಿತ್ಯದಲ್ಲಿ ತೆರೆದಿಡುವ, ಶೋಷಿತ ವರ್ಗವನ್ನು ಪ್ರಶ್ನಿಸುವ ಕಥೆಗಳು, ಕಾವ್ಯಗಳು, ಕಾದಂಬರಿಗಳನ್ನು ಬರೆದರು. ಪ್ರಮುಖ ಕಥೆಗಳೆಂದರೆ ಕುವೆಂಪು ಅವರ 'ಸಾಲದ ಮಗು', ಕೊರಡ್ಕಲ್ ಶ್ರೀನಿವಾಸರಾಯರ 'ದನಿಯರ ಸತ್ಯನಾರಾಯಣ', ಭಾರತೀಪ್ರಿಯರ 'ಮೋಚಿ', ಮಾಸ್ತಿಯವರ 'ವೆಂಕಟಿಗನ ಹೆಂಡತಿ', ಬಸವರಾಜ ಕಟ್ಟೀಮನಿಯವರ 'ಜೀವನ ಕಲೆ', ನಂತರ ನವ್ಯದಿಂದ ಬಿಡಿಸಿಕೊಂಡ ಪೂರ್ಣಚಂದ್ರ ತೇಜಸ್ವಿಯವರೂ ಕೂಡ ದಲಿತ ಲೇಖಕರೊಡನೆ ದನಿಗೂಡಿಸಿದರು. ದೇವನೂರು ಮಹದೇವ ಅವರು ಮೇಲ್ವರ್ಗದವರ ನಡವಳಿಕೆ ಶೋಷಣೆಯ ರೀತಿನೀತಿಗಳನ್ನು ತಮ್ಮ ಕಥೆಗಳಲ್ಲಿ ಚಿತ್ರಿಸಿದರು. ಪ್ರಮುಖವಾಗಿ ಹಸಿವು, ಲೈಂಗಿಕತೆ, ಬಡತನ ಒಂದಕ್ಕೊಂದು ಎಂಬಂತೆ ಹೇಗೆ ಪೂರಕವಾಗಿ ಶೋಷಣೆಗೆ ಕಾರಣ ಎಂಬ ಅಂಶಗಳು ಇಲ್ಲಿನ ಕಥೆಗಳಲ್ಲಿ ಕಂಡುಬರುತ್ತವೆ.

ನಂತರದ ಕಾಲವೇ ನವ್ಯೋತ್ತರದ ಕಾಲ. ಕಳೆದ ೨೫ ವರ್ಷಗಳಿಂದ ಸಾಹಿತ್ಯ ವಿಫುಲವಾಗಿ ಬೆಳೆದಿದೆ. ಕಥಾಸಾಹಿತ್ಯವೂ ಜೊತೆಜೊತೆಯಲ್ಲಿಯೇ ಪ್ರಮುಖ ಪ್ರಕಾರವಾಗಿಯೇ ಇಂದು ಕಾಣುತ್ತದೆ. ಇತ್ತೀಚಿನ ದಿನಗಳಲ್ಲಿ ಮುಸ್ಲಿಂ ಲೇಖಕರು, ಲೇಖಕಿಯರು ಬರೆದಿರುವ ಸಾಹಿತ್ಯವೂ ಸಹ ಗಮನಸೆಳೆಯುತ್ತವೆ. ಇದರಿಂದಾಗಿ ಕಥಾಸಾಹಿತ್ಯದ ಆಳ ಅಗಲ ಹೆಚ್ಚಾಗಿದೆ ಎಂದೇ ಹೇಳಬಹುದು. "ಮುಸ್ಲಿಂ ಲೇಖಕರು ತಮ್ಮ ವಿಶಿಷ್ಟವಾದ ಅನುಭವ ಹಾಗೂ ಗದ್ಯದ ಮೂಲಕ ಕನ್ನಡ ಕಥಾಸಾಹಿತ್ಯಕ್ಕೆ ತಮ್ಮದೇ ಆದ ವಿಶಿಷ್ಟ ಅರ್ಥವನ್ನು ಸೇರಿಸಿದ್ದಾರೆ. ಇವರಲ್ಲಿ ಮುಖ್ಯವಾಗಿ ಸಾರಾ ಅಬೂಬಕರ್, ಬೋಳುವಾರು ಮಹಮದ್ ಕುಂಞ, ಫಕೀರ್ ಮಹಮದ್ ಕಟ್ಪಾಡಿ, ಅಬ್ದುಲ್ ರಶೀದ್, ಬಾನು ಮಸ್ತಾಕ್ ಮುಂತಾದ ಕತೆಗಾರ/ಕತೆಗಾರ್ತಿಯರು ಮುಸ್ಲಿಂ ಸಮುದಾಯದ ಸಂಪ್ರದಾಯ, ಆಚರಣೆ, ಧರ್ಮ, ಮುಗ್ಧತೆ, ದ್ವೇಷ, ಕ್ರೌರ್ಯ ಹಾಗೂ ಸ್ತ್ರೀ ಲೋಕದ ಬಗೆಗಿನ ನಿಷಿದ್ಧತೆ ಇತ್ಯಾದಿಗಳನ್ನು ತಮ್ಮ ಕಥೆಗಳ ಮೂಲಕ ತೆರೆದಿಟ್ಟಿದ್ದಾರೆ."[೮] 'ಧರ್ಮದ ಬಲೆ ಬೀಸಿದಾಗ', 'ಮಸೀದಿ ಕಟ್ಟುವರು' ಕಥೆಗಳಲ್ಲಿ ಮಸೀದಿಯು ಪ್ರತಿಪಾದಿಸುವ ಪ್ರತಿಗಾಮಿ ಆಶಯಗಳನ್ನು ಸಾರಾ ಅಬೂಬಕ್ಕರ್ ತಿರಸ್ಕರಿಸುವ ಮನೋಭಾವವನ್ನು ವ್ಯಕ್ತಪಡಿಸಿದ್ದಾರೆ.

ಹೀಗೆ ಎಲ್ಲಾ ಪಂಥಗಳಲ್ಲೂ ಅಲ್ಲೊಬ್ಬರು ಇಲ್ಲೊಬ್ಬರು ಲೇಖಕಿಯರು ಕಥೆ, ಕಾದಂಬರಿಗಳನ್ನು ಬರೆಯತೊಡಗಿದರು. ನವೋದಯದ ತಿರುಮಲಾಂಬಾ, ಸರಸ್ವತಿಬಾಯಿ ರಾಜವಾಡೆ, ಲೇಖಕಿಯರಿಂದ ಹಿಡಿದು ಕೊಡಗಿನ ಗೌರಮ್ಮ, ತ್ರಿವೇಣಿ

ಮುಂತಾದವರನ್ನು ದಾಟಿಕೊಂಡು ಇಂದಿನ ವೀಣಾ ಶಾಂತೇಶ್ವರ, ವೈದೇಹಿ, ನೇಮಿಚಂದ್ರ ಇನ್ನೂ ಮುಂತಾದ ಕಥೆಗಾರ್ತಿಯರು ಸಾಹಿತ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಇರುವ ವಾಸ್ತವವನ್ನು ಚರ್ಚಿಸುವಂತೆ ಇದ್ದ ನವೋದಯ ಲೇಖಕಿಯರಿಗೂ, ಶೋಷಣೆಗೆ ಒಳಗಾದೆವು ಎಂಬ ಅರಿವು ಪಡೆದ ಮೇಲೆ ಸಮಾನತೆಗಾಗಿ, ರಾಜಕೀಯ ಸ್ವಾತಂತ್ರ್ಯ ಬಯಸುತ್ತಿರುವುದು ಇಂದಿನ ಪರಿಸ್ಥಿತಿಗೆ ಅವಶ್ಯಕವೆನಿಸಿದೆ.

ಹೀಗೆ ಸಾಲು ಸಾಲಾಗಿ ಕನ್ನಡದಲ್ಲಿ ಸಣ್ಣಕಥೆಗಳು ರೂಪುಪಡೆದವು. ಪ್ರಮುಖವಾಗಿ ಡಿಸೋಜ ಕತೆ ಕಾದಂಬರಿ ಬರೆಯುವ ಕಾಲಕ್ಕೆ ಕತೆಗಳಲ್ಲಿ ವರ್ಗ ಸಮಸ್ಯೆ, ಜಾತಿ ಪದ್ಧತಿ, ಲಿಂಗಬೇಧನೀತಿ, ಶೋಷಣೆ, ಭಾಷಾ ಸಮಸ್ಯೆ, ಲೋಹಿಯಾ ಹಾಗೂ ಅಂಬೇಡ್ಕರರ ವಿಚಾರಧಾರೆಗಳು ಈ ನವ್ಯೋತ್ತರದ ಕತೆಗಾರರಿಗೆ ಪ್ರಬಲವಾಗಿ ಪ್ರಭಾವಿಸಿದವು. ಬಂಡಾಯದ ಕತೆಗಾರರಿಗೆ ಒತ್ತಾಸೆ ನೀಡಿತು. ಕುಂ.ವೀರಭದ್ರಪ್ಪ, ಚಂದ್ರಶೇಖರ ಪಾಟೀಲ, ಕಾಳೇಗೌಡ ನಾಗವಾರ, ಬರಗೂರು ರಾಮಚಂದ್ರಪ್ಪ, ಅರವಿಂದ ಮಾಲಗತ್ತಿ, ಗೀತಾ ನಾಗಭೂಷಣ್, ಬೊಳುವಾರ ಮಹಮದ್, ಅಬ್ದುಲ್ ರಶೀದ್, ಭಾನುಮಸ್ತಾಕ್, ಲಲಿತಾನಾಯಕ್, ಮೊಗಳ್ಳಿ ಗಣೇಶ್ ಮುಂತಾದ ಬಂಡಾಯ ಕಥೆಗಾರರಲ್ಲಿ ಸಾಮಾಜಿಕ ಅನುಭವದ ಕತೆಗಳೇ ಹೆಚ್ಚು. ಅಸಮಾನತೆ, ಅಸ್ಪೃಶ್ಯತೆಯ ವಿರುದ್ಧ, ಸಾಮಾಜಿಕ ಜಾಗೃತಿಯನ್ನು ಮೂಡಿಸಿದ ಅನೇಕ ಲೇಖಕರು ಯಾವ ಪಂಥಕ್ಕೂ ಗುರುತಿಸಿಕೊಳ್ಳದೆ ಬಂದಿರುವುದನ್ನು ಗುರುತಿಸಬಹುದು. ಮುಖ್ಯವಾಗಿ ಜಯಂತ್ ಕಾಯ್ಕಿಣಿ, ಕೃಷ್ಣಮೂರ್ತಿ ಹನೂರು, ವಿವೇಕ ಶಾನಭಾಗ, ನಾ.ಡಿಸೋಜ ನೇಮಿಚಂದ್ರ, ಎಂ.ಎಸ್.ವೇದ ಮುಂತಾದ ಕತೆಗಾರರು ತಮ್ಮ ಕತೆಗಳಲ್ಲಿ ಪರಿಸರ ಕಾಳಜಿ, ಸಂಸ್ಕೃತಿ, ಧರ್ಮ ವಾಸ್ತವದ ಬದಲಾವಣೆ, ಸೌಜನ್ಯದ ದುರುಪಯೋಗ, ಆಧುನಿಕ ಸಮಾಜದ ನ್ಯೂನತೆಗಳನ್ನು ಬರೆಯುತ್ತಲೇ ಇದ್ದಾರೆ. ಹಿಂದಿನ ಹಿರಿಯ ಕವಿಗಳೊಡನೆ ಹೆಜ್ಜೆ ಹಾಕದೆ ಹೊಸ ಬದಲಾವಣೆಗಳನ್ನು ತರುವುದರ ಮೂಲಕ ಕತೆಗಳನ್ನು ವಿಭಿನ್ನವಾಗಿಸುತ್ತಿದ್ದಾರೆ.

ಒಟ್ಟಾರೆಯಾಗಿ ಕನ್ನಡ ಕಥಾಪರಂಪರೆ ಹೊಸವಿಚಾರಗಳ, ಹೊಸ ಸಮಸ್ಯೆಗಳನ್ನು ನಿರೂಪಗೊಳಿಸುತ್ತಾ ಉತ್ತಮ ಕಥೆಗಳನ್ನು ನೀಡುತ್ತಿದೆ. ಕಾದಂಬರಿ ಪ್ರಕಾರವನ್ನು ಹಿಂದಿಕ್ಕಿ ಇಂದು ಕಥಾಪ್ರಕಾರ ಬೆಳೆಯುತ್ತಿರುವುದು ಸಂತೋಷದ ಸಂಗತಿಯಾಗಿದೆ.

ಅಡಿಟಿಪ್ಪಣಿ

೧. ಎಸ್.ಪ್ರಸಾದಸ್ವಾಮಿ, ಕಥೆ ಕಥನ, ಪು. ೧.

೨. ಉದೃತ : ಎಸ್.ಪ್ರಸಾದಸ್ವಾಮಿ, ಕಥೆ ಕಥನ, ಪು. ೨.

೩. ಅದೇ, ಪು. ೩

೪. ಅದೇ, ಪು. ೩

೫. ಅದೇ, ಪು. ೩

೬. ಕರೀಗೌಡ ಬೀಚನಹಳ್ಳಿ, ಶತಮಾನದ ಸಣ್ಣಕಥೆಗಳ ಸಮೀಕ್ಷೆ, ಪು. ೧೨.

೭. ಕನ್ನಡನುಡಿ : ಸಂಪುಟ –೨, ಸಂಚಿಕೆ – ೧೪, ಪು. ೧೭.

೮. ಕರೀಗೌಡ ಬೀಚನಹಳ್ಳಿ, ಶತಮಾನದ ಸಣ್ಣಕಥೆಗಳ ಸಮೀಕ್ಷೆ, ಪು. ೧೪೩.

ಅಧ್ಯಾಯ - ೨

"ನಾ.ಡಿಸೋಜ : ಬದುಕು - ಬರಹ"

ನಾ.ಡಿಸೋಜ ಕನ್ನಡದ ಹೆಸರಾಂತ ಕತೆಗಾರ, ಕಾದಂಬರಿಕಾರ, ಅವರು ಪರಿಸರ ಕಾಳಜಿಯುಳ್ಳ ಮಹತ್ವದ ಕತೆಗಾರರೆನಿಸಿದ್ದು ಕನ್ನಡ ಸಾಹಿತ್ಯ ಲೋಕದಲ್ಲಿ ಮಕ್ಕಳ ಸಾಹಿತ್ಯವನ್ನು ಒಳಗೊಂಡಂತೆ ಅಪಾರವಾದ ಸಾಹಿತ್ಯ ಕೃಷಿ ನಡೆಸಿದ್ದಾರೆ. ಇವರ ಬರವಣಿಗೆ ಜೋರಾಗಿದ್ದಾಗ ಕನ್ನಡದಲ್ಲಿ ನವೋದಯ, ಪ್ರಗತಿಶೀಲ, ನವ್ಯ, ನವ್ಯೋತ್ತರ, ಬಂಡಾಯ ದಲಿತ ಮುಂತಾಗಿ ಸಾಹಿತ್ಯ ಚಳುವಳಿಯ ಅಬ್ಬರವೂ ಸಾಕಷ್ಟಿತ್ತು. ಆದರೆ ಈ ಯಾವ ಪಂಥಗಳಿಗೂ ಇವರ ಬರವಣಿಗೆ ಒಡ್ಡಿಕೊಳ್ಳದೆ ಸ್ವತಂತ್ರವಾಗಿ ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಂಡದ್ದು ವಿಶೇಷ. ಭಾಷೆ, ಬುಡಕಟ್ಟು, ಪರಿಸರ, ಸಂಸ್ಕೃತಿ, ಸಮಾಜ, ವ್ಯಕ್ತಿ, ಇತಿಹಾಸ, ಸ್ಥಳನಾಮ, ಪುರಾಣ, ಚರಿತ್ರೆ, ಜಾನಪದ, ವೈಚಾರಿಕ - ಹೀಗೆ ಎಲ್ಲ ದಿಕ್ಕುಗಳನ್ನು ತಮ್ಮ ಬರಹಗಳ ಮೂಲಕ ಸ್ಪರ್ಶಿಸಿರುವ ಡಿಸೋಜ ಬರವಣಿಗೆಯಿಂದ ತಪ್ಪಿಸಿಕೊಂಡ ವಸ್ತು ವಿಷಯಗಳೇ ಇಲ್ಲ ಎನ್ನುವಷ್ಟು ಬದುಕಿನ ಎಲ್ಲಾ ಮಗ್ಗುಲುಗಳನ್ನು ಅವಲೋಕಿಸಿ ದಾಖಲಿಸಿದ್ದಾರೆ. ಇವರ ಬರಹದ ಹರವು ವಿಶಾಲವಾದುದು.

ಕುಟುಂಬ ಹಾಗೂ ಶೈಕ್ಷಣಿಕ ಹಿನ್ನೆಲೆ: ನಾ.ಡಿಸೋಜ ಅವರು ಶಿವಮೊಗ್ಗ ಜಿಲ್ಲೆಯ ಸಾಗರದಲ್ಲಿ ೧೯೩೭ರ ಜೂನ್ ೬ರಂದು ಜನಿಸಿದರು. ತಂದೆ ಕನ್ನಡತನವುಳ್ಳ ಪ್ರಾಥಮಿಕ ಶಾಲಾ ಶಿಕ್ಷಕ ಫಿಲಿಪ್ ಡಿಸೋಜ, ತಾಯಿ ರೊಪೀನಾ ಅನಕ್ಷರಸ್ಥ ಹೆಣ್ಣು ಮಗಳಾದರೂ ತವರಿನಿಂದ ಜನಪದ ಹಾಡುಗಳನ್ನು ಕಲಿತು ಬಂದವರು. ಕೊಂಕಣಿ ಮನೆ ಭಾಷೆಯಾಗಿತ್ತು. ಪರಿಸರದ ಭಾಷೆ ಕನ್ನಡವೆ ಆಗಿದ್ದರಿಂದ ಬಾಲ್ಯದಲ್ಲಿಯೇ ಡಿಸೋಜ ಕನ್ನಡವನ್ನು ಕಲಿತರು. ಹೀಗೆ ತಂದೆ-ತಾಯಿಯರಿಂದ ಸಾಹಿತ್ಯ-ಸಂಸ್ಕೃತಿಯ ಪ್ರಭಾವ ಪ್ರೇರಣೆ ಅವರಿಗೆ ದೊರೆಯಿತು - "ನಮ್ಮ ತಂದೆ ಸಂಗೀತ, ಸಾಹಿತ್ಯ, ನಾಟಕದಲ್ಲೂ ಅಭಿರುಚಿಯುಳ್ಳವರಾಗಿದ್ದರು. ನಮ್ಮ ತಾಯಿ ಕೊಂಕಣಿ ಭಾಷೆಯ ಜನಪದ ಕತೆ ಮತ್ತು ಗಾಯನಗಳ ಗಣಿಯಾಗಿದ್ದರು".[೧] ಎಂಬುದಾಗಿ ಸ್ವತಃ ನಾ.ಡಿಸೋಜ ಒಂದೆಡೆ ಹೇಳಿಕೊಂಡಿದ್ದಾರೆ. ಕನ್ನಡ ಸಾಹಿತ್ಯದ ಬಗ್ಗೆ ಆಸಕ್ತಿ ಬೆಳೆದದ್ದೇ ಅವರಿಗೆ ಕುಟುಂಬ ಮೂಲದಿಂದ. ನಾ.ಡಿಸೋಜ ಫಿಲಿಪ್ ದಂಪತಿಗಳ ಕಿರಿಯಮಗನಾಗಿದ್ದು 'ನಾರ್ಬರ್ಟ್ ಡಿಸೋಜ' ಎಂಬುದು ಅವರ ಪೂರ್ಣ ಹೆಸರು.

[illegible]

[illegible]

[illegible]

[illegible]

ಡಿಸೋಜ ತಮ್ಮ ತಂದೆ ಮುಖ್ಯ ಶಿಕ್ಷಕರಾಗಿದ್ದ ಟ್ಯಾಂಕ್ ಪ್ರೈಮರಿ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿ ಐದರಿಂದ –ಏಳನೆಯ ತರಗತಿಯನ್ನು ಸಾಗರ ಹೊಟೇಲ್ ವೃತ್ತದ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ ಕಲಿತರು. ಅಷ್ಟರಲ್ಲಿ ಅವರ ತಂದೆ ತೀರಿಹೋದರು. ಮುನ್ಸಿಪಲ್ ಸರ್ಕಾರಿ ಪ್ರೌಢಶಾಲೆಯಲ್ಲಿ ತಮ್ಮ ವ್ಯಾಸಂಗವನ್ನು ಮುಂದುವರಿಸಿದರು. ೧೯೫೨ರ ಹೊತ್ತಿಗೆ ಅವರ ಪ್ರೌಢಶಾಲಾ ಶಿಕ್ಷಣ ಪೂರ್ಣಗೊಂಡಿತು. ಹೈಸ್ಕೂಲಿನಲ್ಲಿದ್ದಾಗಲೇ ಇವರ ಸಾಹಿತ್ಯಾಸಕ್ತಿಯನ್ನು ಗಮನಿಸಿ ಬೆಳೆಸಿದವರು. 'ಗೊರೂರು ನರಸಿಂಹಾಚಾರ್ಯರು'. ಮುಂದಿನ ಓದಿಗಾಗಿ ಅವರು ಶಿವಮೊಗ್ಗಕ್ಕೆ ತೆರಳಿದರು. ಈಗ ಸಹ್ಯಾದ್ರಿ ಕಾಲೇಜೆಂದು ಹೆಸರಾಗಿರುವ ಕಾಲೇಜಿನಲ್ಲಿ ಇಂಟರ್ ಮೀಡಿಯೆಟ್‌ಗೆ ಸೇರಿದರು. ಅಲ್ಲಿ ಅವರಿಗೆ ಜಿ.ಎಸ್.ಶಿವರುದ್ರಪ್ಪ ಮೊದಲಾದ ಸಮರ್ಥ ಅಧ್ಯಾಪಕರು ಪಾಠ ಕೇಳುವ ಸೌಭಾಗ್ಯ ದೊರೆಯಿತು. ಮಾಸ್ತಿಯವರ 'ಯಶೋಧರಾ'ವನ್ನು ಪಠ್ಯವಾಗಿ ಓದಿದರು. ಅಲ್ಲಿಯ ಗ್ರಂಥಾಲಯವನ್ನು ಸಾಧ್ಯವಾದಷ್ಟೂ ಬಳಸಿಕೊಂಡ ಡಿಸೋಜರವರ ಓದು ವಿಸ್ತಾರಗೊಂಡಿತು. ಅವರು ಅಂತರ್ಮುಖವಾಗಿ ಬೆಳೆಯತೊಡಗಿದರು. ಇಂಟರ್‌ಮೀಡಿಯಟ್ ಮುಗಿದಾದ ಮೇಲೆ ಅವರು ತಮ್ಮ ಎರಡನೇ ಅಣ್ಣನ ಜತೆಗೂಡಿ ಮೈಸೂರಿಗೆ ನಡೆದರು. ನಾಡಿನ ಸಾಂಸ್ಕೃತಿಕ ನಗರಿ ಮೈಸೂರು ಅವರ ವ್ಯಾಪಕ ಓದಿಗೆ ಇನ್ನಷ್ಟು ಅವಕಾಶಗಳನ್ನು ಒದಗಿಸಿತು. ಗ್ರಂಥಾಲಯಗಳಲ್ಲಿ ಸಿಗುವ ಪುಸ್ತಕಗಳನ್ನೆಲ್ಲ ದಣಿವರಿಯದೆ ಓದಿದರು. ಕುವೆಂಪು, ಬೇಂದ್ರೆ, ಕಾರಂತ, ಅನಕೃ ಮೊದಲಾದ ಕನ್ನಡದ ಸಾಹಿತಿಗಳನ್ನು ಓದುತ್ತಾ ಎಲ್ಲ ಬಗೆಯ ಸಾಹಿತ್ಯ ಪ್ರಕಾರಗಳನ್ನು ಅಧ್ಯಯನ ಮಾಡಿದರು. ಡಿವಿಜಿ, ಗೋಕಾಕ್, ಬೇಂದ್ರೆ, ಕುವೆಂಪುರವರ ಬರಹಗಳು ಅವರನ್ನು ಬಹಳವಾಗಿ ಆಕರ್ಷಿಸಿದವು. ಓದು ಗೀಳಾಯಿತು. ಊಟ ನಿದ್ದೆ ಮರೆತು ಗ್ರಂಥಾಲಯ ಸುತ್ತಾಡಿ ಪುಸ್ತಕಗಳನ್ನು ತಂದು ಓದತೊಡಗಿದರು. ಕನ್ನಡ ಸಾಹಿತ್ಯ ಲೋಕ ಅವರ ಹೃನ್ಮನಗಳನ್ನು ಆವರಿಸಿತು. ಇದು ಅಣ್ಣನಿಗೆ ಸರಿಬಾರದೆ ವೃಥಾ ಕಾಲಹರಣ ಮಾಡುತ್ತಿದ್ದಾನೆ ಎನಿಸಿ ಮುಂಬೈನಲ್ಲಿದ್ದ ಮತ್ತೊಬ್ಬ ಅಣ್ಣ ಅಲ್ಲಿಯ ಕಾಲೇಜಿಗೆ ಸೇರಿಸಿದರಾಯ್ತು ಎಂದುಕೊಂಡು ಕರೆದೊಯ್ದರು. ಅದ್ಯಾಕೋ ಮುಂಬೈ ಡಿಸೋಜರಿಗೆ ಇಷ್ಟವಾಗದೆ ಪುನಃ ಮೈಸೂರಿಗೆ ಮರಳಿ ಬಂದರು. ಬೆರಳಚ್ಚು ಮತ್ತು ಶೀಘ್ರಲಿಪಿ ಕಲಿತರು. ಇದು ಮುಂದೆ ಉದ್ಯೋಗಕ್ಕಾಗಿ ಅವರ ಕೈ ಹಿಡಿಯಿತು.

ವೃತ್ತಿಜೀವನ: ೧೯೫೫ರಲ್ಲಿ ನಾ.ಡಿಸೋಜರವರಿಗೆ ಸರ್ಕಾರಿ ಕೆಲಸ ಒಲಿದು ಬಂದಿತು ಆಗಿನ ಮೈಸೂರು ರಾಜ್ಯದ ಲೋಕೋಪಯೋಗಿ ಇಲಾಖೆಯಲ್ಲಿ ಟೈಪಿಸ್ಟ್ ಆಗಿ

[illegible]

ಉದ್ಯೋಗಕ್ಕೆ ಸೇರಿಕೊಂಡರು. ಶಿವಮೊಗ್ಗ ಜಿಲ್ಲೆಯ ಹಲವು ತಾಲ್ಲೂಕುಗಳಲ್ಲಿ ಅವರು ಕೆಲಸ ನಿರ್ವಹಿಸಿದರು. ನಿವೃತ್ತಿಯವರೆಗೂ ಇದೇ ಇಲಾಖೆಯಲ್ಲಿ ಮುಂದುವರಿದು, ಪ್ರಥಮದರ್ಜೆ ಗುಮಾಸ್ತರಾಗಿ ಬಡ್ತಿ ಪಡೆದರು. ತಮ್ಮ ವೃತ್ತಿ ಜೀವನದಲ್ಲಿ ಅವರು ಸಾಗರ, ಕಾರ್ಗಲ್, ಜೋಗ, ಲಿಂಗನಮಕ್ಕಿ, ತೀರ್ಥಹಳ್ಳಿ ಭಾಗಗಳಲ್ಲಿ ಗುಮಾಸ್ತರಾಗಿ ಸೇವೆ ನಿರ್ವಹಿಸಿದ್ದು ತಮ್ಮ ವೃತ್ತಿಜೀವನದ ಅನುಭವ ದ್ರವ್ಯವನ್ನು ಸಾಹಿತ್ಯದ ಮೂಲಕ ಹೊರಹಾಕಲು ಅನುವಾಯಿತು. ಶತಮಾನಗಳಿಂದ ಶಾಂತವಾಗಿ ಹರಿಯುತ್ತಿದ್ದ ಶರಾವತಿ ನದಿಗೆ ಅಡ್ಡಲಾಗಿ ಕಟ್ಟಲಾಗುವ ಡ್ಯಾಮಿನ ಯೋಜನೆಗಳು, ವಿದ್ಯುದಾಗರಗಳು, ಮಲೆನಾಡಿನ ಜನಸಾಮಾನ್ಯರ ಬದುಕಿನಲ್ಲಿ ಉಂಟುಮಾಡಿದ ನೋವು, ಸಂಕಟ, ತಳ–ಮಳಗಳನ್ನು ಹತ್ತಿರದಿಂದ ಕಂಡರು. ಅವರ ಕವಿಮನ ಸಹಜವಾಗಿಯೇ ಮಿಡಿಯತೊಡಗಿತು. ಒಬ್ಬೊಬ್ಬರದೂ, ಒಂದೊಂದು ಕುಟುಂಬದ್ದೂ ಒಂದೊಂದು ಊರಿನದೂ ಕತೆಯಾಗಿ ಕಾಡಿತು. ಲಿಂಗನಮಕ್ಕಿ ಅಣೆಕಟ್ಟಿನ ನಿರ್ಮಾಣ, ಬೆಡ್ತಿ, ಚಕ್ರಾ, ಸಾವೇಹಕ್ಲು, ಶರಾವತಿ ಟೇಲ್‌ರೇಸ್ – ಈ ಎಲ್ಲಾ ಯೋಜನೆಗಳನ್ನು ಅವರು ಕಣ್ಣಾರೆ ಕಂಡರು. ಅನುಭವಿಸಿದರು. ಇವೆಲ್ಲ ಅವರ ಸಮಗ್ರ ಬರಹದ ಮೇಲೆ ನೇರ ಪರಿಣಾಮವನ್ನುಂಟು ಮಾಡಿದವು. ಕವಿಮನದ ಸಂವೇದನೆ ಅವರ ಒಳಗಿನ ಬರಹಗಾರನನ್ನು ಎಚ್ಚರಿಸಿತು. ಅಂದಿನಿಂದ ಶುರುವಾದ ಅವರ ಬರವಣಿಗೆ ಇನ್ನೂ ವಿಶ್ರಮಿಸಿಲ್ಲ. "ಮಾತು, ಸಂಘಟನೆ, ಹೋರಾಟ ಮತ್ತು ಬರಹ ಹೀಗೆ ನಾಲ್ಕು ಮುಖಗಳಲ್ಲಿ ಡಿಸೋಜರವರ ಸೃಜನಶೀಲತೆ ಅಭಿವ್ಯಕ್ತಗೊಂಡಿದೆ. ಈ ನಾಲ್ಕಕ್ಕೂ ಪರಸ್ಪರ ಸಂಬಂಧ. ಸಮನ್ವಯವಿದ್ದು ಇದೊಂದು ನಿರಂತರ ಪಯಣ. ಇದಕ್ಕೆ ದಣಿವೆಂಬುದಿಲ್ಲ".[೨] ಮೇಲ್ನೋಟಕ್ಕೆ ಇವರ ವೃತ್ತಿಗೂ–ಸಾಹಿತ್ಯದ ಪ್ರವೃತ್ತಿಗೂ ಸಂಬಂಧವಿಲ್ಲ ಎಂದೆನಿಸಬಹುದು. ಆದರೆ ಅವರ ಲೋಕೋಪಯೋಗಿ ವೃತ್ತಿಯ ಪರಿಸರವೇ ಸಾಹಿತ್ಯದ ಮೂಲ ಜೀವಜಲವನ್ನು ರೂಪಿಸಿರುವುದನ್ನು ಯಾರೂ ಅಲ್ಲಗಳೆಯಲು ಸಾಧ್ಯವಿಲ್ಲ.

ನಾ.ಡಿಸೋಜ ವೃತ್ತಿಗೆ ಸೇರಿದಾಗ ಅವರಿಗೆ ಕೇವಲ ೨೨ರ ವಯೋಮಾನ. ಮದುವೆಯಾದಾಗ ೩೨ ವರ್ಷ. ವಿವಾಹ ಪೂರ್ವದಲ್ಲಿಯೆ ಅವರು ಹೆಸರಾಂತ ಲೇಖಕರಾಗಿ ಪ್ರಸಿದ್ಧರಾಗಿದ್ದರು. ೨೩.೦೪.೧೯೬೯ರಂದು ಫಿಲೋಮಿನಾ ಅವರನ್ನು ವರಿಸಿ ದಾಂಪತ್ಯ ಜೀವನಕ್ಕೆ ಪ್ರವೇಶ ಪಡೆದರು. ಕಾಲಾನಂತರದಲ್ಲಿ ಅವರಿಗೆ ಮೂರು ಮಕ್ಕಳಾದರು. ಮೊದಲನೆಯವಳು ಮಗಳು ಶೋಭಾ, ಅನಂತರದಲ್ಲಿ ನವೀನ ಹಾಗೂ ಸಂತೋಷ್ ಎಂಬೆರಡು ಗಂಡುಮಕ್ಕಳು. ಅಂತಹ ಏರಿಳಿತಗಳಿಲ್ಲದ ಸುಖಿ ಸಂತೃಪ್ತ ಕುಟುಂಬ ಜೀವನ ಅವರದು. ಹಾಗಾಗಿ ಡಿಸೋಜರವರು ವೈಯಕ್ತಿಕ ಜೀವನ

ಮತ್ತು ವೃತ್ತಿ ಜೀವನ ಎರಡರಲ್ಲೂ ಗೆದ್ದವರು. ವೈಯಕ್ತಿಕ ಜೀವನದಲ್ಲಿ ಶಾಂತರಾಗಿ ಕಡಿಮೆ ಮಾತು, ಸೌಮ್ಯ ಸ್ವಭಾವದ ನಾ.ಡಿಸೋಜ ವೃತ್ತಿಜೀವನದಲ್ಲಿ ಯಾವುದೇ ವಿಷಯದ ಬಗ್ಗೆ ನಿರ್ದಾಕ್ಷಿಣ್ಯವಾಗಿ, ನಿರರ್ಗಳವಾಗಿ ಮಾತನಾಡಬಲ್ಲರು. ಹೀಗಾಗಿ ಇವರು ಜೀವನದ ಇತಿ–ಮಿತಿಗಳನ್ನರಿತು ಬದುಕನ್ನು ಅರ್ಥಪೂರ್ಣವಾಗಿ ಕಟ್ಟಿಕೊಂಡವರು.

ಡಿಸೋಜ ಅವರ ಸಾಹಿತ್ಯ: ಮಲೆನಾಡಿನ ಜನಮಾನಸದ ಸಾಕ್ಷಿ ಪ್ರಜ್ಞೆಯಂತಿರುವ ಲೇಖಕ ನಾ.ಡಿಸೋಜ ಕನ್ನಡ ಸಾಹಿತ್ಯಲೋಕದ ಮಿನುಗುವ ತಾರೆ. ಇವರು ಪ್ರವೃತ್ತಿಯಾಗಿ ಸಾಹಿತ್ಯವನ್ನು ಸ್ವೀಕರಿಸಿ ಸಣ್ಣಕತೆ, ಕಾದಂಬರಿ, ನಾಟಕ, ಅನುವಾದ, ಪ್ರಬಂಧ ರಚನೆ, ಮಕ್ಕಳ ಸಾಹಿತ್ಯ ಮುಂತಾದ ಪ್ರಕಾರಗಳಲ್ಲಿ ನಿರಂತರವಾಗಿ ಸುಮಾರು ಐದು ದಶಕಗಳಿಂದ ಕೃಷಿ ನಡೆಸಿಕೊಂಡು ಬಂದಿದ್ದಾರೆ. ಇವರ ಸಾಹಿತ್ಯದ ಮುಖ್ಯನೆಲೆಯೆಂದರೆ ಕಥನ. ಹಾಗೆಯೇ ಕನ್ನಡ ಸಾಹಿತ್ಯ ಲೋಕಕ್ಕೆ ಪ್ರವೇಶ ಪಡೆದದ್ದೇ ಕತೆಯ ಮೂಲಕ. ೧೯೬೪ರಲ್ಲಿ ಪಾಪುರವರ 'ಪ್ರಪಂಚ' ಪತ್ರಿಕೆಯಲ್ಲಿ ಅವರ ಮೊದಲ ಕತೆ 'ಸಾಹೇಬರು ಕಲಿಸಿದ ಪಾಠ' ಪ್ರಕಟವಾಯಿತು. ಅದೇ ವರ್ಷ ಅವರ ಮೊದಲ ಕಾದಂಬರಿ 'ಬಂಜೆಬೆಂಕಿ' ಕೂಡ ಪ್ರಕಾಶನ ಕಂಡಿತು. ಅಂದು ಶುರುವಾದ ಅವರ ಬರವಣಿಗೆ ಇಂದಿಗೂ ದಣಿವಿಲ್ಲ. ಮೊಗೆದಷ್ಟೂ ಉಕ್ಕುಕ್ಕಿ ಬರುವ ಜೀವಜಲ ಅವರ ಸಾಹಿತ್ಯ.

ಡಿಸೋಜ ಈವರೆಗೆ ಬರೆದ ಒಟ್ಟು ಕತೆಗಳ ಸಂಖ್ಯೆ ಅಂದಾಜು ಐದು ನೂರನ್ನು ದಾಟಿರಬಹುದು. ನಿಜಕ್ಕೂ ಇದೊಂದು ದಾಖಲೆಯೇ ಸರಿ. ಒಂದಿಷ್ಟು ಜಾಳನ್ನು ಪಕ್ಕಕ್ಕೆ ಸರಿಸಿದರೂ ಗಟ್ಟಿ ಕಾಳುಗಳಿಗೇನೂ ಬರವಿಲ್ಲ. ಕನ್ನಡ ಸಾಹಿತ್ಯದಲ್ಲಿ ಸ್ಥಾಯಿಯಾಗಿ ನಿಲ್ಲಬಲ್ಲ ಅನೇಕ ಕತೆಗಳನ್ನು ಅವರು ನೀಡಿದ್ದಾರೆ.

ಪ್ರಕಟಿತ ಕಥಾ ಸಂಕಲನಗಳು

೧. ನಿನ್ನುದ್ದಾರವೆಷ್ಟಾಯ್ತು?

೨. ಪ್ರಜ್ಞಾ ಎಂಬ ನದಿ

೩. ಹೊಸ ಕತೆಗಳು

೪. ಸ್ವರ್ಗದ ಬಾಗಿಲಲ್ಲಿ ನರಕ

೫. ೨೫ ಕತೆಗಳು

೬. ಅವರದ್ದೆ ಬೇರೆ ಕತೆ

೭. ಗಿಳಿಯೆ ಓ ಗಿಳಿಯೇ?

[illegible]

ಈ ಸಂಕಲನಗಳಲ್ಲಿ ಇಲ್ಲದ ಪತ್ರಿಕೆಗಳಲ್ಲಿ ಬರೆದ ಬಹುಪಾಲು ಕತೆಗಳು ಆಚೀಚೆ ಹರಡಿವೆ. ಹಾಗೆಯೇ ೧೬೦ ಕತೆಗಳನ್ನು ಒಳಗೊಂಡ ಸಮಗ್ರ ಕಥೆಗಳು ಮೂರು ಸಂಪುಟಗಳಲ್ಲಿ ಪ್ರಕಟಗೊಂಡಿವೆ. ಈ ವಿಸ್ತಾರ ವೈವಿಧ್ಯಗಳನ್ನು ಕಂಡ ಗೌರೀಶ್‌ಕಾಯ್ಕಿಣಿ ಅವರು – 'ಇಷ್ಟೊಂದು ವಿಪುಲವಾಗಿ, ವೈಶಿಷ್ಟ್ಯಪೂರ್ಣವಾಗಿ ನಿರೂಪಿಸಿದ ಮತ್ತೊಬ್ಬ ಕತೆಗಾರನನ್ನು ನಾನು ಕನ್ನಡದಲ್ಲಿ ಕಂಡಿಲ್ಲ' ಎಂದಿದ್ದಾರೆ. ಈ ಮಾತು ಅವರೊಬ್ಬ ಸಮರ್ಥ ಕತೆಗಾರ ಎಂಬುದನ್ನು ಸಂಕೇತಿಸುತ್ತದೆ. ತಮ್ಮ ಕಣ್ಣು, ಕಿವಿ, ಹೃದಯ, ಅನುಭವಕ್ಕೆ ಧಕ್ಕಿದ ವಸ್ತು, ಘಟನೆ, ಸಂಗತಿಗಳನ್ನು ಕತೆಗಳ ಮೂಲಕ ಹಿಡಿದಿಟ್ಟಿದ್ದಾರೆ. ಸಾಮಾಜಿಕ, ಸಾಂಸ್ಕೃತಿಕ, ಪರಿಸರ ಕೇಂದ್ರಿತ ಹಾಗೂ ಕ್ರೈಸ್ತಧರ್ಮದ ಹಿನ್ನೆಲೆಯ ನೆಲೆಗಟ್ಟಿನಲ್ಲಿ ಅವುಗಳನ್ನು ಈ ನಿಬಂಧದಲ್ಲಿ ವಿವೇಚಿಸಲಾಗಿದೆ.

ಕಾದಂಬರಿಗಳು: ಕಥಾಸಾಹಿತ್ಯದಂತೆ ಕಾದಂಬರಿ ಪ್ರಕಾರವನ್ನು ಸಮೃದ್ಧಿಗೊಳಿಸಿದ ಡಿಸೋಜ ಸುಮಾರು ನಲವತ್ತುಕ್ಕೂ ಹೆಚ್ಚು ಕಾದಂಬರಿಗಳನ್ನು ರಚಿಸಿದ್ದು ಮುಖ್ಯವಾಗಿ ಬಂಜೆಬೆಂಕಿ, ಈ ಜಲ ಈ ನೆಲ, ಮಂಜಿನಕಾನು, ಕೆಂಪು ತ್ರಿಕೋನ, ರಾಗವಿರಾಗ, ಇಗರ್ಜಿ ಸುತ್ತಲಿನ ಹತ್ತು ಮನೆಗಳು, ಗಾಂಧಿ ಬಂದರು, ದುರ್ಗವೆಂಬ ವ್ಯೂಹ, ದ್ವೀಪ, ಶಿವನಡಂಗುರ, ತಿರುಗೋಡಿನ ರೈತ ಮಕ್ಕಳು, ಇಕ್ಕೇರಿಯಲ್ಲಿ ಎಂಜಿನಿಯರ್ ಆತ್ಮಕತೆ, ಗಾಂಧಿಯ ಸ್ವಾತಂತ್ರ್ಯ ಹೋರಾಟ. ಮಾನವ, ಪ್ರಜ್ಞಾಬಲಿ, ಕಣಿವೆಯ ಕೆಂಪುಹೂವು, ಒಡ್ಡು ಮುಂತಾದವುಗಳನ್ನು ಹೆಸರಿಸಬಹುದು. ನೇರ ಅನುಭವವೇ ಅವರ ಸಾಹಿತ್ಯದ ಜೀವಾಳವಾಗಿದ್ದು "ಪರಿಸರನಾಶ, ಕ್ರೈಸ್ತ ಜನಾಂಗದ ಹಿನ್ನೆಲೆ. ಭ್ರಷ್ಟಾಚಾರ, ಹಿಂದುಳಿದ ಬುಡಕಟ್ಟು ಜನಾಂಗದ ಚಿತ್ರಣ, ಆಧುನಿಕತೆ ಮಾನವ ಜೀವನದಲ್ಲಿ ಪ್ರವೇಶ ಮಾಡುವ ಪರಿ ಅದಕ್ಕೆ ಮನುಷ್ಯ ಬಲಿಯಾಗುವ ಪರಿಯನ್ನು ಸಂಘಟನೆಗಳು ತಮ್ಮ ನಾಯಕತನವನ್ನು ಉಳಿಸಿಕೊಳ್ಳಲು ಪಡಬೇಕಾದ ಪಾಡು, ರೈತರು, ಸಾಮಾನ್ಯಜನ, ಕೂಲಿಕಾರರು ಬದುಕಬೇಕಾಗಿ ಬಂದಾಗ ಪಡಬೇಕಾದ ಪಾಡುಗಳು. ಎಲ್ಲವನ್ನೂ ತಮ್ಮ ಕಾದಂಬರಿಯಲ್ಲಿ ತರುವ ಡಿಸೋಜರವರು ಗೆಲ್ಲುವುದು ಎಲ್ಲೆಂದರೆ ಅಷ್ಟಾದರೂ ಆ ಜನ ತಮ್ಮ ಮೂಲ ನೆಲೆಗಳನ್ನು ತೊರೆಯದೆ ಪ್ರಕೃತಿಯ ತೆಕ್ಕೆಗೆ ಅಂಟಿಕೊಳ್ಳುವುದರಿಂದ".[೩] ಹೀಗೆ ಹತ್ತು ಹಲವು ವಿಷಯಗಳನ್ನೊಳಗೊಂಡ ಅವರ ಕಾದಂಬರಿಗಳು ಓದುಗರ ಮನಸೂರೆಗೊಂಡಿವೆ.

ನಾಟಕಗಳು: ಡಿಸೋಜ ರಚಿಸಿರುವ ಪ್ರಮುಖ ನಾಟಕಗಳೆಂದರೆ

೧) ಭೂತದ ಎದುರು ಭೇತಾಳ

೨) ದೇವರಿಗೇ ದಿಕ್ಕು

೩) ತಬ್ಬಲಿ

೪) ದ್ವೀಪ

೫) ಬೆತ್ತಲೆ ಸೇವೆ

ರೇಡಿಯೋ ನಾಟಕಗಳು: ಭುವಿಗೆ ಬಂದ ಬೆಳಕು, ರೂಪದರ್ಶಿ, ಮಲೆನಾಡಿನ ಮದಕರಿ, ಹಿಪ್ಪಿ ಮತ್ತು ಅಜ್ಜಿ, ಊರಾಳು ಅರಮನೆಗೆ ಜನಬಂದರು, ಬೆಳಗಾಗಿ ನಾನೆದ್ದು, ಹಳೆಯ ಬಳಗಕ್ಕೆ ಜೈ (ಮಕ್ಕಳ ನಾಟಕ)

ಕಿರುಕಾದಂಬರಿಗಳು: ತಿರುಗೋಡಿನ ರೈತಮಕ್ಕಳು, ಗುಡಿಗಾರರು, ತಿರುವುಗಳು, ಹಕ್ಕಿ ಹಾರಿತು, ನಾಯಕ, ಜಾತ್ರೆಯಲ್ಲಿ ಕಂಡವಳು, ಸುರಂಗ, ಶರಾವತಿ ಎಂಬ ಮಾನಿನಿ, ಮಹಾಸತಿ, ಇತಿಹಾಸದ ಕಪ್ಪು ಚುಕ್ಕೆ, ಎರಡು ರಾತ್ರಿ ಒಂದು ಹಗಲು ಮುಂತಾದವು.

ಜಾನಪದ: ೧) ಚಿತ್ತಾರ ೨) ಹೂವ ಚೆಲ್ಲುತ ಬಾ

ಮಕ್ಕಳ ಸಾಹಿತ್ಯ: ಮಕ್ಕಳ ಸಾಹಿತ್ಯಕ್ಕೆ ನಾಡಿಯವರ ಕೊಡುಗೆ ಅಪಾರವಾಗಿದ್ದು ಕತೆ, ಕವನ, ಕಾದಂಬರಿ, ನಾಟಕ, ಜೀವನಚರಿತ್ರೆ, ಮುಂತಾದವುಗಳನ್ನು ಮಕ್ಕಳಿಗೆಂದೆ ಸಾಲು-ಸಾಲು ಸಂಖ್ಯೆಯಲ್ಲಿ ಬರೆದಿದ್ದಾರೆ. ಮಕ್ಕಳಿಗಾಗಿ ಮತ್ತೆ ಹೇಳಿದ ಅಜ್ಜಿ ಕತೆಗಳು, ಕರ್ನಾಟಕದ ಅದ್ಭುತ ಜಲಪಾತಗಳು ಕೃತಿಗಳೊಂದಿಗೆ ಎಂಟು ನಾಟಕಗಳು, ಹಿದನಾಲ್ಕು ಮಿನಿಕಾದಂಬರಿಗಳು. ಹೀಗೆ ಮಕ್ಕಳ ಮನಸ್ಸಿಗೆ ಹಿತವಾಗುವ ವಸ್ತು-ವಿಚಾರಗಳನ್ನು ಡಿಸೋಜ ನೀಡಿದ್ದಾರೆ. ಮುಖ್ಯವಾಗಿ ಭೂತ(ನಾಟಕ), ಮುಂದೇನು? (ನಾಟಕ), ಗೇರುಸೊಪ್ಪೆ, ಕದಂಬ ಮಯೂರಶರ್ಮ, ಬಾಲಗಂಧರ್ವ, ಪುಲಿನ ಬಿಹಾರಿದಾಸ್, ಸದಾಶಿವ ಬ್ರಹ್ಮೇಂದ್ರ, ಶರಾವತಿ, ಸಂಗೀತಪುರ, ಸಬರಬ, ಬೆಳಕಿನೊಡನೆ ಬಂತು ನೆನಪು, ಹಕ್ಕಿಗಳಿಗೆ ಬಂತು ಬಣ್ಣ, ಆನೆ ಬಂತೊಂದಾನೆ, ಗೋಡ ಬೇಡ, ಗೋಪಿಯ ಗೊಂಬೆ, ಕೋಳಿ ಅನಂತ ಮುಂತಾದವುಗಳನ್ನು ಹೆಸರಿಸಬಹುದು.

ಪ್ರಸಿದ್ಧ ಚಲನಚಿತ್ರಗಳಾದ ಕತೆಗಳು: "ನಾಡಿಗೆ ಬೆಳಕನ್ನು ನೀಡಲು ಪ್ರಾರಂಭಿಸಿದ ವಿದ್ಯುಚ್ಛಕ್ತಿ ಯೋಜನೆಯ ಅಡಿಯಲ್ಲಿ ಬಹಳಷ್ಟು ಜನರ ಬದುಕುಗಳು ಕತ್ತಲೆಯಲ್ಲಿ ಕರಗಿ ಹೋಗುವ ವಸ್ತುವನ್ನಾಗಿ ಉಳ್ಳ 'ಮುಳುಗಡೆ' ಕಾದಂಬರಿಯು ಸುಧಾ, ಯುಗಾದಿ ಕಾದಂಬರಿ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದಿದ್ದರೆ, ಸುರೇಶ್ ಹೆಬ್ಳೀಕರ್‌ರವರ ನಿರ್ದೇಶನದಲ್ಲಿ ಕಾಡಿನಬೆಂಕಿ, ಗಿರೀಶ್ ಕಾಸರವಳ್ಳಿ ನಿರ್ದೇಶನದಲ್ಲಿ 'ಬೆಟ್ಟದಪುರದ ದಿಟ್ಟ ಮಕ್ಕಳು' ಚಲನಚಿತ್ರಗಳಾಗಿ ಜನಪ್ರಿಯತೆ ಪಡೆದಿವೆ. ಕಾಡಿನಬೆಂಕಿ ಚಿತ್ರ

ರಜತಕಮಲ ಪ್ರಶಸ್ತಿಯನ್ನು, ದ್ವೀಪ ಚಿತ್ರ ಸ್ವರ್ಣ ಕಮಲ ಪ್ರಶಸ್ತಿಯನ್ನು ಗಳಿಸಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಹಿರಿಮೆ ಗಳಿಸಿವೆ".[೪]

ಪಠ್ಯ ಪುಸ್ತಕಗಳಲ್ಲಿ: ಮುಳುಗಡೆ, ಕೂಳಗ, ಒಳಿತನ್ನು ಮಾಡಲು ಬಂದವರು, ಬಣ್ಣ, ಪಾದರಿಯಾಗುವ ಹುಡುಗ, ಇಬ್ಬರು ಮಾಜಿಗಳು ಮುಂತಾದ ಕಾದಂಬರಿಗಳು ಕುವೆಂಪು ವಿಶ್ವವಿದ್ಯಾಲಯದ ಬಿ.ಎಸ್ಸಿ., ಬಿ.ಕಾಂ., ತರಗತಿಗಳಿಗೆ ಬೆಂಗಳೂರು ವಿಶ್ವವಿದ್ಯಾಲಯದ ಬಿ.ಎ. ತರಗತಿಗಳಿಗೆ, ಮಂಗಳೂರು ವಿಶ್ವವಿದ್ಯಾಲಯದ ಬಿ.ಕಾಂ., ತರಗತಿಗಳಿಗೆ ಮತ್ತು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ಮುಂತಾದೆಡೆಗಳಲ್ಲಿ ಪಠ್ಯಪುಸ್ತಕಗಳಾಗಿಯೂ ಆಯ್ಕೆಯಾಗಿವೆ.

ಹಾಗೆಯೇ 'ಪ್ರಬಂಧ ಸಾಹಿತ್ಯ'ದಲ್ಲೂ ಇವರದು ಎತ್ತಿದ ಕೈ. ನಾಡಿ ಈವರೆಗೆ ಬರೆದಿರುವ ಒಟ್ಟೂ ಪ್ರಬಂಧಗಳನ್ನು ವಿಷಯವಾರು ಸಂಕಲಿಸಿ ಪ್ರಕಟಿಸಿದರೆ ಹತ್ತಾರು ಸಂಪುಟಗಳೆ ಆಗಬಹುದು. ಈ ಲೇಖನಗಳು ಪ್ರಾಸಂಗಿಕವಾಗಿ ಪತ್ರಿಕೆಗಳು, ಸ್ಮರಣ ಸಂಚಿಕೆಗಳು, ಪುಸ್ತಕ ಹೀಗೆ ಬೇರೆ ಬೇರೆ ಕಡೆ ಚದುರಿಕೊಂಡಿವೆ. ವಿಶೇಷವೆಂದರೆ ಇವರು ಲೇಖನಗಳನ್ನು ಬರೆಯುವಾಗ ಅನೇಕ ಕಾವ್ಯನಾಮಗಳನ್ನು ಬಳಸಿಕೊಂಡಿದ್ದಾರೆ. ಜುದಾಸ, ಡೀಸಾ, ಸುದರ್ಶನ, ಬಾನಾಡಿ, ಮಲೆನಾಡಿಗ, ಡಿಎಸ್‌ಎಸ್ –ಎಂದೆಲ್ಲ ನಾ.ಡಿಸೋಜ ಕಾವ್ಯನಾಮ ಅಥವಾ ಗುಪ್ತನಾಮಗಳನ್ನು ಆಶ್ರಯಿಸಿದ್ದಾರೆ.

ವ್ಯಕ್ತಿತ್ವ–ಸಂಘಟನೆ–ಹೋರಾಟ

"ನಾ.ಡಿಸೋಜ ಅವರ ವ್ಯಕ್ತಿತ್ವದ ಹಿರಿತನವಿರುವುದು ಅವರ ಜಾತ್ಯಾತೀತ ಹಾಗೂ ಅಪ್ಪಟ ವೈಚಾರಿಕ ನಿಲುವಿನಲ್ಲಿ. ಒಬ್ಬ ಶ್ರೇಷ್ಠ ಕಲಾವಿದನಿಗೆ ಬೇಕಾದ ಅಪ್ಪಟ ಮಾನವೀಯ ತುಡಿತವಿರುವ ವ್ಯಕ್ತಿ ಡಿಸೋಜ. ಈ ಮಾತನ್ನು ಕೇವಲ ಸಾಹಿತ್ಯ ಮೂಲದಿಂದ ಹೇಳುವಂತಹುದ್ದಲ್ಲ. ಅವರ ವೈಯಕ್ತಿಕ ಬದುಕು ಕೂಡ ಹಾಗೆಯೇ ಇದೆ".[೫] ದೇವರು, ಧರ್ಮ, ಮತ, ಸಂಪ್ರದಾಯ, ಕಂದಾಚಾರ, ವೈಚಾರಿಕತೆ ಬಗ್ಗೆ ಅವರ ನಿಲುವುಗಳನ್ನು ಗಮನಿಸಿದರೆ ಶ್ರೀಮಂತ ವ್ಯಕ್ತಿತ್ವದ ಪರಿಚಯವಾಗುತ್ತದೆ. ಡಿಸೋಜ ಅವರದು ಮೃದು ಸ್ವಭಾವದ ಸ್ನೇಹಶೀಲ ವ್ಯಕ್ತಿತ್ವ. ಸರಳತೆ, ಸಜ್ಜನಿಕೆ, ಗಾಂಭೀರ್ಯ ಇವರ ವ್ಯಕ್ತಿತ್ವದಲ್ಲಿ ಹಾಸುಹೊಕ್ಕಾಗಿ ಬೆರೆತುಕೊಂಡಿದೆ. ವೈಯಕ್ತಿಕ ಜೀವನದಲ್ಲಿ ಹಾಗೂ ವೃತ್ತಿಯಲ್ಲಿ ಅಪೂರ್ವ ಶಿಸ್ತನ್ನು ಅಳವಡಿಸಿಕೊಂಡು ಎಲ್ಲರಿಗೂ ಮಾದರಿಯಾಗಿ ನಿಲ್ಲುತ್ತಾರೆ. ಹುಟ್ಟಿನಿಂದಲೂ ಕಷ್ಟಸುಖಗಳನ್ನು ಅನುಭವಿಸಿಕೊಂಡು ಸುತ್ತಲಿನ ಬಡತನ, ನೊಂದವರ ಬದುಕನ್ನು ಹತ್ತಿರದಿಂದ ಕಂಡವರಾಗಿದ್ದು ಅವರ ಪರವಾಗಿಯೇ ಶ್ರಮಿಸುತ್ತಾ ಬಂದಿದ್ದಾರೆ. "ಡಿಸೋಜಾ ಒಳ್ಳೆಯ ವಾಗ್ಮಿ. ಶಾಲೆಯಲ್ಲಿ

[illegible]

[illegible]

[illegible]

ಓದಿದ್ದು ಕಡಿಮೆ. ಆದರೆ ಬದುಕಿನ ಶಾಲೆಯಲ್ಲಿ ತುಂಬಾ ಓದಿಕೊಂಡವರು. ಹೀಗಾಗಿ ಯಾವುದೇ ಸಭೆ–ಸಮಾರಂಭಗಳಲ್ಲಿ ಮಾತಿಗೆ ನಿಂತರೆ ದೇಶ–ಕೋಶಗಳು ಮೈದಾಳುತ್ತವೆ. ತಾನೊಬ್ಬ ಹಿರಿಯ ಸಾಹಿತಿ ಎಂಬ ಹಮ್ಮುಬಿಮ್ಮು ಯಾವತ್ತೂ ಅವರ ಬಳಿ ಸುಳಿದಿಲ್ಲ".[೬] ಕಾರ್ಯಕ್ರಮ ಯಾವುದೇ ಇರಲಿ ಒಂದು ಮಟ್ಟದ ತಯಾರಿಯನ್ನು ಮಾಡಿಕೊಂಡೆ ಹೋಗುತ್ತಾರೆ. ಸಮಯಪಾಲನೆ, ಶಿಸ್ತು, ಬದ್ಧತೆ ವ್ಯಕ್ತಿತ್ವದಲ್ಲಿ ಮನೆಮಾಡಿವೆ.

ನಾಡಿ ಒಬ್ಬ ಸಮರ್ಥ ಸಂಘಟಕ ಕೂಡ. 'ಒಡನಾಟ' ಎಂಬ ಹೆಸರಿನ ಸಾಹಿತ್ಯ ವೇದಿಕೆಯನ್ನು ೧೯೯೦ರಲ್ಲಿ ಸ್ಥಾಪಿಸಿ ಅದರ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದು ಬೇಂದ್ರೆ, ಕುವೆಂಪು, ಕೆಎಸ್‌ನ ಮೊದಲಾದವರ ಆಯ್ದ ಕವಿತೆಗಳನ್ನು ಓದುವ ಹಾಡಿಸುವ ಮತ್ತು ಅವುಗಳ ಚಿತ್ರ ಕಾವ್ಯ ರಚಿಸುವ 'ಚಿತ್ರಕಾವ್ಯ–ಕಾವ್ಯಚಿತ್ರ' ಎಂಬ ಕಾರ್ಯಕ್ರಮವನ್ನು ಒಟನಾಟ ಆಯೋಜಿಸಿದೆ. ಹಾಗೆಯೇ ಪರಿಸರ ಕೇಂದ್ರಿತವಾದ ಹಲವು ಕಾರ್ಯಕ್ರಮಗಳು, ಗಮಕವಾಚನ, ಉಪನ್ಯಾಸ, ವಿಚಾರಗೋಷ್ಠಿ, ಪತ್ರ ಪ್ರದರ್ಶನ, ಕಪ್ಪು–ಬಿಳುಪಿನ ಛಾಯಾಚಿತ್ರಗಳ ಪ್ರದರ್ಶನ, ಪ್ರಶಸ್ತಿ ಪುರಸ್ಕೃತ ಉತ್ತಮ ಚಲನಚಿತ್ರಗಳ ಪ್ರದರ್ಶನ. ಹೀಗೆ ಹಲವು ವೈವಿಧ್ಯಮಯ ಕಾರ್ಯಕ್ರಮಗಳನ್ನು ಒಡನಾಟದ ವತಿಯಿಂದ ಆಯೋಜಿಸಿದ್ದು ಎಲ್ಲವುದರಲ್ಲೂ ಉತ್ತಮ ಸಂಘಟನಕಾರರಾಗಿ ಡಿಸೋಜ ಗಮನ ಸೆಳೆಯುತ್ತಾರೆ. ಈ ಎಲ್ಲದರ ಹಿಂದೆಯೂ 'ಡಿಸೋಜತನ' ಗುರುತಿಸಬಹುದಾಗಿದೆ.

"ಡಿಸೋಜ ಅವರನ್ನು ಮೃದು ಹೃದಯದ ಬಂಡಾಯಗಾರ ಎಂದು ಅನೇಕರು ಬಣ್ಣಿಸಿದ್ದು ಮೇಲ್ನೋಟಕ್ಕೆ ಈ ಮಾತು ನಿಜ. ಆದರೆ ಅವರ ಒಳಗಿನ ಒಬ್ಬ ಮಹಾ ಬಂಡಾಯಗಾರ ಎಂಬುದೆ ನಿಜವಾದ ಸತ್ಯ. ಸಾಹಿತ್ಯ ಸಂಗೀತ ಸಂಸ್ಕೃತಿಯಿಂದ ಸಮೃದ್ಧವಾಗಿ, ನಾಡಿನಲ್ಲಿಯೇ ಹೆಸರಾಗಿರುವ ಸಾಗರ ೨೦೦೫ರಲ್ಲಿ ಹಿಂದೂ–ಮುಸ್ಲಿಂ ಕೋಮುಗಲಭೆಯಿಂದ ಅಕ್ಷರಸಃ ಹೊತ್ತಿ ಉರಿಯಿತು. ಧರ್ಮದ ಅಮಲಿನ ಜನರ ಪದತಲದಲ್ಲಿ ನಲುಗಿ ಸಾಮಾನ್ಯರ ಮನೆ, ಮಠ, ಅಂಗಡಿ, ಮುಗ್ಗಟ್ಟುಗಳು ನಾಶವಾಗಿದ್ದವು, ತಮ್ಮೂರಿನ ಸಾಮಾಜಿಕ ಆರೋಗ್ಯ ಹದಗೆಟ್ಟದ್ದನ್ನು ಕಣ್ಣಾರೆ ಕಂಡ ಡಿಸೋಜ ಪ್ರಜ್ಞಾವಂತರೊಂದಿಗೆ ಸೌಹಾರ್ದ ಜಾಥಾಮೂಲಕ ಬೀದಿಗಿಳಿದು ಮತೀಯ ಸೌಹಾರ್ದ ಮೂಡಿಸಿದರು. ಸಾರ್ವಜನಿಕ ಬಹಿರಂಗ ಸಭೆಯಲ್ಲಿ ಅದ್ಭುತವಾಗಿ ಮಾತನಾಡಿದರು. ಧಾರ್ಮಿಕ ಅಮಲಿನ ಜನ ಸೃಷ್ಟಿಸುವ ಇಂತಹ ಘಟನೆಗಳು ಮತ್ತೊಮ್ಮೆ ಮರುಕಳಿಸದಿರಲಿ ಎಂದು ಎಚ್ಚರಿಕೆ ಕೊಟ್ಟರು".[೭]

ನಾಡಿ ಅಗತ್ಯಬಿದ್ದಾಗ ಬೀದಿಗಿಳಿದಿದ್ದಾರೆ. ಹೋರಾಟಗಾರರ ಜತೆ ಹೆಜ್ಜೆ ಸೇರಿಸಿದ್ದಾರೆ. ಅವರ ಆತ್ಮವಿಶ್ವಾಸ ಎತ್ತಿಹಿಡಿದಿದ್ದಾರೆ. ೧೯೯೬ರ ನವೆಂಬರ್ ೨೯ರಂದು ಸಾಗರ ಸಹ್ಯಾದ್ರಿಗಣಿ ವಿರೋಧಿ ರ್‍ಯಾಲಿಯ ಮುಂದಾಳತ್ವವನ್ನು ಅವರು ವಹಿಸಿಕೊಂಡಿದ್ದರು. ನಾಡಿನ ಹೆಸರಾಂತ ಸಹ್ಯಾದ್ರಿ ಶ್ರೇಣಿಯ ಅಮೂಲ್ಯ ನಿಸರ್ಗದತ್ತ ಸಂಪತ್ತು ಕಳೆದುಕೊಳ್ಳುವ ಅಪಾಯ ಒದಗಿ ಬಂದಿತ್ತು. ಅಂತಿಮವಾಗಿ ಸರ್ಕಾರ ಹೋರಾಟಕ್ಕೆ ಮಣಿದು ಗಣಿ ಉದ್ಯಮಕ್ಕೆ ಭೂಮಿಕೊಡುವ ಪ್ರಸ್ತಾಪವನ್ನು ಕೈ ಬಿಟ್ಟಿತು.

'ಜೋಗ ಜಲಪಾತ ಉಳಿಸಿ' ಚಳುವಳಿ ಸಹ ಡಿಸೋಜ ಅವರ ನೇತೃತ್ವದಲ್ಲಿ ನಡೆದಿದೆ. ಜಲಪಾತದ ಸಹಜ ಸೌಂದರ್ಯ ಸಂರಕ್ಷಣೆಯ ಹಿನ್ನೆಲೆಯಲ್ಲಿ ಹಲವಾರು ಲೇಖನ, ಪುಸ್ತಕಗಳನ್ನು ಬರೆದಿದ್ದಾರೆ. ಇದರೊಂದಿಗೆ ಅನೇಕ ಚಿಕ್ಕ–ಪುಟ್ಟ ಪರಿಸರ ಹೋರಾಟಗಳಲ್ಲಿ ಡಿಸೋಜ ಭಾಗವಹಿಸಿದ್ದಾರೆ.

ಸೊರಬ ತಾಲ್ಲೂಕಿನ ದಂಡಾವತಿ ನದಿಗೆ ಅಣೆಕಟ್ಟು ಕಟ್ಟುವ ಸರ್ಕಾರದ ಯೋಜನೆಯನ್ನು ನಾಡಿ ತೀವ್ರವಾಗಿ ವಿರೋಧಿಸಿದರು.

ಸಾಗರ ತಾಲ್ಲೂಕಿನಲ್ಲಿ ಮುಳುಗಡೆಯ ಸಮಸ್ಯೆಯನ್ನು ಜೀವಂತವಾಗಿ ಕಂಡು ಅನುಭವಿಸಿ ಬರೆದವರು ತಮ್ಮ ಕಣ್ಣೆದುರಿನಲ್ಲಿಯೇ ಇನ್ನೊಂದು ಮುಳುಗಡೆಯ ತಯಾರಿ ನಡೆಯುತ್ತಿರುವುದನ್ನು ನೋಡಿ ಅವರಿಗೆ ಸಹಿಸಲಾಗಲಿಲ್ಲ. ತೀವ್ರ ಪ್ರತಿಭಟನೆಯ ಅನಂತರ ಈ ಯೋಜನೆಯು ಸ್ಥಗಿತಗೊಂಡಿತು. ಹಾಗೆಯೇ ೨೦೦೫ರ 'ಶರಾವತಿ ಉಳಿಸಿ ಜಾಥಾ', ಸಾಗರದ ರೈಲ್ವೇ ಚಳುವಳಿ ಹೀಗೆ ಹತ್ತು ಹಲವು ಹೋರಾಟಗಳಲ್ಲಿ ಭಾಗವಹಿಸಿ ಸಾರ್ವಜನಿಕರ ಸೇವೆಯಲ್ಲಿ ಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ. ಹೋರಾಟ ದೊಡ್ಡದಿರಲಿ, ಚಿಕ್ಕದಿರಲಿ ನಾಡಿ ಅತ್ಯಂತ ಬದ್ದತೆ ಹಾಗೂ ಪ್ರಾಮಾಣಿಕತೆಯಿಂದ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಅದರ ಯಶಸ್ಸಿಗೆ ಹಗಲು ರಾತ್ರಿ ಭುಜಕೊಟ್ಟು ದುಡಿದಿದ್ದಾರೆ. ಅವರ ಬರಹ ಮಾತುಗಳಂತೆ ಹೋರಾಟಕ್ಕೆ ದಣಿವಿಲ್ಲ.

ಇಂತಹ ಅಪೂರ್ವ ವ್ಯಕ್ತಿತ್ವವುಳ್ಳ ನಾಡಿ ಎಂದಿಗೂ ಪ್ರಶಸ್ತಿ ಪುರಸ್ಕಾರಗಳ ಬೆನ್ನಟ್ಟಿ ಹೋಗಿಲ್ಲ. ಅವೆಲ್ಲವೂ ಡಿಸೋಜರನ್ನು ಹುಡುಕಿಕೊಂಡು ಬಂದಿವೆ. ಶಿವಮೊಗ್ಗ ಜಿಲ್ಲಾ ಆರನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪುರಸ್ಕಾರ, ಗುಲ್ವಾಡಿ ವೆಂಕಟರಾವ್ ಪ್ರಶಸ್ತಿ, ಸಂದೇಶ್ ಸಾಹಿತ್ಯ ಪ್ರಶಸ್ತಿ, ನಿರಂಜನ ಸಾಹಿತ್ಯ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ಕುವೆಂಪು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್, ಕೇಂದ್ರ ಸಾಹಿತ್ಯ ಅಕಾಡೆಮಿಯ ಬಾಲ

ಸಾಹಿತ್ಯ ಪುರಸ್ಕಾರ ಸೇರಿದಂತೆ ಹಲವು ಪ್ರಶಸ್ತಿ-ಪುರಸ್ಕಾರಗಳು ಶ್ರೀಯುತರಿಗೆ ಸಂದಿವೆ. ಅಲ್ಲದೆ ಜನವರಿ ೨೦೧೪ರಲ್ಲಿ ಮಡಿಕೇರಿಯಲ್ಲಿ ನಡೆದ ೮೦ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದು ಕನ್ನಡಿಗರಿಗೆ ಹೆಮ್ಮೆಯ ವಿಷಯವಾಗಿದ್ದು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ "ಕನ್ನಡ ನಾಡು-ನುಡಿಗೆ ಪ್ರತಿಯೊಬ್ಬರೂ ಕಂಕಣ ಬದ್ಧರಾಗಿರಬೇಕು. ಪ್ರತಿಯೊಬ್ಬರಲ್ಲಿಯೂ ಸಮಗ್ರ ಕರ್ನಾಟಕದ ದೃಷ್ಟಿಕೋನವಿರಬೇಕು. ನಾವೆಲ್ಲರೂ ಕನ್ನಡಿಗರು ಎಂಬ ಭಾವನೆ ಎಲ್ಲರಲ್ಲಿಯೂ ಇರುವಂತಾಗಬೇಕು. ನಾಡಿನ ಗಡಿ ಪ್ರದೇಶಗಳ ಕುಗ್ರಾಮಗಳಿಗೂ ಸರ್ಕಾರದ ಸೌಲಭ್ಯಗಳು ತಲುಪುವಂತಾಗಬೇಕು"[೮] ಎಂದು ಕರೆ ನೀಡಿದರು.

ಅಡಿಟಿಪ್ಪಣಿ

೧. ಡಾ ಸರ್ಫ್ರಾಜ್ ಚಂದ್ರಗುತ್ತಿ : ನಾ.ಡಿಸೋಜ ಎಂಬ ಶರಾವತಿಯ ನಾಲ್ಕು ಜಲಧಾರೆ....., ಪು. ೬.

೨. ಅದೇ, ಪು. ೭.

೩. ಪತ್ರಿಕಾ ಲೇಖನ : ಸ್ಪರ್ಧಾಚೈತ್ರ ಮಾಸಿಕ, ಜನವರಿ ೨೦೧೪, ಪು. ೧೫.

೪. ಪತ್ರಿಕಾ ಲೇಖನ : ಸ್ಪರ್ಧಾಸ್ಫೂರ್ತಿ ಮಾಸಿಕ, ನಾಡುನುಡಿ ಹಬ್ಬ: ಜನವರಿ ೨೦೧೪, ಪು. ೭.

೫. ಡಾ ಸರ್ಫ್ರಾಜ್ ಚಂದ್ರಗುತ್ತಿ : ನಾ.ಡಿಸೋಜ ಎಂಬ ಶರಾವತಿಯ ನಾಲ್ಕು ಜಲಧಾರೆ....., ಪು. ೭೭..

೬. ಅದೇ, ಪು. ೭೯.

೭. ಅದೇ, ಪು. ೮೩.

೮. ಜನಪದ ಮಾಸಿಕ : ಫೆಬ್ರವರಿ ೨೦೧೪, ಪು. ೮.

*****

ಅಧ್ಯಾಯ – ೩

ನಾ. ಡಿಸೋಜರ ಕತೆಗಳಲ್ಲಿ ಸಾಮಾಜಿಕ – ಸಾಂಸ್ಕೃತಿಕ ನೆಲೆಗಟ್ಟಿನ ಕತೆಗಳ ವಿವೇಚನೆ

ನಾ.ಡಿಸೋಜ ಸಮಾಜದ ಒಳ–ಹೊರಗನ್ನು ಶೋಧಿಸಿ ತನ್ನ ಅನುಭವದ ಮೂಲಕ ವಿಶ್ಲೇಷಿಸಿ ಸತ್ಯವನ್ನು ಹೊರತೆಗೆಯುವ ಕೆಲಸ ಮಾಡಿದ್ದಾರೆ. ಸುಮಾರು ೨೪ ವರ್ಷಗಳ ಕಾಲ ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸಮಾಡಿ ತಮ್ಮ ಅನುಭವ ದ್ರವ್ಯವನ್ನು ಕಥೆಗಳ ಮೂಲಕ ಬಿತ್ತರಿಸಿದ್ದಾರೆ. ತನ್ನ ಸುತ್ತಲ ಬದುಕನ್ನು ಗಾಢವಾಗಿ ಪ್ರೀತಿಸುವ, ಎಚ್ಚರ ಮನಃಸ್ಥಿತಿಯ, ಸಾಮಾಜಿಕ ಕಾಳಜಿಯಿರುವ ಅಪರೂಪದ ಲೇಖಕ ನಾ.ಡಿಸೋಜ. ತಾನಿರುವ ಈ ಸಮಾಜ, ಜಗತ್ತು ಸದಾ ಆರೋಗ್ಯದಿಂದ ಕೂಡಿರಬೇಕು. ಯಾವುದೇ ಅಡ್ಡಿಆತಂಕಗಳು ಈ ಬದುಕನ್ನು, ಸಮಾಜವನ್ನು ಬಾಧಿಸಬಾರದು. ಹಾಗಾದಾಗಲೆಲ್ಲ ಅವರ ಕವಿಹೃದಯ ಅಸ್ತವ್ಯಸ್ಥವಾಗುತ್ತದೆ, ಕಾಡುತ್ತದೆ. ಹೀಗೆ ಕಾಡುವ ಸಮಾಜದ ಎಲ್ಲ ಬಗೆಯ ಘಟನೆ, ಸನ್ನಿವೇಶಗಳು ಅವರ ಬರೆಹಕ್ಕೆ ವಸ್ತುವಾಗುತ್ತದೆ. ಕತೆಯಾಗಿ–ಕಾದಂಬರಿಯಾಗಿ–ಹೋರಾಟವಾಗಿ ಅಭಿವ್ಯಕ್ತಿಯ ವಿವಿಧ ರೂಪ ಪಡೆಯುತ್ತವೆ. ಹಾಗೆಯೇ ಮಾನವೀಯ ಸಂಬಂಧಗಳಲ್ಲಿ ಅವರಿಗೆ ಅತಿಯಾದ ನಂಬಿಕೆ. ಮನುಷ್ಯ – ಮನುಷ್ಯರ ನಡುವಿನ ಸಹಜ ಸಂಬಂಧಗಳು ಗಟ್ಟಿಯಾಗಬೇಕು. ಬದುಕು ಸುಂದರವಾಗಿ ಅರಳಬೇಕು ಎಂದು ಬಯಸುವ ಇವರು ಮನುಷ್ಯ ಸಂಬಂಧಗಳ ಹಲವು ಮುಖಗಳನ್ನು ಕತೆಗಳ ಮೂಲಕ ತೆರೆದಿಟ್ಟಿದ್ದಾರೆ. ಅಲ್ಲಿಯ ಸಹಜತೆಯೊಂದಿಗೆ – ಕೃತಕತೆ – ಕೃತ್ರಿಮತೆ – ಸೋಗಲಾಡಿತನ – ಆಡಂಬರ ಮುಂತಾದ ಅಂಶಗಳನ್ನು ತೋರ್ಪಡಿಸಿರುವುದು ಕಂಡುಬರುತ್ತವೆ. ಪ್ರೀತಿ, ಸಿಟ್ಟು ಭಾವನಾತ್ಮಕ ತುಡಿತ ಮಿಡಿತಗಳು ಜಾತಿವ್ಯವಸ್ಥೆ, ಅಸ್ಪೃಶ್ಯತೆ, ಭ್ರಷ್ಟಾಚಾರ, ಶೋಷಣೆ ಕೌಟುಂಬಿಕ ಸಂಬಂಧಗಳು, ರಾಜಕೀಯ ವ್ಯವಸ್ಥೆ, ಹೆಣ್ಣಿನ ಪ್ರಸ್ತುತ ಸ್ಥಿತಿಗತಿಗಳು, ಅನಕ್ಷರತೆ, ಬಡತನ, ಇವೇ ಮೊದಲಾದ ಅಂಶಗಳನ್ನು ಸಾಮಾಜಿಕ ನೆಲೆಗಟ್ಟಿನ ಕತೆಗಳ ವಸ್ತುರೂಪವಾಗಿ ವಿವೇಚಿಸಬಹುದು.

ಡಿಸೋಜ ಜಾತಿಧರ್ಮ ಮತ ಮೌಢ್ಯಗಳ ಹಂಗನ್ನು ಹರಿದುಕೊಂಡ ಲೇಖಕ. ಅವರದ್ದು ವಿಶ್ವಧರ್ಮದ ಕನಸು. ಮಾನವೀಯ ಸಮಾಜವೊಂದು ನಿರ್ಮಾಣಗೊಳ್ಳಬೇಕೆಂಬ ತುಡಿತ. ಅವರ ಕತೆಗಳು ಹಾಗೂ ಎಲ್ಲಾ ಬಗೆಯ

[illegible]

ಬರಹಗಳಲ್ಲೂ ಕಂಡುಬರುತ್ತದೆ. ಅದಕ್ಕಾಗಿ ಅವರು ತಮ್ಮ ಸುತ್ತಲಿನ ಸಮಾಜವನ್ನು ಒತ್ತಾಯಿಸುತ್ತಾರೆ. ತನ್ನ ಧರ್ಮವನ್ನು ಒಳಗೊಂಡಂತೆ ಸುತ್ತಣ ಎಲ್ಲ ಜನಸಮುದಾಯಗಳ ಬಗ್ಗೆ ಬರೆದಿರುವ ಇವರ ಕತೆಗಳಲ್ಲಿ ಕಲೆ, ಸಂಸ್ಕೃತಿ, ಆಚಾರ-ವಿಚಾರ, ನಂಬಿಕೆಗಳು, ಜೀವನ ಮೌಲ್ಯಗಳು ದಟ್ಟವಾಗಿದ್ದು ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಅವುಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಹಳ್ಳಿಗೆ ನುಗ್ಗಿದ ಹೆಮ್ಮಾರಿ

ಇಬ್ಬರು ಸಾಹುಕಾರ ಜಮೀನ್ದಾರರನ್ನು ಉಳಿಸಲಿಕ್ಕೆ ಆರು ಹಳ್ಳಿಗಳ ಬಲಿ! ಆರುನೂರು ಹಳ್ಳಿಗರ ಬಲಿ ಕೊಡುವ ಸರ್ಕಾರದ ಅಮಾನುಷ ನಿರ್ಧಾರ ಎಷ್ಟು ಸರಿ ಎಂಬುದನ್ನು ಈ ಕತೆಯು ಪ್ರಶ್ನಿಸುತ್ತದೆ.

ಕತೆಯಲ್ಲಿ ಕತೆಗಾರರು ಬಳಸುವ

"ರಾಗಿ ಬೀಸೋ ಕಲ್ಲೆ ರನ್ನ ಮುತ್ತಿನಕಲ್ಲೆ

ಅಣ್ಣನ ಮನೆಯ ಸಿರಿಗಲ್ಲೆ! ಪಟ್ಟೆ ಕಲ್ಲೆ

ಭಾಗ್ಯದ ಕಲ್ಲೆ ಕೊಡು ದನಿಯ"[1] ಎಂದು ಹೆಂಗಳೆಯರು ಬೀಸುಕಲ್ಲಿನ ಸುತ್ತ ಕುಳಿತು ಹಾಡುವುದು ಜನಪದ ಲೇಪನ ಹೊಂದಿರುವ ಹಳ್ಳಿಯ ಜನರ ಬದುಕು, ಸಾಂಸ್ಕೃತಿಕ ಚಿತ್ರಣವನ್ನು ಓದುಗರಿಗೆ ನೀಡುತ್ತದೆ. ಕತೆಯಲ್ಲಿ ಹೆಚ್ಚು ಬಳಕೆಯಾಗುವ ಪದಗಳಾದ 'ಡೇಮು', 'ಮೋಟಾರು' ಮುಂತಾದವುಗಳನ್ನು ಕತೆಗಾರರು ಅಲ್ಲಿನ ಸಹಜ ಪ್ರಾಂತೀಯ ಭಾಷೆ, ಮಾತುಗಾರಿಕೆಯಲ್ಲಿ ಬಳಸಿರುವುದು ಕಂಡುಬರುತ್ತದೆ.

ಪಟ್ಟಣದ ಗಂಧ-ಗಾಳಿ ಬೀಸಿರದ ಹೇಮಾವತಿ ದಡದ ಮಲೆನಾಡಿನ ಪುಟ್ಟಹಳ್ಳಿ 'ಸಣ್‌ಮನೆ'. ಮಳೆಗಾಲದಲ್ಲಿ ನೆರೆಹಾವಳಿ ಬೇಸಿಗೆಯಲ್ಲಿ ಜಲಕ್ಷಾಮದಂತಹ ಧಾರುಣ ಸ್ಥಿತಿಯಿಂದ ಬಿಡುಗಡೆ ಬಯಸಿ ಕಂಗಾಲಾಗಿದ್ದ ಹಳ್ಳಿಗರಿಗೆ ಅನಿರೀಕ್ಷಿತವಾಗಿ ಆ ಹಳ್ಳಿಯ ಸಮೀಪ ಸರ್ಕಾರದವರು ಜಲಾಶಯ ಕಟ್ಟುವ ಸುದ್ಧಿ ಕೇಳಿ ಅವರ ಸಂತೋಷಕ್ಕೆ ಪಾರವೇ ಇಲ್ಲದಂತಾಗುತ್ತದೆ. ಕೆಲಸ ಪ್ರಾರಂಭ ಮಾಡಿ ಸಾಗುತ್ತಿದ್ದಾಗ ಯಾರೋ ಅಲ್ಲಿಯ ಒಂದಿಬ್ಬರು ಶ್ರೀಮಂತ ಜಮೀನ್ದಾರರಿಗೆ ನಷ್ಟವಾಗುತ್ತದೆಂಬ ಕಾರಣಕ್ಕೆ 'ಡ್ಯಾಮು ಕಟ್ಟೋದಕ್ಕೆ ಇದು ಸರಿಯಾದ ಜಾಗ ಅಲ್ಲ' ಎಂಬ ಕುಂಟು ನೆಪ ಹೇಳಿ ಕೆಲಸ ಸ್ಥಗಿತಗೊಳ್ಳುವ ರೀತಿಯನ್ನು ನೋಡಿದರೆ ಜನಪರ ಸರ್ಕಾರ ನಮ್ಮಲ್ಲಿ ನಿಜಕ್ಕೂ ಜೀವಂತವಾಗಿದೆಯೇ? ಎಂಬುದನ್ನು ಧ್ವನೀಕರಿಸುತ್ತದೆ. ವರವಾಗಬೇಕಾದ ಡೇಮು

ಹಳ್ಳಿಗರಿಗೆ ಹೆಮ್ಮಾರಿಯಾಗುತ್ತದೆ. ಈ ಹಳ್ಳಿ ಮತ್ತೆ ಇನ್ನೂ ೫ ಹಳ್ಳಿಗಳು ಮುಳುಗಿ ಹೋಗುತ್ತವೆ.

ಸರ್ಕಾರ ನಿಮಗೆ ಹಣ ಕೊಡುತ್ತೆ, ಜಮೀನುಕೊಡುತ್ತೆ ನೀವು ಬೇರೆ ಕಡೆ ಹೋಗಿ ಜೀವಿಸಬಹುದು ಎಂಬ ಮಾತು ಹಳ್ಳಿಗರಿಗೆ ಬರಸಿಡಿಲು ಅಪ್ಪಳಿಸಿದಂತಾಗಿ ಶತಮಾನಗಳಿಂದ ಒಂದೆಡೆ ಬದುಕು ಕಟ್ಟಿಕೊಂಡಿದ್ದ ಅವರು ತಮ್ಮ ಮೂಲನೆಲೆಯನ್ನು ಬಿಟ್ಟು ಹೊರಡಬೇಕಾದುದು ನಿಜಕ್ಕೂ ಶೋಚನೀಯ. ಇದು ಇಂದಿನ ಸಮಾಜದಲ್ಲಿ ಬಡಜನರ ಜಮೀನನ್ನು ಸರ್ಕಾರ ತನ್ನ ಅಗತ್ಯಕ್ಕೆ ತಕ್ಕಂತೆ ವಶಪಡಿಸಿಕೊಂಡು ಅವರನ್ನು ಬೇರೆಡೆಗೆ ಸ್ಥಳಾಂತರಿಸುವ ಬಗೆಯೊಂದಿಗೆ ಸಮೀಕರಿಸಬಹುದು.

'ಒಂದು ಥಾನೆಲ್ಲಿನ ಕತೆ'

ಮೂಲತಃ ಕತೆಗಾರರು ಲೋಕೋಪಯೋಗಿ ಇಲಾಖೆಯಲ್ಲಿ ಸುಮಾರು ೨೪ ವರ್ಷಗಳ ಕಾಲ ಸುದೀರ್ಘ ಸೇವೆ ಸಲ್ಲಿಸಿದ್ದು ತಮ್ಮ ಅನುಭವ ದ್ರವ್ಯವನ್ನು ಕಥೆಯ ಮೂಲಕ ಬಿತ್ತರಿಸಿದ್ದಾರೆ. ಅಲ್ಲಿ ನಡೆಯುವ ಭ್ರಷ್ಟಾಚಾರ, ಕಳಪೆ ಕಾಮಗಾರಿಯನ್ನು ಕಣ್ಣಾರೆ ಕಂಡವರಾಗಿದ್ದು ಅದನ್ನು ವಿರೋಧಿಸಿ ಈ ಕತೆ ಬರೆದಿದ್ದಾರೆ.

ಇಲಾಖೆಯಲ್ಲಿದ್ದುಕೊಂಡೇ ತನ್ನ ಇಲಾಖೆಯ ವಿರೋಧ ಕಟ್ಟಿಕೊಂಡು ಅಲ್ಲಿ ನಡೆಯುವ ಲಂಚಗುಳಿತನ ಭ್ರಷ್ಟಾಚಾರದ ನೈಜ ಚಿತ್ರಣವನ್ನು ನೀಡಿರುವ ಕತೆಗಾರರ ಧೈರ್ಯ ನಿಜಕ್ಕೂ ಮೆಚ್ಚುವಂತಹದು. ಲೋಕೋಪಯೋಗಿ ಕೆಲಸ ಮಾಡಬೇಕಾದ ಈ ಇಲಾಖೆ ಇಂದಿಗೂ ಸಹ ಭ್ರಷ್ಟಾಚಾರವೆಂಬ ಪಾಪಕೂಪದಲ್ಲಿ ಮುಳುಗಿರುವುದು ಸಮಾಜದ ದುರ್ದೈವವೇ ಸರಿ.

ರಾಷ್ಟ್ರೀಯ ಹೆದ್ದಾರಿ ಡಿವಿಸನ್ನಿನಲ್ಲಿ ಸಾವು

ಇದು ಲೋಕೋಪಯೋಗಿ ಇಲಾಖೆಯ ಕಛೇರಿಯೊಂದರ ಸುತ್ತ ಹೆಣೆದ ಕತೆಯಾಗಿದ್ದು ಅಲ್ಲಿನ ಸಿಬ್ಬಂದಿ ವರ್ಗದವರ ಬೇಜವಾಬ್ದಾರಿ ಕಾರ್ಯವೈಖರಿ, ಭ್ರಷ್ಟಾಚಾರ ಕೀಳುಮಟ್ಟದ ಲಂಚಗುಳಿತನದ ನೈಜ ಚಿತ್ರಣ ನೀಡುತ್ತದೆ. ದೊಡ್ಡ ಅಧಿಕಾರಿಗಳಿಂದ ಹಿಡಿದು ಮ್ಯಾನೇಜರು, ಗುಮಾಸ್ತರು, ಇಂಜಿನಿಯರುಗಳು, ಅಕೌಂಟ್ಸ್ ಕ್ಲರ್ಕ್‌ಗಳು ಜವಾನರವರೆಗೆ ಲಂಚಕ್ಕಾಗಿ ಬಾಯಿ–ಬಾಯಿ ಬಿಡುವುದು, ಕಛೇರಿಯಲ್ಲಿ ಹಾಡ–ಹಗಲಲ್ಲೇ ನಡೆಯುವ ಧೂಮಪಾನ, ಮಧ್ಯಪಾನ, ಮಾಂಸಾಹಾರ ಸೇವನೆಯಂತಹ ನಿಷೇಧಿತ ಚಟುವಟಿಕೆಗಳಲ್ಲಿ ಯಾವ ಭಯವೂ ಇಲ್ಲದೆ ಅಧಿಕಾರಿವರ್ಗ ತೊಡಗುವುದು. ಹೆಣ್ಣು, ಹೆಂಡ, ಹಣ ಈ ಮೂರಕ್ಕೆ ಪ್ರಾಶಸ್ತ್ಯ

ನೀಡುವ ಅಧಿಕಾರಿ ವರ್ಗದ ಕೀಳುಮಟ್ಟದ ವರ್ತನೆ ಓದುಗರಿಗೆ ಅಸಹ್ಯ ತರಿಸುವಂತಹದು.

ಈ ಕತೆಯ ನಾಯಕ ಶ್ರೀನಾಯಕ್ ಒಬ್ಬ ಶುದ್ಧಹಸ್ತರಾಗಿದ್ದು ಕಛೇರಿಯಲ್ಲಿ ನಡೆಯುತ್ತಿದ್ದ ಎಲ್ಲಾ ದುರ್ವರ್ತನೆಗಳನ್ನು ಕಣ್ಣಾರೆ ಕಂಡರೂ ಮೂಕ ಸಾಕ್ಷಿಯಾಗಿ ನಿಲ್ಲುತ್ತಾನೆ. ಒಂದು ದಿನ ಆತ ಕಛೇರಿಯಲ್ಲಿಯೇ ಕುರ್ಚಿಗೆ ಒರಗಿ ಪ್ರಾಣಬಿಡುತ್ತಾನೆ. ಕೊನೆಗೆ ಬರುವ ವೈದ್ಯಕೀಯ ಪತ್ರದಲ್ಲಿ ಶ್ರೀನಾಯಕ್ ಅವರು ೧೯೫೨ನೇ ಸೆಪ್ಟೆಂಬರ್ ೩ನೇ ತಾರೀಖು ತೀರಿಕೊಂಡಿರುತ್ತಾರೆ ಎಂದು ನಮೂದಿಸಲಾಗಿರುತ್ತದೆ. ಆದರೆ ವಾಸ್ತವದಲ್ಲಿ ಅದು ಆತ ಕೆಲಸದ ಮೇಲೆ ರಿಪೋರ್ಟ್ ಮಾಡಿಕೊಂಡ ದಿನವಾಗಿರುತ್ತದೆ. ಕೆಲಸಕ್ಕೆ ಸೇರಿದ ದಿನದಂದೇ ಆತ ಅಲ್ಲಿ ನಿಜಕ್ಕೂ ಸತ್ತುಹೋದನೆಂದು ಹೇಳುವ ಕತೆಗಾರರ ಜಾಣತನ ನಿಜಕ್ಕೂ ಮೆಚ್ಚುವಂತಹದು.

ಗಣಿ

ಈ ಕತೆಯು ಸಮಾಜದಲ್ಲಿರುವ ಬಡತನ, ಬಡವರ ದಯನೀಯ ಸ್ಥಿತಿ, ಬಡ ಹೆಣ್ಣುಮಕ್ಕಳನ್ನು ಸಮಾಜ ನೋಡುವ ಕೆಟ್ಟ ದೃಷ್ಟಿಕೋನದ ಬಗ್ಗೆ ಬೆಳಕು ಬೀರುತ್ತದೆ.

ಈ ಕತೆಯ ನಾಯಕಿ ತಾಯಮ್ಮನ ಮಗಳು ಚಿಕ್ಕಿ. ತಾಯಮ್ಮ ಬಡವಿ, ವಿಧವೆ. ಚಿಕ್ಕಿ ಹುಟ್ಟಿದ ನಾಲ್ಕನೇ ದಿನ ಅವಳಪ್ಪ ತೀರಿಕೊಳ್ಳುತ್ತಾನೆ. ಗಂಡನ ತಮ್ಮಂದಿರ ಮಸಲತ್ತಿನಿಂದಾಗಿ ಆಸ್ತಿಯಲ್ಲಿ ಬಿಡಿಗಾಸೂ ಸಹ ಇವಳಿಗೆ ಸೇರದಂತಾದಾಗ ಬೀದಿಗೆ ಬೀಳುತ್ತಾಳೆ. ಆದರೂ ಎದೆಗುಂದದೇ ಅವರಿವರ ಮನೆಗೆಲಸ ಮಾಡಿಕೊಂಡು ಮಗಳನ್ನು ಚೆನ್ನಾಗಿ ಬೆಳೆಸುತ್ತಾಳೆ. ಮಗಳಿಗೀಗ ೧೪ರ ಪ್ರಾಯ. ಆಕೆ ದೊಡ್ಡವಳಾದ ವಿಷಯ ಹೇಗೋ ಸೂಳೆಗಾರಿಕೆ ಮಾಡುವ ಬಾಯಮ್ಮನಿಗೆ ಗೊತ್ತಾಗಿ ತಾಯಮ್ಮ ಮನೆಯಲ್ಲಿ ಇಲ್ಲದಿರುವ ಸಮಯದಲ್ಲಿ ಬಂದು "ಬೋ ಚಂದಾಕಿದೀಯ.... ರಸ ತುಂಬಿಕೊಂಡಿದೀಯ..... ರಸಬಾಳೆ ಹಣ್ಣು.... ನಿನ್ನವ್ವನ ಕಷ್ಟ ದೂರ ಆತು..... ಅವಳಿನ್ನು ಅವರಿವರ ಮನೆಯಾಗೆ ಗೇಯೋದು ಬ್ಯಾಡ..... ನೀನೀಗ ಚಿನ್ನದ ಗಣಿ.... ದಿನಕ್ಕೆ ಸಾವಿರ ದುಡೀಬೋದು"[೨] ಎಂದು ಹೇಳುವ ಮಾತು ಚಿಕ್ಕಿಯನ್ನು ವೇಶ್ಯಾವೃತ್ತಿಯತ್ತ ಸೆಳೆಯಲು ಮಾಡುವ ಹುನ್ನಾರವಾಗಿದೆ. ಇಲ್ಲಿ ಚಿಕ್ಕಿಯನ್ನು ಬೆಲೆ ಬಾಳುವ ಚಿನ್ನದಗಣಿಗೆ ಹೋಲಿಸಲಾಗಿದೆ. ಗಂಡ ದಿಕ್ಕಿಲ್ಲದ ಮನೆ, ಬಡಹೆಣ್ಣು ಮಕ್ಕಳನ್ನು ಸಮಾಜವು ಕಾಣುವ ರೀತಿ, ಹೇಗಾದರೂ ಮಾಡಿ ಹಣದ ವ್ಯಾಮೋಹ ತೋರಿಸಿ ಅವರ ದಿಕ್ಕು ತಪ್ಪಿಸಿ ಕೀಳುವೃತ್ತಿಗೆ ಇಳಿಯುವಂತೆ ಮಾಡುವ ಪರಿ ನಿಜಕ್ಕೂ ನಾಚಿಕೆಗೇಡು.

ಗೋಪುರ ಗಂಟೆ ಮತ್ತು ನಾಲಿಗೆ

ಚರ್ಚಿನ ಗೋಪುರದ ಗಂಟೆ ಹಲವು ವರ್ಷಗಳಿಂದ ಜನರನ್ನು ಜಾಗೃತರನ್ನಾಗಿಸಿ, ಕಾಲಕಾಲಕ್ಕೆ ಎಚ್ಚರಿಸುತ್ತ ಸಮಯ ಬಂದಾಗ ಮುಖ್ಯ ವಿಷಯಗಳತ್ತ, ಘಟನೆಗಳತ್ತ ಅವರ ಗಮನ ಸೆಳೆಯುತ್ತ ಬಂದಿರುತ್ತದೆ. ಊರಿನ ಜನರೆಲ್ಲ ನಿತ್ಯಕಾಯಕಗಳಿಗೆ ಗಂಟೆಯ ಶಬ್ಧದ ಮೇಲೆ ಅವಲಂಬಿಸಿರುವಾಗ ಒಂದು ದಿನ ರಾತ್ರಿ ಕಳ್ಳನೊಬ್ಬ ಆ ಗಂಟೆ ಕದಿಯಲು ಬಂದು ಅದು ಸಾಧ್ಯವಾಗದೇ ಇದ್ದಾಗ ಅದರ ನಾಲಿಗೆಯನ್ನು ಕಸಿದು ಸಿಕ್ಕಿಬೀಳುತ್ತಾನೆ.

ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ ಇಂದಿನ ಸಮಾಜದಲ್ಲಿ ಸಂಪ್ರದಾಯ, ಧರ್ಮ, ದೇವರ ಭಯ, ಭೀತಿಯಿಲ್ಲದೇ ಮನುಷ್ಯ ದೇವರ ಗೋಪುರದ ಗಂಟೆಯನ್ನು ಕಳ್ಳತನ ಮಾಡಲು ಹೋಗುವುದು. ಜನರು ಎಂತಹ ನೀಚಸ್ಥಿತಿಗೆ ಇಳಿದಿದ್ದಾರೆ ಎಂಬುದನ್ನು ತಿಳಿಸುತ್ತದೆ. ಸಮಾಜದಲ್ಲಿ ಜನರು ಹಣ, ವಡವೆಗಳ ಮೇಲಿನ ಅತಿಯಾದ ಆಸೆಯಿಂದ ದೇವರ ಗುಡಿಗೆ ಕನ್ನ ಹಾಕುವುದು ಸಹ ಸಾಮಾನ್ಯ ಸಂಗತಿಯಾಗಿದ್ದು ಧರ್ಮ, ದೇವರ ಭಯ ನಂಬಿಕೆಗಳು ಮಾಯವಾಗುತ್ತಿರುವುದನ್ನು ಸಂಕೇತಿಸುತ್ತದೆ.

ಪಿ.ಪಿ.ನಾಯಕನು ಅವನ ಹಿಂಬಾಲಕರು

ಹಳ್ಳಿಯ ಜನರನ್ನು ಅಜ್ಞಾನದ ಮಡುವಿನಲ್ಲಿ ತಳ್ಳಿ, ಕ್ರೌರ್ಯತೆಯಿಂದ ಜನರನ್ನು ಹೆದರಿಸಿ ಅವರಿಂದ ಸದಾ ದುಡಿಸಿಕೊಂಡು ದಷ್ಟಪುಷ್ಟನಾಗಿ ಬೆಳೆದಿದ್ದ ಕೋಟೆ ನಾಯಕನ ಕತೆಯಿದು.

ಜನಗಣತಿ ಮಾಡಲು ಹೋದ ಸರ್ಕಾರಿ ನೌಕರನಿಗೆ ಕೋಟೆಯ ಬಾಗಿಲಲ್ಲಿ ಮೊದಲಿಗೆ ಎದುರಾಗುವವನೇ ಪಿ.ಪಿ.ನಾಯಕ, ಅಂದ್ರೆ 'ಪ್ರಜಾಪ್ರಿಯ' ನಾಯಕ ಅಂತ. ಇದು ಆತ ತನಗೆ ತಾನೇ ಇಟ್ಟುಕೊಂಡ ಬಿರುದು. ಕೋಟೆ ಕೊಲ್ಲೂರು. ಅಮಾಚೆ, ಗುಬ್ಬಿಗಲ್ಲು ಮೊದಲಾದ ಹಳ್ಳಿಯ ಜನರನ್ನು ವಿದ್ಯೆ ಕಲಿಯದಂತೆ ಮಾಡಿ ಅವರಿಂದ ಜೀತ ಮಾಡಿಸಿ ಕೋಟೆ ನಾಯಕನಾಗಿ ಮೆರೆಯುತ್ತಿದ್ದ. ಜನಗಣತಿ ಮಾಡುವ ಅಧಿಕಾರಿಯನ್ನು ಸ್ವತಃ ತಾನೇ ಖುದ್ದು ಈ ಹಳ್ಳಿಗಳಿಗೆ ಕರೆದೊಯ್ದು ಪ್ರತಿಯೊಂದು ಮನೆಯವರ ಹೆಸರನ್ನು ಹೇಳಿ ತನ್ನಿಷ್ಟದಂತೆ ಬರೆಸುತ್ತಾನೆ. ಉದ್ಯೋಗದ ಖಾಲಂನಲ್ಲಿ ಎಲ್ಲರಿಗೂ 'ಬೇಸಾಯ' ಎಂದು ಬರೆಯುವಂತೆ ಹೇಳುತ್ತಾನೆ. ಹಳ್ಳಿಯ ಜನರು ಈತನಿಗೆ ಹೆದರಿ ಜೈಕಾರ ಹಾಕುವುದು ಕಂಡುಬರುತ್ತದೆ. ಹಳ್ಳಿಯಲ್ಲಿ ಹೆಚ್ಚು ಜನ ಬೆನ್ನು

ಮೂಳೆ ಇಲ್ಲದ ಗೂನರಾಗಿದ್ದು ಇವರೆಲ್ಲಾ ಈತನಿಂದ ಶಿಕ್ಷಿಸಲ್ಪಟ್ಟು ಬೆನ್ನುಮೂಳೆ ಮುರಿಸಿಕೊಂಡವರು. ಈತ ಎಂತಹ ಕ್ರೂರಿಯಾಗಿದ್ದನೆಂದರೆ ವಿದ್ಯೆ ಕಲಿಯಲು ಕಾಲೇಜಿಗೆ ಹೋದ ನಾಲ್ವರು ತರುಣರನ್ನು ತನ್ನ ಕೋಟೆ ಬಾಗಿಲಿನಲ್ಲಿ ಅವರ ಬೆನ್ನುಮೂಳೆ ತೆಗೆಸಿರುತ್ತಾನೆ. ಜನಗಣತಿ ಫಾರಂನಲ್ಲಿ ಇವರ ಹೆಸರು ಬರೆಯಲು ಸರ್ಕಾರಿ ನೌಕರ ಮುಂದಾದಾಗ ಪಿ.ಪಿ.ನಾಯಕ ಹೇಳುವ ಮಾತು

"ಬೇಡ... ಜನಗಣತೀಲಿ ಇವರು ಬರೋದಿಲ್ಲ... ಈ ಮೂರು ಹಳ್ಳಿಗಳಲ್ಲಿ ಇರೋದು ಒಪ್ಪಿಕೊಂಡಿರೋ ಸತ್ಯಾನ ಇವರಿನ್ನೂ ಒಪ್ಪಿಕೊಂಡಿಲ್ಲ. ಇವರು ಮೊನ್ನೆ ಕಾಲೇಜು ಕಲಿತು ಇಲ್ಲಿಗೆ ಬಂದೋರು... ಇವರನ್ನು ಇಲ್ಲಿಯ ವಾತಾವರಣಕ್ಕೆ ಸರಿ ಹೋಗೋ ಹಾಗೆ ಮಾಡ್ತಿದೀನಿ.... ಇವರು ಸರಿ ಹೋದ ಮೇಲೇನೆ ಇವರ ಹೆಸರು ಜನಗಣತಿ ಪಟ್ಟೀಲಿ ಸೇರಬೇಕು... ಈಗಲ್ಲ"[೩] ಎಂಬುದು ಆತನ ಕ್ರೌರ್ಯ ವ್ಯಕ್ತಿತ್ವ ಹಾಗೂ ಸರ್ವಾಧಿಕಾರಿ ಧೋರಣೆಯನ್ನು ಸಂಕೇತಿಸುತ್ತದೆ. ವಾಸ್ತವದಲ್ಲಿ ಹಳ್ಳಿಯ ಬಹುತೇಕ ಮಂದಿ ಈತನ ಚಿತ್ರವಿಚಿತ್ರ ಹಿಂಸೆಗೆ ಸಿಲುಕಿ ಒಂದಲ್ಲಾ ಒಂದು ರೀತಿಯ ಅಂಗವೈಕಲ್ಯಕ್ಕೆ ಒಳಗಾಗಿದ್ದರೂ ಜನಗಣತಿ ಫಾರಂ 'ಅಂಗವಿಕಲರು' ಖಾಲಂನಲ್ಲಿ ಒಬ್ಬರ ಹೆಸರೂ ದಾಖಲಾಗದೇ ಇದ್ದುದು ಓದುಗರಿಗೆ ಪ್ರಶ್ನೆಗಾಗಿಯೇ ಉಳಿಯುತ್ತದೆ.

ಸಮಾಜದಲ್ಲಿ ಜನರು ತಮಗಾದ ಅನ್ಯಾಯ ದೌರ್ಜನ್ಯಗಳನ್ನು ಸಹಿಸದೆ ಸಂಘಟಿತರಾಗಿ, ಸುಶಿಕ್ಷಿತರಾಗಿ, ಹೋರಾಡಿದಾಗ ಮಾತ್ರ ಬಲಿಷ್ಟ ವ್ಯಕ್ತಿಗಳನ್ನು ಎದುರಿಸಿ ನೆಮ್ಮದಿಯ ಜೀವನ ನಡೆಸಲು ಸಾಧ್ಯವಾಗುತ್ತದೆ. ಆಗ ಪ್ರಜಾಪ್ರಭುತ್ವ ಎಂಬುದಕ್ಕೆ ಒಂದು ಅರ್ಥವೂ ಬರುತ್ತದೆ ಎಂಬುದು ನನ್ನ ಆಶಯ.

ನಡುವೆ ನಿಂತ ಜನ

ಇದು ತಂದೆ-ಮಕ್ಕಳ ಕೌಟುಂಬಿಕ ಸಮಸ್ಯೆಯೊಂದರ ಸುತ್ತ ಎಣೆದ ಕತೆಯಾಗಿದ್ದು ಕುಟುಂಬದೊಳಗೆ ಪ್ರೀತಿ ವಿಶ್ವಾಸದಿಂದ ಪರಿಹರಿಸಿಕೊಳ್ಳಬಹುದಾಗಿದ್ದ ಸಣ್ಣ ಸಮಸ್ಯೆಯನ್ನು ಕೋರ್ಟು ಕಛೇರಿ ಅಂತ ದೊಡ್ಡದಾಗಿಸಿ ಇದರಿಂದ ಅಪ್ಪ-ಮಕ್ಕಳ ಮಾನಸಿಕ ತಲ್ಲಣ ಹಾಗೂ ಹಲವು ವಿಷಮ ಪರಿಸ್ಥಿತಿಯತ್ತ ಸಾಗಿದ ಕಥಾವಸ್ತುವನ್ನು ಒಳಗೊಂಡಿದೆ.

ಕುದ್ರೋಳಿ ದೇವಸ್ಥಾನದ ಅರ್ಚಕರ ಮಗ ಸ್ಥಿತಿವಂತ ವೆಂಕಟರಮಣಭಟ್ಟರಿಗೆ ಇಬ್ಬರು ಮಕ್ಕಳು ಶೇಖರ ಮತ್ತು ಲೀಲಾ. ಮಗಳು ಹುಟ್ಟಿದ ಒಂದು ವರ್ಷದಲ್ಲಿ ಹೆಂಡತಿಯನ್ನು ಕಳೆದುಕೊಂಡ ಭಟ್ಟರು ಮಕ್ಕಳ ಮದುವೆ ಮಾಡಿದ ನಂತರ

ಏಕಾಂಗಿಯಾಗುತ್ತಾರೆ. ಪ್ರಾರಂಭದಲ್ಲಿ ಅನ್ಯೋನ್ಯವಾಗಿದ್ದ ಮಕ್ಕಳು ಶೇಖರನ ಅತ್ತೆ ಹೆಂಡತಿ ಇಲ್ಲಸಲ್ಲದ ಸರಕನ್ನು ತಲೆಯಲ್ಲಿ ತುರುಕಿ ಆಸ್ತಿಯಲ್ಲಿ ಪಾಲಿಗಾಗಿ ಕೋರ್ಟಿಗೆ ಕೇಸು ಹಾಕುವಂತೆ ದಂಬಾಲು ಬೀಳುತ್ತಾರೆ. ಇದರಿಂದ ಶೇಖರನ ಆರೋಗ್ಯ ಹಾಳಾಗಿ ಕೊನೆಗೆ ಕೋರ್ಟ್‌ನ ಮೊರೆ ಹೋಗುತ್ತಾನೆ. ಇತ್ತ ಅವನ ಅಪ್ಪ ವಕೀಲ ಬಲ್ಲಾಳರ ಕುತಂತ್ರ ಮಾತು ಕೇಳಿ ಸಣ್ಣ ಸಮಸ್ಯೆಯೊಂದು ದೊಡ್ಡದಾಗಿ ಅಪ್ಪ – ಮಕ್ಕಳು ಪರಸ್ಪರ ದ್ವೇಷ ಅಸೂಯೆಯಿಂದ ತಲ್ಲಣಿಸಬೇಕಾಗಿ ಬಂದು ಅಂತಿಮವಾಗಿ ಮಗ ಅಸ್ವಸ್ಥನಾಗಿ ಆಸ್ಪತ್ರೆಗೆ ದಾಖಲಾಗುತ್ತಾನೆ. ಅಪ್ಪನಿಗೆ ತನ್ನ ತಪ್ಪಿನ ಅರಿವಾಗಿ ಮಗನನ್ನು ನೋಡಲು ಆಸ್ಪತ್ರೆಗೆ ಹೋದಾಗ ವಕೀಲನ ಮಗನೇ ಅಲ್ಲಿ ಡಾಕ್ಟರ್ ಆಗಿದ್ದು 'ಇದು ಹಾರ್ಟ್ ಅಟ್ಯಾಕ್ ಕೇಸ್' ಆಗಿರೋದ್ರಿಂದ ನೀವು ನಿಮ್ಮ ಮಗನ ಕಣ್ಣಿಗೆ ಬೀಳೋದ್ರಿಂದ ಅವರಿಗೆ ಶಾಕ್ ಆಗಬಹುದು ಎಂಬ ಮಾತು ತಂದೆಯನ್ನು ಸಿಟ್ಟಿಗೇಳಿಸಿ ಅವತ್ತು ನಿಮ್ಮಪ್ಪ ಅಡ್ಡ ಬಂದರು. ಈಗ ನೀನು ಅಡ್ಡ ಬರುತ್ತಿದ್ದೀಯ. ಯಾರು ತಡೆಯುವರೋ ನೋಡೋಣ ಎಂದು ಮುಂದೆ ಹೋದಾಗ ಮಗನ ಹೆಂಡತಿ ಕಡೆಯವರೆಲ್ಲಾ ವಾರ್ಡಿನ ಬಾಗಿಲಿಗೆ ಅಡ್ಡಗಟ್ಟಿ ತಂದೆ ಕುಸಿದು ಬೀಳುವುದು ಓದುಗರ ಮನಕಲಕುವಂತಹದು. ತಂದೆ ಮಗ ಇಬ್ಬರೂ ವಿದ್ಯಾವಂತರು, ಬುದ್ಧಿವಂತರಾದರೂ ಸಮಸ್ಯೆ ಪರಿಹರಿಸಿಕೊಳ್ಳುವಲ್ಲಿ ವಿಫಲರಾಗುತ್ತಾರೆ.

ಇಲ್ಲಿ ಕತೆಗಾರರು ಕುಟುಂಬದಲ್ಲಿ ಎಂತಹ ಸಮಸ್ಯೆ ಬಂದರೂ ಅದನ್ನು ಕುಟುಂಬದ ಸದಸ್ಯರು ಕುಳಿತು, ಪ್ರೀತಿ, ವಿಶ್ವಾಸದಿಂದ ಸಾವಧಾನವಾಗಿ ಪರಿಹರಿಸಿಕೊಳ್ಳಬೇಕಾದ ಅನಿವಾರ್ಯತೆಯನ್ನು ಎತ್ತಿಹಿಡಿಯುತ್ತಾರೆ. ಮೂರನೇ ವ್ಯಕ್ತಿಯ ಮಧ್ಯಪ್ರವೇಶದಿಂದ ಕುಟುಂಬದಲ್ಲಾಗುವ ಮಾನಸಿಕ ತೊಳಲಾಟ, ಕಾಲ, ಹಣ ಶ್ರಮದ ವ್ಯಯದೊಂದಿಗೆ ಸಂಕಷ್ಟ ಪರಿಸ್ಥಿತಿಗೆ ಕಾರಣವಾಗುವ ರೀತಿಯನ್ನು ಬಹುಸೂಕ್ಷ್ಮವಾಗಿ ಎಣೆದಿದ್ದಾರೆ.

ಕೊನೆ

ಸಾಮಾನ್ಯನೊಬ್ಬ ಅಸಾಮಾನ್ಯನಾಗುವ ಕತೆಯಿದು. ತನ್ನ ಕಷ್ಟಗಳನ್ನು ಮರೆಯಲು ಕುಡುಕನಾದ ವ್ಯಕ್ತಿ ಸಮಾಜದ ಕಣ್ಣಲ್ಲಿ ಕೆಟ್ಟವನಾದರೂ ಅವನು ನಿರುಪಯುಕ್ತ ಅಲ್ಲ. ಈ ಸಮುದಾಯಕ್ಕೆ ಅಂತಹವರಿಂದಲೂ ದೊಡ್ಡ ಕೊಡುಗೆ ಸಿಗಲು ಸಾಧ್ಯ ಎನ್ನುತ್ತದೆ 'ಕೊನೆ' ಕತೆ.

ಕುಟುಂಬ, ನೆರೆಹೊರೆ, ಊರಿನಲ್ಲೆಲ್ಲಾ ತಾತ್ಸಾರ, ಗೇಲಿಗೆ ಒಳಗಾಗಿದ್ದ ಎಪ್ಪತ್ತರ ಮುದುಕನೊಬ್ಬ ತನ್ನ ಸಮಯಪ್ರಜ್ಞೆ ಹಾಗೂ ಸಾಹಸದಿಂದ ಜೋಗ್ ಜಲಪಾತದ

ಪಾತಾಳಕ್ಕೆ ಬಿದ್ದ ಪ್ರವಾಸಿ ಹೆಣ್ಣೊಂದನ್ನು ತನ್ನ ಪ್ರಾಣ ಒತ್ತೆಯಿಟ್ಟು ಜೀವ ಉಳಿಸಿ ಮರಳಿ ತನ್ನ ಪ್ರತಿಷ್ಠೆ ಗೌರವವನ್ನು ಗಳಿಸಿಕೊಂಡ ಕಥಾವಸ್ತುವನ್ನು ಈ ಕತೆ ಒಳಗೊಂಡಿದೆ.

ಆಲ್‌ಫೋನ್ಸ್ ಈ ಕತೆಯ ನಾಯಕ. ಈತ ಯುವಕನಾಗಿದ್ದಾಗ ಜೋಗದ ಎಲ್ಲ ಕೆಲಸಕಾರ್ಯಗಳನ್ನು ಶ್ರಮವಹಿಸಿ ನಿರ್ವಹಿಸಿದ ಬಗೆಯನ್ನು ಸಂಪಾದಿಸಿದ ಕೀರ್ತಿ ಗೌರವವನ್ನು ಕತೆಗಾರರು ಎಳೆಎಳೆಯಾಗಿ ತಿಳಿಸುತ್ತಾರೆ. ಮುಪ್ಪು ಆವರಿಸಿದ ಮೇಲೆ ಜೋಗದ ಎಲ್ಲ ಕೆಲಸಕಾರ್ಯಗಳೂ ಮುಗಿದನಂತರ ಈತ ನಿರುದ್ಯೋಗಿಯಾದರೂ ಜೋಗ ನೋಡಲು ಬಂದ ಪ್ರವಾಸಿಗರಿಗೆ ಮಾಹಿತಿ ನೀಡುವ ಬಸ್ಸಿನಿಂದ ಪೇಪರ್ರು, ಮೂಟೆ ಇಳಿಸುವ ಇನ್ನಿತರ ಕೆಲಸನಿರ್ವಹಿಸುತ್ತಾ ಇಳಿವಯಸ್ಸಿನಲ್ಲೂ ಒಬ್ಬ ನಿಷ್ಠಾವಂತ ಕಾಯಕಯೋಗಿಯಾಗಿ ಓದುಗರ ಮನ ಗೆಲ್ಲುತ್ತಾನೆ.

ಆದರೆ ತನ್ನ ಕುಟುಂಬವರ್ಗ ಊರಿನ ಮಂದಿ ಈತನನ್ನು ಪ್ರವಾಸಿಗರು ನೀಡುವ ಚಿಲ್ಲರೆ ಹಣಕ್ಕೆ ಕೈ ಒಡ್ಡುವ ಅಲ್ಪಮನುಷ್ಯನಾಗಿ ನಿಕೃಷ್ಟವಾಗಿ ಕಾಣುತ್ತಾರೆ. ಪ್ರಾಯದಲ್ಲಿ ಇದೇ ಜೋಗದ ಕೆಲಸ ಮಾಡಿ ಹೆಂಡತಿ, ಮಕ್ಕಳನ್ನು ಸಾಕಿ ಬೆಳೆಸಿ ಮಗನಿಗೆ ಜೋಗದಲ್ಲೇ ಸರ್ಕಾರಿ ಕೆಲಸ ಕೊಡಿಸುವಲ್ಲಿ ಈತನ ಶ್ರಮ ಅಪಾರವಾದರೂ ಕುಟುಂಬವರ್ಗ ಈತನನ್ನು ತಾತ್ಸಾರ ಮಾಡುವ ಬಗೆ ನೋಡಿದರೆ ನಿಜಕ್ಕೂ ಮನಕಲಕುವಂತಹದು.

ಪ್ರವಾಸಿ ಹೆಣ್ಣೊಂದು ಪಾತಾಳಕ್ಕೆ ಬಿದ್ದು ಎಲ್ಲರೂ ದಿಕ್ಕು ತೋಚದೆ ಕಂಗಾಲಾಗಿ ಕೈಕಟ್ಟಿ ನಿಂತಾಗ ಅವಳ ಸಹಾಯಕ್ಕೆ ಬರುವುದು ಈ ಹಿರಿಜೀವ ಆಕೆಯನ್ನು ಸಾಹಸದಿಂದ ಕಾಪಾಡಿದ ನಂತರ ತೆಗಳುತ್ತಿದ್ದ ಎಲ್ಲರೂ ಈತನನ್ನು ಕೊಂಡಾಡುವುದನ್ನು ನೋಡಿದರೆ ಜನರ ಬುದ್ಧಿಗೆ ಏನು ಹೇಳಬೇಕೋ ತಿಳಿಯದು.

ಇಲ್ಲಿ ಕತೆಗಾರರು ಸಡಿಲಗೊಳ್ಳುತ್ತಿರುವ ಕೌಟುಂಬಿಕ ಸಂಬಂಧಗಳು, ನಂಬಿಕೆಗಳ ಬಲವರ್ಧನೆಗೆ ಸಮಾಜದ ಎಲ್ಲ ಜನರು ಶ್ರಮಿಸಬೇಕಾದ ಅಗತ್ಯತೆಯನ್ನು ಪರೋಕ್ಷವಾಗಿ ತಿಳಿಸುತ್ತಾರೆ.

ಒಬ್ಬ ವ್ಯಕ್ತಿ ಮಾಡುವ ವೃತ್ತಿ, ಆತ ಸಂಪಾದಿಸುವ ಹಣ, ಅವನ ವಯಸ್ಸು ಇನ್ನಿತರ ಮಾನದಂಡಗಳನ್ನು ಇಟ್ಟು ಆತನ ಯೋಗ್ಯತೆ, ವ್ಯಕ್ತಿತ್ವದ ಮಾಪನ ಮಾಡಬಾರದು ಎಂದು ಕಿವಿಮಾತು ಹೇಳುತ್ತಾ ಗುಣಸಂಪತ್ತು ಕಾಯಕಶ್ರದ್ಧೆಗೆ ಬೆಲೆ ನೀಡಬೇಕೆಂದು ಒತ್ತಿ ಹೇಳುತ್ತಾರೆ.

ನಾಯಕರ ಬೆಟ್ಟ ಕುಸಿಯುತ್ತಿದೆ

ಈ ಕತೆಯು ಮುಗ್ಧ, ಅನಕ್ಷರಸ್ಥ ಬಡಜನರ ಶ್ರಮದ ದುಡಿಮೆಯಲ್ಲಿ ಮೃಷ್ಟಾನ್ನ ಭೋಜನ ಸವಿಯುವ, ಅವರ ಸಮಾಧಿಯ ಮೇಲೆ ಮಿರಿಮಿರಿ ಮಿಂಚುವ ಭವ್ಯ ಸೌಧಗಳು, ಸುಖದ ಸುಪತ್ತಿಗೆಯ ಅರಮನೆಯನ್ನು ಕಟ್ಟಿಕೊಂಡು ಬದುಕುತ್ತಿರುವ ಸಿರಿವಂತರ, ನಾಯಕರ ಸೋಗಲಾಡಿತನ, ಶೋಷಣೆ, ಲಂಪಟತನ, ಸ್ವೇಚ್ಛೆಯ ಬದುಕಿನ ಚಿತ್ರಣ ನೀಡುತ್ತದೆ.

ಕಿತ್ತು ತಿನ್ನುವ ಬಡತನ, ಅಜ್ಞಾನ, ರೋಗ, ಮೌಢ್ಯ, ಶೋಷಣೆ ಬಡವರ ಪಾಲಿಗೆ ಶಾಪವಾಗಿ ಕಂಡುಬರುತ್ತದೆ. ಇವರ ಉದ್ಧಾರ ಮಾಡುತ್ತೇವೆಂಬ ಸೋಗಿನಲ್ಲಿ ಸಿರಿವಂತರು, ನಾಯಕರು ಮತ್ತಷ್ಟು ಇವರಿಗೆ ಗೊತ್ತಾಗದಂತೆ ರಣಹದ್ದುಗಳಂತೆ ಕಿತ್ತು ತಿನ್ನುತ್ತಾ ಅಂಧಕಾರದ ಮಡುವಿನಲ್ಲಿ ತಳ್ಳಿ ತಾವು ದೇವಲೋಕದ ಸ್ವರ್ಗಸುಖವನ್ನು ಅನುಭವಿಸುವ ಪರಿಕಂಡಾಗ ಪ್ರಸ್ತುತ ಸಾಮಾಜಿಕ ವ್ಯವಸ್ಥೆಯ ಅಧೋಗತಿಯನ್ನು ಇಲ್ಲಿ ಗಮನಿಸಬಹುದು.

ಈ ಕತೆಯು ಇಂದು ನಮ್ಮನ್ನಾಳುತ್ತಿರುವ ರಾಜಕೀಯ ನಾಯಕರನ್ನು ಗುರಿಯಾಗಿಟ್ಟುಕೊಂಡು ವಿಡಂಬನಾತ್ಮಕವಾಗಿ ಬರೆದಂತೆ ಕಂಡುಬರುತ್ತದೆ, ಕತೆಗಾರರು ಬಳಸುವ

“ಇಂತಹ ಐದು ವರ್ಷಗಳು ಮೂರಲ್ಲ... ಆರು ಕಳೆದುಹೋದರು ಅವರು ನಿಮಗಾಗಿ ಏನೂ ಮಾಡೋದಿಲ್ಲ... ನೆನಪಿರಲಿ – ನೀವು ಎಲ್ಲೀ ತನಕ ಬುಡಕ್ಕೆ ಮಣ್ಣು ಮೆತ್ತಿ ನಾಯಕರ ಬೆಟ್ಟಾನ ಭದ್ರವಾಗಿ ಕಾಪಾಡ್ತಾ ಇರ್ತಿರೋ ಅಲ್ಲಿ ತನಕ... ನಾಯಕರು ಅಲ್ಲಿ ಸುಖವಾಗಿರ್ತಾರೆ.... ನೀವಿಲ್ಲಿ ಹೀಗೆ ಈವತ್ತಿನ ಹಾಗೆ ಊಟ ಬಟ್ಟೆಗೆ ಗತಿ ಇಲ್ದೆ ಸಾಯ್ತಿರತೀರ”[೪] ಎಂಬ ಮಾತು ಅಕ್ಷರಸಹ ನಿಜವಾಗಿದ್ದು ಜನರು ಮೌಢ್ಯತೆ ಅಜ್ಞಾನದಿಂದ ಹೊರಬಂದು ಜಾಗೃತರಾಗಿ ಯೋಗ್ಯ ನಾಯಕರ ಆಯ್ಕೆ ಮಾಡಬೇಕು. ಅಲ್ಲಿಯವರೆಗೆ ಸಮಾಜದ ಪ್ರಗತಿ ಅಸಾಧ್ಯವೆಂಬ ಮಾತು ಸಾರಿ ಸಾರಿ ಕೇಳಿಬರುತ್ತದೆ.

ಹರಿವ ನೀರಿನ ಮಟ್ಟ

ಪ್ರಸ್ತುತ ಸಮಾಜದಲ್ಲಿ ‘ಜಾತಿವ್ಯವಸ್ಥೆ’ಯಲ್ಲಾಗುತ್ತಿರುವ ಬದಲಾವಣೆಗಳು, ಸಡಿಲಿಕೆಗಳನ್ನು ಈ ಕತೆಯು ಬಿಂಬಿಸುತ್ತದೆ. ಜಾತಿವ್ಯವಸ್ಥೆಯ ತುತ್ತತುದಿಯಲ್ಲಿರುವ ಬ್ರಾಹ್ಮಣನೊಬ್ಬ ನಿಮ್ನ ಜಾತಿಗೆ ಸೇರಿದ ಹೊಲೆಯನೊಬ್ಬನನ್ನು ಸಾವಿನ ದವಡೆಯಿಂದ ಪಾರುಮಾಡಿ ತನ್ನ ಮನೆಗೆ ಕರೆದೊಯ್ದು ಶುಶ್ರೂಷೆ ಮಾಡಿ, ಮರುಜೀವ ನೀಡಿ,

[illegible]

[illegible]

[illegible]

[illegible]

[illegible]

[illegible]

ಮಾನವೀಯತೆ ತೋರಿ ತನ್ನ ಮಟ್ಟವನ್ನು ಲೋಕವು ಅಳೆಯುವಂತೆ ಮಾಡುವ ಕಥಾವಸ್ತುವನ್ನು ಒಳಗೊಂಡಿದೆ.

ಹಿಂದಿನ ಜಾತಿವ್ಯವಸ್ಥೆ ಏಣಿಶ್ರೇಣಿಯಲ್ಲಿ ಮೇಲ್ಜಾತಿಯವರು ಶೂದ್ರರನ್ನು, ದಲಿತರನ್ನು ಪ್ರಾಣಿಗಿಂತಲೂ ಕೆಟ್ಟದಾಗಿ ನಡೆಸಿಕೊಳ್ಳುತ್ತಿದ್ದ ರೀತಿಯನ್ನು ಕತೆಗಾರರು ಪ್ರಾರಂಭದಲ್ಲಿ ತಿಳಿಸಿಕೊಡುತ್ತಾರೆ. ಆರಂಭದಲ್ಲಿ ಕತೆಯ ನಾಯಕ ರಾಮಭಟ್ಟರೂ ಸಹ ಮೇಲ್ಜಾತಿಯ ಹಮ್ಮು-ಬಿಮ್ಮು, ಮಡಿವಂತಿಕೆಯನ್ನು ತೋರಿಸಿದರೂ ನೀರಿನ ಮಟ್ಟ ಗುರುತುಹಾಕಿಕೊಳ್ಳುವ ನಿತ್ಯ ಕಾಯಕದಲ್ಲಿದ್ದ ಹೊಲೆಯ ದುಗ್ಗ ಒಮ್ಮೆ ಮಣ್ಣು ಕುಸಿದು ನೀರಳೇ ಹಳ್ಳಕ್ಕೆ ಬಿದ್ದಾಗ ಅಸಹಾಯಕನಾದ ದುಗ್ಗನನ್ನು ಜಾತಿಯ ಮದ ತೊರೆದು ಮಾನವತೆಯ ಪಥ ತುಳಿದ ರಾಮಭಟ್ಟರು ಮೌಲ್ಯಯುತ ವ್ಯಕ್ತಿಯಾಗಿ ಮಹಾನ್ ಮಾನವತಾವಾದಿಯಾಗಿ ನಮಗೆ ಗೋಚರಿಸುತ್ತಾರೆ. ಇಲ್ಲಿ ಕತೆಗಾರರು ಪ್ರಸ್ತುತ ಜಾತಿವ್ಯವಸ್ಥೆಯಲ್ಲಾಗುತ್ತಿರುವ ಪರಿವರ್ತನೆಗಳನ್ನು ತಿಳಿಸುತ್ತಾ ಜಾತಿ, ಮತಗಳೆಂಬ ಅಡ್ಡಗೋಡೆಗಳು ಮಾಯವಾಗಿ 'ಮನುಜಮತ ವಿಶ್ವಪಥ' ಬರಬೇಕಾದ ಅಗತ್ಯತೆಯನ್ನು ಒತ್ತಿ ಹೇಳುತ್ತಾರೆ.

ಒಂದೂರಿನಲ್ಲಿ ಓರ್ವ ಉಪಕಾರಿ

ದಯಾವಂತ, ಪರೋಪಕಾರಿ, ಉತ್ತಮ ಅಂತಃಕರಣ ಹೊಂದಿದ್ದ ವ್ಯಕ್ತಿಯೊಬ್ಬ (ಸವೇರಣ್ಣ) ತಾನು ಬದುಕಿದ್ದಾಗ ಎಲ್ಲರಿಗೂ ತನ್ನ ಕೈಲಾದ ಮಟ್ಟಿಗೆ ಶಕ್ತಿಮೀರಿ ಉಪಕಾರ ಮಾಡುತ್ತಾ ಬಂದವ, ಆದರೆ ತನ್ನ ಆರೋಗ್ಯ ಹದಗೆಟ್ಟು ಆಸ್ಪತ್ರೆ ಸೇರಿದಾಗ ಕುಟುಂಬದವರೂ ಸೇರಿದಂತೆ ಯಾರೂ ಆತನ ನೆರವಿಗೆ ಬಾರದಂತಹ ಶೋಚನೀಯ ಸನ್ನಿವೇಶವನ್ನೊಳಗೊಂಡ ಕಥಾವಸ್ತುವನ್ನು ಒಳಗೊಂಡಿದ್ದು ಸಮಾಜದ ಜನರ ವಿವಿಧ ಮುಖಗಳನ್ನು ತೋರ್ಪಡಿಸುತ್ತದೆ.

ಉಪಕಾರ ಪಡೆದ ಹಲವರಲ್ಲಿ ಕೆಲವರಾದರೂ ಬಂದು ಈತನನ್ನು ಒಳ್ಳೆಯ ಆಸ್ಪತ್ರೆಗೆ ಕೊಂಡೊಯ್ದು ಚಿಕಿತ್ಸೆ ಕೊಡಿಸಿದ್ದರೆ ಆತ ಬದುಕುತ್ತಿದ್ದ. ಪಡೆದ ಉಪಕಾರಕ್ಕೆ ಕೃತಜ್ಞತೆ ಸಲ್ಲಿಸಿದಂತಾಗುತ್ತಿತ್ತು. ಆದರೆ ದುರ್ದೈವವೆಂದರೆ ಯಾರೊಬ್ಬರೂ ಬಾರದಿರುವುದು ಸಮಾಜದ ಜನರ ನೀಚತನದ ಪರಮಾವಧಿಯೇ ಸರಿ. ಕತೆಗಾರರು ಈ ಕತೆಗೆ ನೀಡಿರುವ ಶೀರ್ಷಿಕೆ ಅರ್ಥಗರ್ಭಿತವಾಗಿದ್ದು 'ಒಂದೂರಿನಲ್ಲಿ ಓರ್ವ ಉಪಕಾರಿ' ಈತನೇ. ಉಳಿದವರೆಲ್ಲಾ ಕೃತಘ್ನರು ಎಂಬುದನ್ನು ಸಂಕೇತಿಸುತ್ತದೆ.

[illegible]

ಊರಾಳು ಅರಮನೆಗೆ ಮತ್ತೆ ಜನ ಬಂದರು

ಈ ಕತೆಯು ಹಣದ ಮೇಲಿನ ಅತಿಯಾದ ವ್ಯಾಮೋಹ ಮತ್ತು ಸೋಗಲಾಡಿತನವನ್ನು ಬಿತ್ತರಿಸುತ್ತದೆ.

ರಾಯರು ತೀರಿಕೊಂಡ ನಂತರ ಅವರ ಮಕ್ಕಳನ್ನೊಳಗೊಂಡಂತೆ ಯಾರಿಗೂ ಬೇಡವಾದ ಅರಮನೆಯಲ್ಲಿ ಒಬ್ಬ ನಿಷ್ಠಾವಂತ ಕೆಲಸಗಾರನಾಗಿ ದುಡಿದ ರಾಮಕೃಷ್ಣಭಟ್ಟ ತೋಟದ ಎಲ್ಲ ಕೆಲಸಕಾರ್ಯಗಳನ್ನು ಮಾಡಿಸುತ್ತಾ ಸರಿಯಾಗಿ ಲೆಕ್ಕಪತ್ರಗಳ ನಿರ್ವಹಣೆ ಮಾಡಿ ರಾಯರ ಮಕ್ಕಳ ಮೆಚ್ಚುಗೆಗೆ ಪಾತ್ರನಾಗುತ್ತಾನೆ. ಅರಮನೆ ಕಾಡಿನ ಕೊನೆಯಲ್ಲಿ ಎಂಬಂತೆ ಓಡಾಡಲು ಕಷ್ಟವಾಗಿದ್ದ ಸ್ಥಳದಲ್ಲಿದ್ದುದರಿಂದ ಅಲ್ಲಿರಲು ಯಾರಿಗೂ ಇಷ್ಟವಾಗುವುದಿಲ್ಲ. ಸುಮಾರು ೨೦ ವರ್ಷಗಳು ಇದೇ ಅರಮನೆಯಲ್ಲಿ ಕೆಲಸ ಮಾಡಿಸುತ್ತಾ ಏಕಾಂಗಿಯಾಗಿ ಕಾಲ ಕಳೆದ ಭಟ್ಟರ ನಿಷ್ಕಲ್ಮಶವಾದ ಬುದ್ಧಿ, ಯಾವುದರ ಮೇಲೂ ವ್ಯಾಮೋಹ ತೋರದ ಅವರ ಮನಸ್ಸು ನಿಜಕ್ಕೂ ಮೆಚ್ಚತಕ್ಕದ್ದು.

ಹತ್ತಿರದ ಕುಶಾವತಿಗೆ ಅಣೆಕಟ್ಟು ಕಟ್ಟಿ ಮುಳುಗಡೆಯಾಗುವ ಮನೆ, ಜಮೀನಿಗೆ ಪರಿಹಾರಧನ ನೀಡುವ ಬಗ್ಗೆ ಸರ್ಕಾರ ಘೋಷಿಸಿದಾಗ ಒಂದೊಂದು ಮೂಲೆಯಲ್ಲಿದ್ದ ರಾಯರ ಮಕ್ಕಳು, ದಾಯಾದಿಗಳು ಎಲ್ಲರೂ ಅರಮನೆಯತ್ತ ಧಾವಿಸುತ್ತಾರೆ. ಜನರಿಂದ ಅರಮನೆ ತುಂಬುತ್ತದೆ. ಅರಮನೆ ಮೇಲೆ ನನಗೂ ಅಧಿಕಾರ ಇದೆ. ಪಾಲು ಬರಬೇಕೆಂದು ಪ್ರತಿಯೊಬ್ಬರೂ ಹೇಳುವ ಮಾತು ಹಣದಾಹವನ್ನು ತೋರಿಸುತ್ತದೆ. ಅರಮನೇಲಿ ಇಷ್ಟೊಂದು ಜನ ಇರುವಾಗ ನಾನೇಕೆ ಎಂದು ಹೊರಟ ಕೆಲಸಗಾರ ಭಟ್ಟನನ್ನು ಯಾರೂ ತಡೆಯುವುದಿಲ್ಲ. ಇಲ್ಲಿ ಬೇಕಾದಾಗ ಬಳಸಿಕೊಳ್ಳುವ, ಬೇಡವಾದಾಗ ಬಿಟ್ಟಾಕುವ ಜನರ ಸೋಗಲಾಡಿತನವನ್ನು ಕತೆಗಾರರು ಎತ್ತಿಹಿಡಿಯುತ್ತಾರೆ.

ತಿಂಗಳ ಪೂಜೆಗೆ ಬಂದ ಮಗ

ಇದು ಸಾಂಸಾರಿಕ ಕಥಾವಸ್ತುವನ್ನೊಳಗೊಂಡಿದ್ದು ತಾಯಿಯ ಗಂಡುಮಕ್ಕಳಿಬ್ಬರಲ್ಲಿ ಕಿರಿಯಮಗನ ಮಾತೃವಾತ್ಸಲ್ಯ, ಸೇವಾ ಮನೋಭಾವ ಹಾಗೂ ಹಿರಿಯ ಮಗನ ಅವಿವೇಕದ ಬುದ್ಧಿಯನ್ನು ದರ್ಶಿಸುತ್ತದೆ. ಬದುಕಿದ್ದಾಗ ತಾಯಿಗಾಗಿ ಏನೂ ಸೇವೆ ಹಾಗೂ ಧನಸಹಾಯ ಮಾಡದ, ಮುಂಬೈನಲ್ಲಿ ವಾಸವಿದ್ದ ಆಕೆಯ ಹಿರಿಯಮಗ ತಾಯಿ ಸತ್ತಾಗ ಮುಖದರ್ಶನ ಮಾಡುವುದಕ್ಕೂ ಬರದಿರುವುದು ಆತನ

ಕಲ್ಲುಹೃದಯ, ಮನಸ್ಸನ್ನು ಸಂಕೇತಿಸುತ್ತದೆ. ಇಂತಹ ಮಕ್ಕಳು ಇದ್ದರೂ ಒಂದೆ, ಇಲ್ಲದಿದ್ದರೂ ಒಂದೆ ಎಂಬುದಾಗಿ ಕತೆಗಾರರು ಪರೋಕ್ಷವಾಗಿ ವಿವೇಚಿಸುತ್ತಾರೆ.

ತಾಯಿಯ ತಿಂಗಳ ತಿಥಿಗೆ ಮುಂಬೈನಿಂದ ಬಂದ ಮಗ ಸಾಕಷ್ಟು ಹಣ ಖರ್ಚು ಮಾಡಿ ಅತ್ಯಾಕರ್ಷಕವಾಗಿ ಮುದ್ರಿಸಿರುವ ಫೋಲ್ಡರುಗಳನ್ನು ಚರ್ಚಿಗೆ ಬರುವ ಎಲ್ಲರಿಗೂ ಹಂಚಿ 'ನಮ್ಮನ್ನು ಹೆತ್ತು ಹೊತ್ತು ಸಾಕಿ ಸಲಹಿದ ಮಾತೆ ಮಾಡ್ತೀನಳಿಗಾಗಿ ಪ್ರಾರ್ಥಿಸಿರಿ'

"ಇದು ಎರಡು ಸಾವಿರ ಮಾಡಿಸಿದ್ದೆ.. ಒಂದು ಸಾವಿರ ಅಲ್ಲಿ ಹಂಚಿದೆ.... ಒಂದು ಸಾವಿರ ಇಲ್ಲಿ ತಂದೆ... ಒಂದು ಫೋಲ್ಡರ್‌ಗೆ ಹನ್ನೆರಡಾಣೆ ಬಿದ್ದಿದೆ"[೫] ... ಎಂದು ಹೇಳುವ ಅವನ ಮಾತು ಮೂರ್ಖತನ, ಅವಿವೇಕತನವನ್ನು ಪ್ರತಿನಿಧಿಸುತ್ತದೆ. ತಾಯಿ ಬದುಕಿದ್ದಾಗ ಇದರಲ್ಲಿ ಸ್ವಲ್ಪ ಹಣ ವೆಚ್ಚ ಮಾಡಿದ್ದರೂ ಅದೃಷ್ಟವಶಾತ್ ಆಕೆ ಉಳಿಯುತ್ತಿದ್ದಳೋ ಏನೋ? ಎಂಬ ಸಂದೇಹ ಓದುಗರನ್ನು ಕಾಡದೆ ಇರದು. ಒಂದೇ ತಾಯಿಯ ಮಕ್ಕಳಾದರೂ ತಾವು ಬೆಳೆದ ಪ್ರದೇಶಗಳು. ಅಲ್ಲಿನ ಜೀವನಶೈಲಿ, ಸಂಸ್ಕೃತಿಯಿಂದಾಗಿ ಇಬ್ಬರು ಮಕ್ಕಳಲ್ಲಿದ್ದ ವಿಭಿನ್ನತೆಯನ್ನೂ ಸಹ ಕತೆಯು ಮನವರಿಕೆ ಮಾಡಿಕೊಡುತ್ತದೆ.

ಹಸೆ ಬರೆಯಲು ಬಂದವಳು

ಸ್ತ್ರೀ ಪಾತ್ರಗಳೇ ಪ್ರಧಾನವಾದ ಕತೆಯಿದು. ಇಬ್ಬರು ಗೆಳತಿಯರ ಆತ್ಮೀಯ ಸ್ನೇಹ, ಕಲಾತ್ಮಕತೆಗೆ ಈ ಕತೆಯು ಕನ್ನಡಿ ಹಿಡಿದಂತಿದೆ.

ರುದ್ರಿ ಹಾಗೂ ಪಾರ್ವತಿ ಬಾಲ್ಯದಿಂದಲೂ ಒಟ್ಟಾಗಿ ಆಡಿ ಬೆಳೆದವರು. ಇಬ್ಬರೂ ಜೀವದ ಗೆಳತಿಯರು. ಇಬ್ಬರಲ್ಲೂ ಸಾಮಾನ್ಯವಾಗಿರುವ ಪ್ರತಿಭೆಯೊಂದಿದೆ. ಅದು ಸುಂದರವಾಗಿ ಹಸೆ ಬರೆಯುವುದು. ರುದ್ರಿಯ ಮದುವೆಗೆ ಕಲಾತ್ಮಕವಾಗಿ ಚಿತ್ತಾರ ಬರೆದ ಪಾರ್ವತಿ ಕೆಲದಿನಗಳ ನಂತರ ಹೊಳೆಯ ಬಳಿ ಯಕಶ್ಚಿತ್ ಒಂದು ಮೀನಿನ ವಿಚಾರಕ್ಕೆ ಜಗಳವಾಡಿ ಪರಸ್ಪರ ಕೆಟ್ಟ ಅವಾಚ್ಯ ಶಬ್ದಗಳಿಂದ ನಿಂದಿಸಿ ಸ್ನೇಹ ಕಳೆದುಕೊಳ್ಳುವ ಹಂತ ತಲುಪುತ್ತಾರೆ. ಇಲ್ಲಿ ಕತೆಗಾರರು ಅವರು ಬಳಸುವ ಕೆಟ್ಟ ಶಬ್ದಗಳನ್ನು ಅಲ್ಲಿನ ಸ್ಥಳೀಯ ಭಾಷೆಯಲ್ಲಿ ಯಥಾವತ್ತಾಗಿ ಬರೆದಿರುವುದು ಕಂಡುಬರುತ್ತದೆ.

[illegible]

[illegible]

[illegible]

[illegible]

ರುದ್ರಿ ಸ್ನೇಹ ತೊರೆಯದೇ ಅಂತಿಮವಾಗಿ ಪಾರ್ವತಿ ಮದುವೆ ಹತ್ತಿರವಾದಂತೆ ಆಕೆ ಇಲ್ಲದಿದ್ದಾಗ ಮನೆಗೆ ಬಂದು ಆಕೆಯೂ ಸಹ ಅತ್ಯುತ್ತಮವಾದ ಚಿತ್ತಾರ ಬರೆದು ನಂತರ ಇಬ್ಬರ ಸ್ನೇಹ ಪರಸ್ಪರ ಆಲಿಂಗನದೊಂದಿಗೆ ಜೀವತಳೆಯುತ್ತದೆ.

ಇಲ್ಲಿ ಕತೆಗಾರರು ಪ್ರೀತಿ, ಸ್ನೇಹ, ವಿಶ್ವಾಸ, ನಂಬಿಕೆಯ ಮೌಲ್ಯಗಳಿಗೆ ಬೆಲೆಕಟ್ಟುವಲ್ಲಿ ಯಶಸ್ವಿಯಾಗುತ್ತಾರೆ. ಎದುರಾದ ಆತಂಕವನ್ನು ಮೀರಿ ಬೆಳೆಯುವ ಮೈತ್ರಿ, ಸೃಜನಶೀಲತೆಗೆ ಸಂಬಂಧವನ್ನು ಬೆಸೆಯುವ ಶಕ್ತಿಯಿರುವುದನ್ನು ಈ ಕತೆ ಒತ್ತಿಹೇಳುತ್ತಿದೆ.

ಪ್ರವಾಹದ ಒಂದು ಅಲೆ

ಮಲೆನಾಡಿನ ಶ್ರೀಮಂತ ಜಮೀನ್ದಾರರು, ಮೇಲ್ಜಾತಿಯ ಬ್ರಾಹ್ಮಣರು ಗುಡ್ಡಗಾಡು ಜನಾಂಗ ಹಸಲರನ್ನು ತಮ್ಮ ಜಮೀನಿನಲ್ಲಿ ಪ್ರಾಣಿಗಳಂತೆ ದುಡಿಸಿಕೊಂಡು ತಾವು ಪ್ರಬುದ್ಧರಾಗುವ ರೀತಿ, ಶೋಷಣೆ, ಆ ಜನಾಂಗದವರು ಒಟ್ಟಿಗೆ ಬಾಳದಂತೆ ಮಾಡಲು ನಡೆಸುವ ಹುನ್ನಾರ, ಅನಕ್ಷರತೆ, ಮೌಢ್ಯತೆ, ಮುಗ್ಧತೆಯನ್ನು ಹೋಗಲಾಡಿಸಿ ಎಲ್ಲರೂ ಒಂದೆಡೆ ಮನೆಕಟ್ಟಿಕೊಂಡು ವಾಸಿಸುವಂತೆ ಒಗ್ಗೂಡಿಸಲು ಪ್ರಯತ್ನಿಸುವ ಅದೇ ಜನಾಂಗದ ಓರ್ವ ಯುವಕನ ಪ್ರಾಮಾಣಿಕ ಯತ್ನ. ಎಲ್ಲವನ್ನೂ ಕತೆಗಾರರು ಸೊಗಸಾಗಿ ತಿಳಿಸಿದ್ದಾರೆ.

'ಸಿಂಗ' ಎಂಬಾತನೇ ಹಸಲ ಜನಾಂಗದವರ ಪಾಲಿನ ಆಶಾಕಿರಣದಂತೆ ಮೂಡಿಬಂದವನಾಗಿದ್ದು ಮೌಢ್ಯತೆಯ ಸುಳಿಯಲ್ಲಿದ್ದ ಜನಾಂಗವನ್ನು ಎಚ್ಚರಿಸಿ ಎಲ್ಲರೂ ಒಂದು ಕಡೆ ಒಗ್ಗಟ್ಟಾಗಿ ನೆಲೆ ಕಂಡುಕೊಳ್ಳುವಲ್ಲಿ, ಒಡೇರ ವಿರುದ್ಧ ಒಂದು ದಿನವೂ ಸೊಲ್ಲೆತ್ತದೇ ಇದ್ದವರು ಒಟ್ಟಾಗಿ ತಿರುಗಿ ಬೀಳುವಂತೆ ಮಾಡಿ ಅವರಿಂದ ಬಿಡುಗಡೆ ಹೊಂದುವಂತೆ ಮಾಡಿ ತನ್ನ ಪ್ರಯತ್ನದಲ್ಲಿ ಸಾರ್ಥಕತೆ ಕಂಡುಕೊಳ್ಳುತ್ತಾನೆ.

ಇಲ್ಲಿ ಕತೆಗಾರರು ಬಳಸಿರುವ 'ಪ್ರವಾಹದ ಒಂದು ಅಲೆ' ಎಂಬುದು ಅರ್ಥಗರ್ಭಿತವಾಗಿದ್ದು ಇದು ಹೋರಾಟದ ಮೊದಲ ಅಲೆ ಎಂಬುದನ್ನು ಸೂಚಿಸುತ್ತದೆ. ಸಮಾಜದಲ್ಲಿ ಶೋಷಣೆಗೆ ಗುರಿಯಾಗಿರುವ ಇಂತಹ ಅದೆಷ್ಟೋ ಶೂದ್ರರು, ದಲಿತರು, ದುರ್ಬಲ ವರ್ಗದವರು ಸಾಕಷ್ಟಿದ್ದು ಅವರೆಲ್ಲರೂ ಒಗ್ಗೂಡಿ ತಮಗಾಗುತ್ತಿರುವ ಅನ್ಯಾಯದ ವಿರುದ್ಧ ಸಾಗರದಲ್ಲಿ ಆರ್ಭಟಿಸುತ್ತಾ ಬರುವ ಅಲೆಯೋಪಾದಿಯಲ್ಲಿ ಅಪ್ಪಳಿಸಬೇಕೆಂದು, ಇಂತಹ ಅಲೆಗಳು ಹೆಚ್ಚಾಗಬೇಕಾದ ಅಗತ್ಯತೆಯನ್ನು ಸಾರಿ ಹೇಳುತ್ತಾರೆ.

ಹೆಡೆ

ಮೂಲತಃ ಕತೆಗಾರರು ಮಲೆನಾಡಿನವರಾಗಿದ್ದು ಅಲ್ಲಿನ ಗೌಡರ ಜಮೀನ್ದಾರಿಕೆ, ಜೀತಪದ್ಧತಿ, ಗೇಣಿದಾರರಿಗೆ ಮಾಡುವ ಮೋಸ, ದಬ್ಬಾಳಿಕೆ ಈ ದೌರ್ಜನ್ಯದ ವಿರುದ್ಧ ಗೇಣಿದಾರರು ಒಗ್ಗೂಡಿ ಸತ್ಯಾಗ್ರಹ ಮಾಡಿ ಹೋರಾಟ ನಡೆಸಿ ಯಶಸ್ವಿಯಾಗುವ ಪರಿಯನ್ನು ಇಲ್ಲಿ ಚಿತ್ರಿಸಿದ್ದಾರೆ. ರೈತರು ತಾವು ಬೆಳೆದ ದವಸಕ್ಕೆ ಜಮೀನಿನ ಒಡೆಯರು ಸರಿಯಾದ ಅಳತೆ ಮಾಪನ ಬಳಸದೇ ಮೋಸ ಹೋದಾಗ ಈಗಾಗಲೇ ಕಟ್ಟಿಕೊಂಡಿದ್ದ 'ಗೇಣಿ ರೈತರ ಸಂಘ'ದ ಮೂಲಕ ಪ್ರತಿಭಟನೆ ನಡೆಸಿ ಅದು ವಿಕೋಪಕ್ಕೆ ತಿರುಗಿದಾಗ ಒಡೆಯರು ಪೋಲೀಸರನ್ನು ಕರೆತಂದು ತಮ್ಮ ಜಮೀನಿನಲ್ಲಿ ವಾಸ್ತವ್ಯ ಹೂಡಿಸಿ ಬಡಪಾಯಿ ರೈತನನ್ನು ಜೈಲಿಗೆ ಕಳುಹಿಸಿ ಮಾನವೀಯತೆ ಇಲ್ಲದ ಮೃಗದಂತೆ ವರ್ತಿಸುವುದು ಶೋಚನೀಯ.

ರೈತ ಮುಖಂಡ ರಾಮನಾಯಕ ಗೇಣಿರೈತರ ಪಾಲಿಗೆ ವರವಾಗುತ್ತಾನೆ. ಆತನ ನೇತೃತ್ವದಲ್ಲಿ 'ಉಳುವವನೇ ಹೊಲದೊಡೆಯ', 'ಗೇಣಿ ಪದ್ಧತಿ ನಾಶವಾಗಲಿ' ಎಂದು ರೈತರು ಕೂಗುವುದು ಒಡೆಯನ ಕಿವಿಗೆ ಮಾರ್ದನಿಸುತ್ತದೆ. ನೇಗಿಲ ಬದಲು ರೈತರು ತೆಂಗಿನ ಹೆಡೆ ಹಿಡಿದು ಒಡೆಯನ ಜಮೀನಿಗಿಳಿಯುವುದು ಬಿಚ್ಚಿದ ಹಾವಿನ ಹೆಡೆಗಳಾಗಿ ಭುಸುಗುಡುತ್ತವೆ. ಗೌಡ ಮತ್ತು ಪೊಲೀಸರು ಹೆದರಿ ನಿಲ್ಲುವಲ್ಲಿಗೆ ಕತೆ ಮುಕ್ತಾಯಗೊಳ್ಳುತ್ತದೆ. ಹುಲಿವೇಷ ಹಾಕಿ ಕುಣಿಯ ತೊಡಗುವ ಅಮಾಸನನ್ನು ಕಂಡು ದಿಗಿಲುಗೊಳ್ಳುವ ಗೌಡನ ಚಿತ್ರವನ್ನು ದೇವನೂರು ಮಹಾದೇವ ನೀಡುತ್ತಾರಲ್ಲ, ಅಂಥದ್ದೆ ನಾಟಕೀಯ ಅಂತ್ಯದೊಂದಿಗೆ ಕತೆ ಕೊನೆಗೊಳ್ಳುತ್ತದೆ.

ಇಲ್ಲಿ ಕತೆಗಾರರು 'ಒಗ್ಗಟ್ಟಿನಲ್ಲಿ ಬಲವಿದೆ' ಎಂಬ ಸೂಕ್ತಿಯಂತೆ ಒಟ್ಟುಗೂಡಿ ಪ್ರತಿಭಟಿಸಿದರೆ ಸಮಾಜದಲ್ಲಿರುವ ಜಮೀನ್ದಾರಿ ಪದ್ದತಿ. ಗೇಣಿ ಪದ್ಧತಿಗಳಂತಹ ಹಲವು ಸಮಸ್ಯೆಗಳಿಗೆ ಸುಲಭ ಪರಿಹಾರ ಕಂಡುಕೊಳ್ಳುವ ಮಾರ್ಗವನ್ನು ಸೂಚಿಸುತ್ತಾರೆ.

ಬಳುವಳಿ

ಓದಿ ವಿದ್ಯಾವಂತನಾಗಿ ಚೆನ್ನಾಗಿ ಬಾಳಿ ಬದುಕಬೇಕಾದ ಬಾಲಕನೊಬ್ಬ ಹೆತ್ತವರಿಗೆ ಬೇಡವಾಗಿ ಭಟ್ಕಳದ ಬಾಳ ಹೊನ್ನಾವರದಲ್ಲಿ ಬಳುವಳಿಯಾಗಿ ಜೀತಗಾರನಾಗುವ, ಆತನು ಅನುಭವಿಸುವ ನೋವು ಮಾನಸಿಕ ಯಾತನೆಗಳ ಚಿತ್ರಣವನ್ನು ಈ ಕಥೆ ನೀಡುತ್ತವೆ.

ಈ ಕತೆಯ ಕೇಂದ್ರಬಿಂದು ಬಾಳ. ಈತ ತಂದೆ–ತಾಯಿಗಳಿಗೆ ಬೇಡವಾಗಿ ಜಾತ್ರೆ ಪೇಟೆಯ ಅಂಗಡಿಯೊಂದರ ಬಳಿ ಭಟ್ಕಳದ ಸಾಹುಕಾರನೊಬ್ಬನ ಕಣ್ಣಿಗೆ ಬಿದ್ದು ಅವರ ಮನೆ ಸೇರುತ್ತಾನೆ. ಸಾಹುಕಾರರ ಮುದ್ದಿನ ಮಗಳ ಜೊತೆ ಆಡಿ ಬೆಳೆದ ಈತ ಮಗಳ ಮದುವೆ ಮಾಡುವಾಗ ಆಕೆ ಹೋಗಲಿರುವ ಮನೆಯಲ್ಲಿ ಸಿಹಿನೀರು ಸಿಗುವುದಿಲ್ಲ ಎಂಬ ಸಮಸ್ಯೆ ಎದುರಾದಾಗ ಈತ ಸಾಹುಕಾರರಿಗೆ ಪರಿಹಾರವಾಗಿ ಕಾಣುವುದು ಅವನ ದುರ್ದೈವವೇ ಸರಿ.

ಸಾಹುಕಾರರು ಅಳಿಯನ ಮನೆಗೆ ಕೊಡುವ ಬಳುವಳಿಗಳಲ್ಲಿ ಈ ಬಾಳನನ್ನು ಮನೆಕೆಲಸಕ್ಕೆ ಕಳಿಸುವುದು. ಅಲ್ಲಿ ಜೀತಗಾರನಾಗಿ ಪ್ರಾಣಿಗಿಂತಲೂ ಕಡೆಯಾದ ಪಾರತಂತ್ರ ಜೀವನ ನಡೆಸುವುದು ನಿಜಕ್ಕೂ ಶೋಚನೀಯ.

ಬಾಳನ ಸಂಕಷ್ಟವನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದ ಗಂಡನಿಲ್ಲದ ಗಣಪಿ ಈತನ ಬದುಕಿನ ಆಶಾಕಿರಣವಾಗಿ, ಆಸರೆಯಾಗಿ ನಿಂತು ಧೈರ್ಯತುಂಬಿ ಸ್ವತಂತ್ರ ಬದುಕನ್ನು ಕಟ್ಟಿಕೊಳ್ಳುವಲ್ಲಿ ಸಹಕರಿಸಿ ಜೀತಗಾರನ ಬದುಕಿಗೊಂದು ಅರ್ಥ ನೀಡುತ್ತಾಳೆ. ಮುಂದೆ ಅವನ ಬದುಕಿನ ಚಿತ್ರಣವೇ ಬದಲಾಗುತ್ತದೆ.

ಶ್ರೀಮಂತರ ಆಡಂಬರದ ಜೀವನ ಮಧ್ಯದಲ್ಲಿ ಅಸಹಾಯಕ, ಮುಗ್ಧನೊಬ್ಬನ ಬಲಿಯಾಗುವುದನ್ನು ತಪ್ಪಿಸಿದ ಕತೆಗಾರರ ಜಾಣ್ಮೆ ನಿಜಕ್ಕೂ ಮೆಚ್ಚತಕ್ಕದ್ದು. 'ಬಳುವಳಿ'ಯನ್ನು ಫಿಲಮ್ಸ್ ಡಿವಿಸನ್ನಿನವರು ಒಂದು ಕೊಂಕಣಿ ಚಲನಚಿತ್ರವನ್ನಾಗಿಸಿದ್ದಾರೆ.

ಕುರ್ಚಿ

ಪ್ರಭುತ್ವಕ್ಕೆ ಒಡ್ಡುವ ಸವಾಲು ಎಂಬಂತೆ ಇಲ್ಲಿಯ ಕುರ್ಚಿ ಸ್ವಾಭಿಮಾನದ ಸಂಕೇತ ಕಥೆಯ ನಾಯಕಪಾತ್ರ ಜಟ್ಯಾನಾಯ್ಕ. ಈ ಕತೆಯೂ ಗೇಣಿ ರೈತರ ಸಮಸ್ಯೆ. ಜೀತಗಾರಿಕೆಯ ವಸ್ತುವನ್ನೇ ಆಧಾರವಾಗಿ ಹೊಂದಿದ್ದು ಗೇಣಿ ರೈತರನ್ನು ಭೂ ಒಡೆಯರು ಗುಲಾಮರಂತೆ ನಡೆಸಿಕೊಳ್ಳುವ ರೀತಿ. ತಮಗೆ ಗೌರವ ಸಿಗಲಿಲ್ಲವೆಂದು ಆಳೊಬ್ಬನನ್ನು ಪೈಶಾಚಿಕ ರೀತಿಯಲ್ಲಿ ದಂಡಿಸಿದ ಬಗೆ, ಸ್ವತಂತ್ರ ಬದುಕು ಕಟ್ಟಿಕೊಂಡಿದ್ದ ವ್ಯಕ್ತಿಯೊಬ್ಬ ಗೌಡರಿಗೆ ತಕ್ಕ ಪಾಠ ಕಲಿಸಿದ ರೀತಿಯನ್ನು ಕತೆಗಾರರು ಕೊನೆಯಲ್ಲಿ ಹಾಸ್ಯಮಿಶ್ರಿತ ಶೈಲಿಯಲ್ಲಿ ನಿರೂಪಿಸಿದ್ದಾರೆ.

ಅಂತಿಮ ಘಟ್ಟದವರೆಗೂ ಗಂಭೀರವಾಗಿಯೇ ಸಾಗುವ ಕತೆಯು ಗೇಣಿ ರೈತರು ಸೇರಿ ನಾಟಕಮಾಡಲು ತೀರ್ಮಾನಿಸಿ ಅದರಂತೆ ನಾಟಕ ಶುರುಮಾಡುವ ಮೊದಲು

[illegible]

ಗೌಡರ ಆಹ್ವಾನಿಸಿ ಎಲ್ಲರಿಗೂ ಕಾಣುವ ಹಾಗೆ ರಂಗದ ಮುಂದೆ ಆಳು ತಂದಿಟ್ಟ 'ಕುರ್ಚಿ'ಯಲ್ಲಿ ಗೌಡರು ಕುಳಿತುಕೊಂಡಾಗ ಸ್ವತಂತ್ರ ಭೂಮಿ ಹೊಂದಿದ್ದ ರೈತ ಜಟ್ಯಾನಾಯ್ಕ ಇವರಿಗೆ ಸರಿಸಮನಾಗಿ ಎದುರಿಗೆ ತಾನೂ ಕುರ್ಚಿಯೊಂದನ್ನು ಹಾಕಿ ಕುಳಿತುಕೊಳ್ಳುತ್ತಾನೆ. ಇದರಿಂದ ಆಘಾತಕ್ಕೊಳಗಾದ ಗೌಡರು ನಾಟಕ ನೋಡದೆ ಮನೆಗೆ ನಡೆದುಬಿಡುತ್ತಾರೆ. ಊರಿನ ಜನರೆಲ್ಲ ಸಿಳ್ಳೆಹಾಕಿ ಕೂಗಿ ತಮ್ಮ ವಿಜಯೋತ್ಸವವನ್ನು ಆಚರಿಸುತ್ತಾರೆ. ದಮನಿತ ಜನಸಮುದಾಯದ ಪ್ರತಿಭಟನೆ ಅಭಿವ್ಯಕ್ತಿಯ ರೂಪಕವಾಗಿ 'ಕುರ್ಚಿ' ಕಂಡುಬರುತ್ತದೆ.

ಒಬ್ಬಂಟಿಗರಾಗಿ ಎಂದಿಗೂ ಗೌಡರನ್ನು ಎದುರಿಸಲು ಸಾಧ್ಯವಾಗದ ಜನರಿಗೆ ತಮ್ಮ ಮನಸ್ಸನ್ನು ಉಪಶಮನಗೊಳಿಸಿಕೊಳ್ಳಲು ಇದೊಂದು ಸೂಕ್ತ ಅವಕಾಶವಾಗಿ ಕಂಡುಬರುತ್ತದೆ. ಇದು ಗೌಡರಿಗಾಗುವ ಸಣ್ಣ ಅವಮಾನವಾದರೆ ಇಂತಹ ಅದೆಷ್ಟೋ ಅವಮಾನ, ಸಂಕಟಗಳಿಂದ ಪ್ರತಿದಿನ ಬಸವಳಿಯುತ್ತಿರುವ ಗೇಣಿರೈತರ, ಜೀತಗಾರರ ಪರವಾಗಿ ನಿಲ್ಲುವ ಕತೆಗಾರರು ಸ್ವತಂತ್ರ ಬದುಕು ಕಟ್ಟಿಕೊಂಡು ಸಾರ್ಥಕ ಜೀವನ ನಡೆಸುವಂತೆ ಹಾರೈಸುತ್ತಾರೆ, ರೂಪಾತ್ಮಕತೆಯನ್ನು ಡಿಸೋಜ ಈ ಕತೆಯ ಮೂಲಕ ಕಟ್ಟಿಕೊಟ್ಟಿರುವುದನ್ನು ಗುರುತಿಸಬಹುದು.

ಗೋಡೆಗಡಿಯಾರಗಳು

ಕತೆಗಾರರು ನಿರೂಪಕರಾಗಿ ತಾವು ವಾಸಿಸುವ ಮನೆಯ ಸುತ್ತಲಿನ ಕುಟುಂಬಗಳಲ್ಲಿರುವ ಗೋಡೆಗಡಿಯಾರಗಳ ಸದ್ದಿನೊಂದಿಗೆ ಆರಂಭಗೊಂಡು ರಾತ್ರಿಯವರೆಗೂ ಸಮಯದೊಂದಿಗೇ ಸಾಗುವ ಕುಟುಂಬಗಳ ಜೀವನ, ವೈವಿಧ್ಯಮಯ ಬದುಕು. ಅವರ ನಡುವಿನ ಕೌಟುಂಬಿಕ ಸಂಬಂಧ, ಸಮಸ್ಯೆಗಳ ಚಿತ್ರಣವನ್ನು ಈ ಕತೆ ನೀಡುತ್ತದೆ.

ಒಬ್ಬೊಬ್ಬರ ಮನೆಯ ಗೋಡೆ ಗಡಿಯಾರಗಳು. ಅವು ಉಂಟು ಮಾಡುವ ಸದ್ದು, ಕೂಗುವ ರೀತಿ ವಿಭಿನ್ನವಾಗಿದ್ದು ಅದರಂತೆಯೇ ಆ ಕುಟುಂಬಗಳ ಸದಸ್ಯರ ವರ್ತನೆ, ಮಾನವ ಸಂಬಂಧಗಳ ಸ್ವರೂಪ ಸಮಸ್ಯೆಗಳು ಭಿನ್ನತೆಯಿಂದ ಇರುವುದನ್ನು ಗಮನಿಸಬಹುದು. ಇಲ್ಲಿ ಪ್ರತಿಯೊಂದು ಕುಟುಂಬವು ತನ್ನ ದೈನಂದಿನ ಬದುಕಿನ ಆರಂಭ. ಮುಕ್ತಾಯಕ್ಕೆ ಗಡಿಯಾರಗಳನ್ನು ಅವಲಂಬಿಸಿರುವುದು ಕಂಡುಬರುತ್ತದೆ. ಇವು ಜನರನ್ನು, ಅವರ ದೈನಂದಿನ ಕೆಲಸಕಾರ್ಯಗಳನ್ನು ಎಚ್ಚರಿಸುವ ಕೆಲಸ ಮಾಡುತ್ತವೆ. ಇಲ್ಲಿ ಗೋಡೆಗಡಿಯಾರಗಳು ಕೇವಲ ಸಮಯವನ್ನು ಕೂಗಿ ಹೇಳುವ ಜನರನ್ನು ಎಚ್ಚರಿಸುವ ಸಾಧನಗಳಾಗಿ ಮಾತ್ರ ಗೋಚರಿಸದೇ ಅವು ಬದುಕಿನ

ವಾಸ್ತವತೆಯನ್ನು ತೆರೆದಿಡುತ್ತವೆ. ಉಂಟುಮಾಡುವ ಶಬ್ದವು ಬದುಕಿನ ತಲ್ಲಣಗಳನ್ನು ದೃಗ್ಗೋಚರಿಸುತ್ತದೆ.

ಇಲ್ಲಿ ಕತೆಗಾರರು ಕತೆಯ ಮೂಲಕ ಒಂದು ಅನುಭವವನ್ನು ಕೆದಕುವ, ವಿಶ್ಲೇಷಿಸುವ, ಒಂದು ಸತ್ಯವನ್ನು ಶೋಧಿಸುವ ಕೆಲಸ ಮಾಡಿದ್ದಾರೆ.

ಸಂಬಂಧ

ಆಧುನಿಕ ಶಿಕ್ಷಣ ಜಾಗತೀಕರಣದ ಪ್ರಭಾವಕ್ಕೊಳಗಾದ ಯುವಕನೋರ್ವ ತನ್ನ ಮೂಲ ಜಾತಿ ಧರ್ಮ, ಬಿಟ್ಟು ಕುಟುಂಬ ಸಂಬಂಧಗಳನ್ನು ಕಡಿದುಕೊಂಡು ಕ್ರೈಸ್ತಧರ್ಮಕ್ಕೆ ಮತಾಂತರಗೊಳ್ಳುವ ಕಥಾವಸ್ತುವನ್ನು ಈ ಕತೆ ಒಳಗೊಂಡಿದೆ. 'ಸಂಬಂಧ' ಕತೆ ಸರಳವಾದದ್ದು ಆದರೆ ಅಷ್ಟೇ ಸರಳವಾಗಿ ಮಾನವ ಸಂಬಂಧಗಳ ಸಂಕೀರ್ಣತೆಯನ್ನು, ಒಳಸೆಳೆತವನ್ನು ಆಕರ್ಷಕವಾಗಿ ಮಂಡಿಸುತ್ತದೆ.

ಗುಡಗೇರಿ ಬೆಳಗಾಂ ಹತ್ತಿರದ ಹಳ್ಳಿ, ಇಲ್ಲಿಯ ಶರಣಪ್ಪ ಎಂಬ ಯುವಕ ಆಧುನಿಕ ಶಿಕ್ಷಣ ಪಡೆದು ಜಾಗತೀಕರಣ, ವಿದೇಶಿ ವ್ಯಾಮೋಹಕ್ಕೆ ಒಳಗಾಗಿ ತನ್ನ ಮೂಲ ಹಿಂದೂಧರ್ಮದ ದೇವರ ಆರಾಧನೆ, ಪೂಜೆ, ಸ್ನಾನ, ಸಂಪ್ರದಾಯ, ಆಚಾರ–ವಿಚಾರ, ನಂಬಿಕೆಗಳಲ್ಲಿ ಆಸಕ್ತಿ ಕಳೆದುಕೊಳ್ಳುತ್ತಾನೆ. ಕ್ರೈಸ್ತಧರ್ಮಕ್ಕೆ ಮತಾಂತರಗೊಳ್ಳುವ ಇರಾದೆಯನ್ನು ತೋರಿದಾಗ ಮೂಲ ಜಾತಿ ಧರ್ಮ ಅಲ್ಲಿನ ಆಚಾರವಿಚಾರ ನಂಬಿಕೆಗಳ ಬಗ್ಗೆ ಪೂರ್ಣವಾಗಿ ಒಗ್ಗಿಕೊಂಡು ಆರಾಧಿಸುತ್ತಿದ್ದ ಆತನ ಕುಟುಂಬ, ಹಿರಿಯ ಜೀವಗಳು ಮತಾಂತರ ವಿರೋಧಿಸುವ ಭಾವ ತಳೆಯುವುದು ಸರಿಯಾಗಿದ್ದು ಇದು ಅವರ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟುಮಾಡುವ ಕಾರ್ಯವೇ ಸರಿ.

ಯಾವುದಕ್ಕೂ ಜಗ್ಗದೇ ಎಲ್ಲ ಸಂಬಂಧಗಳನ್ನು ಕಳೆದುಕೊಂಡು ಮತ್ತೊಂದು ಧರ್ಮಕ್ಕೆ ಮತಾಂತರ ಹೊಂದುವುದು ಎಷ್ಟು ಸರಿ? ಎಂಬ ಪ್ರಶ್ನೆ ಓದುಗರಿಗೆ ಎದುರಾಗದೇ ಇರದು. ಆತ ಕ್ರೈಸ್ತಧರ್ಮದ ಮತ್ತೊಂದು ಹೆಣ್ಣನ್ನು ಮದುವೆಯಾಗಿ ತನ್ನ ಮೂಲಧರ್ಮದ ಸಂಪ್ರದಾಯದಂತೆ ಶಾಸ್ತ್ರೋಕ್ತವಾಗಿ ವಿವಾಹವಾಗಿದ್ದ ಮೊದಲ ಹೆಂಡತಿಯನ್ನು ಕೊನೆಯವರೆಗೂ ತಿರುಗಿ ನೋಡದೇ ಇದ್ದುದು ಆತ ಎಷ್ಟೇ ವಿದ್ಯಾವಂತನಾಗಿದ್ದರೂ ಮಾನವೀಯ ಮೌಲ್ಯಗಳ ಗಂಧವೇ ಇಲ್ಲದ ಆತನ ಕ್ರೌರ್ಯ ಮುಖದರ್ಶನ ಮಾಡಿಸುತ್ತದೆ. ಆತನ ಮರಣಾನಂತರ ದೂರದ ಕರಳು ಬಳ್ಳಿಯ ಸಂಬಂಧದ ಮೂಲವನ್ನು ಹುಡುಕಿಕೊಂಡು ಬರುವ ಮೊಮ್ಮಗನ ಮೂಲಕ ಕತೆಗಾರ

ಕಳೆದುಹೋದ ಸಂಬಂಧವನ್ನು ಮರಳಿ ಕಟ್ಟುವ ಪ್ರಯತ್ನ ಮಾಡಿರುವುದು ಉತ್ತಮ ಬೆಳವಣಿಗೆ.

ಆಧುನಿಕತೆಯ ವ್ಯಾಮೋಹಕ್ಕೆ ಸಿಲುಕಿ ಇಂದಿನ ಯುವ ಜನಾಂಗ ತನ್ನ ಮೂಲ ಧರ್ಮ, ಸಂಸ್ಕೃತಿ, ನಂಬಿಕೆಗಳನ್ನು ಮರೆಯುವುದು ಒಳ್ಳೆಯ ಬೆಳವಣಿಗೆಯಲ್ಲ ಎಂಬುದು ಕತೆಗಾರರ ಅಭಿಮತ.

ಪಿಟೀಲು

ಜಾತಿವ್ಯವಸ್ಥೆಯ ಕರಿನೆರಳು ಕೇವಲ ಸಂಪ್ರದಾಯ, ಸಂಸ್ಕೃತಿ ಆಚರಣೆಗಳಿಗಷ್ಟೇ ಸೀಮಿತವಾಗದೆ ನುಡಿಸುವ ವಾದ್ಯಗಳು, ಸಂಗೀತ ಸಾಧನಗಳನ್ನೂ ಉಚ್ಛ-ನೀಚ ಜಾತಿಯವರು ನುಡಿಸುವ ವಾದ್ಯಗಳೆಂದು ವಿಂಗಡಿಸಿ ಅದರ ಮೇಲೆ ದಟ್ಟ ಛಾಯೆ ಬಿದ್ದಿರುವುದು ಸಮಾಜದ ದುರಾವಸ್ಥೆಯೇ ಸರಿ.

ಸರಕಾರಿ ಕೆಲಸಗಾರರು ಎಂದರೆ ಎಲ್ಲರೂ ಸಮಾನರು. ಅಲ್ಲಿಯೂ ಸಹ ಶೂದ್ರ ಕೆಲಸಗಾರನಾದ ಕಾರಣ ಪಂಚಾಲಯ್ಯನನ್ನು ತುಚ್ಛವಾಗಿ ಕಂಡು ಮಡಿವಂತಿಕೆಯನ್ನು ಪ್ರದರ್ಶಿಸುವುದು ಜಾತಿಪದ್ಧತಿಯ ಕ್ರೂರ ಚಿತ್ರಣ ನೀಡುತ್ತದೆ. ಆತನಿಗೆ 'ಪಿಟೀಲು' ಕಲೆಯಬೇಕೆಂಬ ಹಂಬಲವಿದ್ದು ಕೆಲವರ ಹತ್ತಿರ ಕಲಿಸಿಕೊಡಿ ಎಂದು ಹೋದಾಗ ಅದನ್ನು ಕಲಿಯಲು ಸಂಸ್ಕಾರ ಬೇಕು, ಹಣೇಲಿ ಬರೆದಿರಬೇಕು. ಶೂದ್ರರಿಗೆ ತಮಟೆ, ಊರುಮೆ, ವಾಲಗ ಸರಿ. ವೀಣೆ, ಪಿಟೀಲು ಎಲ್ಲವೂ ಮೇಲ್ಜಾತಿಯವರ ವಾದ್ಯಗಳೆಂದು ಹೇಳುವುದು ಜಾತಿವ್ಯವಸ್ಥೆಯು ಸಮಾಜದ ಎಲ್ಲ ಆಯಾಮಗಳಲ್ಲೂ ವ್ಯಾಪಿಸಿರುವುದನ್ನು ಧ್ವನಿಸುತ್ತದೆ.

ಉಪದೇಶಿ ಪಾದ್ರಿಯು ಸಮಾಜದ ಮೇಲ್ವರ್ಗಕ್ಕೆ ಸೇರಿದ್ದರೂ ಶ್ರದ್ಧೆಯಿದ್ದ ಶೂದ್ರನಿಗೆ ಪಿಟೀಲು ಕಲಿಸಿ ಅವನಲ್ಲಿದ್ದ ಕೀಳರಿಮೆ, ಅಳುಕು, ಅತೃಪ್ತ ಭಾವವನ್ನು ಹೋಗಲಾಡಿಸಿ ಮಾನವೀಯತೆ ತೋರಿ ಚರ್ಚಿನ ಪ್ರಾರ್ಥನಾ ಸಮಯದಲ್ಲಿ ಆತನಿಗೆ ವೇದಿಕೆ ಕಲ್ಪಿಸಿ ಪ್ರತಿಭೆ ಹೊರಹೊಮ್ಮಲು ಅವಕಾಶ ಕಲ್ಪಿಸುವುದು ನಿಜಕ್ಕೂ ಶ್ಲಾಘನೀಯ. ಇದು ಬಿಷಪ್ ಸಾರ್ಜೆಂಟರ ಜೀವನದ ಒಂದು ಸತ್ಯ ಘಟನೆಯಿಂದ ಪ್ರೇರಿತವಾದುದು ಎಂಬುದಾಗಿ ಕತೆಗಾರರು ಅಂತಿಮದಲ್ಲಿ ತಿಳಿಸುತ್ತಾರೆ. ಜಾತಿಮತ ಪಾಪಪುಣ್ಯ ಮಡಿಮೈಲಿಗೆ ದೇವರು ಧರ್ಮ ಈ ಮೊದಲಾದ ನಂಬಿಕೆಗಳು ಹುಟ್ಟುಹಾಕಿರುವ ತಾರತಮ್ಯ ಶೋಷಣೆ, ದಬ್ಬಾಳಿಕೆ, ಕ್ರೌರ್ಯಗಳನ್ನು ವಿರೋಧಿಸಿ ಮಾನವೀಯ ಸಮಾಜ ರಚನೆಯ ತುಡಿತ ಅವರ ಬರಹದಲ್ಲಿರುವುದನ್ನು ಗುರುತಿಸಬಹುದು.

ಸಾಯುವವರ ನಡುವೆ ಬದುಕ ಹೊರಟವರು

'ಹುಟ್ಟು ಆಕಸ್ಮಿಕ, ಸಾವು ನಿಶ್ಚಿತ' ಎಂಬಂತೆ ಸಮಾಜದಲ್ಲಿ ಹುಟ್ಟಿದ ಪ್ರತಿಯೊಬ್ಬರೂ ಕಾಲ ಬಂದಾಗ ಸಾಯಲೇಬೇಕು. ಸಾವಿಗೆ ಬಡವ ಬಲ್ಲಿದ, ಕಾಲದೇಶಗಳ ಭೇದಭಾವವಿಲ್ಲ. ಆದರೆ ಇಲ್ಲೊಬ್ಬ ವ್ಯಕ್ತಿ ಇಡೀ ತನ್ನ ಬದುಕನ್ನು ಸಾವಿನ ಸಿದ್ಧತೆಗಾಗಿ ಮೀಸಲಿಟ್ಟಂತೆ ಬದುಕುವ, ಸಾವನ್ನು ಮುಂದೂಡುವ, ಸಾವೇ ಇಲ್ಲದ ಬದುಕನ್ನು ನಿರಂತರವಾಗಿ ಅನುಭವಿಸಬೇಕೆಂದು ಅದಕ್ಕಾಗಿ ವಿಜ್ಞಾನದ ಮೊರೆಹೋಗಿ ನವಯೌವ್ವನ ಪಡೆಯಲು ಹಂಬಲಿಸಿ ಅಂತಿಮವಾಗಿ ಆತನ ಸಾಯುವ ಸಮಯ ಬಂದು ಕಾಲವಾಗುವ ಕಥಾವಸ್ತುವನ್ನೊಳಗೊಂಡಿದೆ.

ಮಿಸ್ಟರ್ ಡೊಮೇನಿಕ್ ೮೨ರ ಹರೆಯದ ಮುದುಕ ಸಾವು ಈತನನ್ನು ಭಯಾನಕವಾಗಿ ಕಾಡುತ್ತದೆ. ಸಾವಾದಾಗ ತನ್ನ ಕುಟುಂಬ, ನೆರೆಹೊರೆಯ ಆತ್ಮೀಯರು. ಹಣ, ಸಕಲ ಸಂಪತ್ತನ್ನು ಬಿಟ್ಟು ಹೋಗಬೇಕಾಗುತ್ತದೆಯಲ್ಲಾ? ಸಾವು ಅದೆಷ್ಟು ಭೀಕರ ಕ್ರೂರ ಎನಿಸುತ್ತದೆ. ಸಾವನ್ನು ಗೆಲ್ಲಲು ವಿಜ್ಞಾನದಿಂದ ಮಾತ್ರ ಸಾಧ್ಯವೆಂದು ಕೊನೆಗೆ ತೀರ್ಮಾನಿಸಿ ಕ್ಲೋನಿಂಗ್ ತಂತ್ರಜ್ಞಾನದ ಮೊರೆಹೋಗುತ್ತಾನೆ. ಪ್ರಯೋಗಕ್ಕೆ ಒಳಗಾಗುವ ಮೊದಲೇ ಕಾಲ(ಯಮ) ಆತನನ್ನು ಕೊಂಡೊಯ್ಯುತ್ತಾನೆ.

ಇಲ್ಲಿ ಕತೆಗಾರರು ಇಂದಿನ ಆಧುನಿಕ ಜಗತ್ತಿನಲ್ಲಿ ಮಾನವ ಭೀಕರ ಕಾಯಿಲೆಗಳಿಗೆ ಔಷಧಿ ಕಂಡುಹಿಡಿದು ಸಾಯುವವರ ಸಂಖ್ಯೆ ಕಡಿಮೆ ಮಾಡಿದ, ಕಲ್ಪಿಸಿಕೊಳ್ಳಲಾಗದಂತಹ ಸಂಶೋಧನೆಗಳನ್ನು ಮಾಡಿದ, ಅವನ ಜ್ಞಾನದ ಕ್ಷಿತಿಜ ವಿಸ್ತಾರಗೊಂಡು ಇಂದು ಅಂಗಾಂಗಗಳನ್ನು ಸಹ ಕೃತಕವಾಗಿ ಕಾರ್ಯನಿರ್ವಹಿಸುವಂತೆ ಮಾಡಿ ವೈದ್ಯಕೀಯ ಕ್ಷೇತ್ರದಲ್ಲೂ ಅಮಿತ ಸಾಧನೆ ಮಾಡಿದ್ದರೂ ಸಾವನ್ನು ಮುಂದೂಡಬಹುದೇ ವಿನಃ ಸಾವನ್ನು ಗೆಲ್ಲಲು, ಅಮರರಾಗಿ ಬದುಕಲು ಸಾಧ್ಯವಿಲ್ಲವೆಂಬ ಜೀವನದ ಸತ್ಯವನ್ನು ಕತೆಯ ಮೂಲಕ ಪುನರುಚ್ಚರಿಸಿದ್ದಾರೆ.

ಜೀವನವೆನ್ನುವ ಪ್ರವಾಹದಲ್ಲಿ ತೇಲಿ ಬರುವಾಗ ನಾವು ಹಲವು ಅವಸ್ಥೆಗಳನ್ನು ದಾಟಿ ಬರುತ್ತೇವೆ. ಒಂದೊಂದು ಅವಸ್ಥೆ ಒಂದೊಂದು ಕಾಲಕ್ಕೆ ಸರಿ ಯೋಗ್ಯ. ಹೀಗೆಂದು ಮತ್ತೆ ಮತ್ತೆ ಅದನ್ನು ಬಯಸುವುದರಲ್ಲಿ ಅರ್ಥವಿಲ್ಲ ಎಂಬುದು ನನ್ನ ದೃಷ್ಟಿಯಲ್ಲಿ ಸರಿ ಎನಿಸುತ್ತದೆ.

ಚಪ್ಪಾಳೆ ತಟ್ಟದ ಕೈಗಳು

ಬಾಲ್ಯದಿಂದಲೂ ಅವಹೇಳನ, ತಮಾಷೆ, ಟೀಕೆ, ವ್ಯಂಗ್ಯ, ತಿವಿತ, ನೋವು, ಸಂಕಟ, ಮಾತಿನ ಏಟು ತಿಂದು ಬದುಕಿದ ಶೂದ್ರ ಬಾಲಕನೊಬ್ಬ ತಂದೆಯ ಮಾತು

ಹಾಗೂ ಮೇಲ್ವರ್ಗದ ಸ್ನೇಹಿತನೊಬ್ಬನ ಪ್ರೇರಣೆಯಿಂದ ಚೆನ್ನಾಗಿ ಓದಿ ಮುಂದೆ ಜಿಲ್ಲಾಧಿಕಾರಿಯಂತಹ ಉತ್ತಮ ಕೆಲಸ ಪಡೆದ ಸಾಧಕನನ್ನು ಈ ಕತೆಯು ಪರಿಚಯಿಸುತ್ತದೆ.

ಎ.ಕೆ.ಪಂಚಾಲ ಈ ಕತೆಯ ನಾಯಕನಾಗಿದ್ದು ಎಲ್ಲರ ಅಪಹಾಸ್ಯಕ್ಕೊಳಗಾಗಿ ಶಾಲೆಗೆ ಹೋಗಲು ಹಿಂದೇಟು ಹಾಕಿದಾಗ "ನೀನು ನನ್ನ ಹಾಗೇ ಆಗ್ತೀಯಾ? ಬೇಡ ಮಗ... ನೀನು ಓದಬೇಕು"[೬] ಎಂದು ತಂದೆ ಆತನಿಗೆ ಬುದ್ಧಿಮಾತು ಹೇಳಿದುದು ಸಮಾಜದಲ್ಲಿ ತಾವು ನಿರ್ಗತಿಕರಾಗಿ, ಶೂದ್ರರಾಗಿ ಅನುಭವಿಸಿದ ನೋವು, ಯಾತನೆಗಳ ಅರಿವಿದ್ದ ಬಾಲಕ ಸಹಜವಾಗಿಯೇ ಅದರಿಂದ ಹೊರಬಂದು ಉತ್ತಮ ಜೀವನ ನಡೆಸಲು ವಿದ್ಯಾಭ್ಯಾಸ ಮಾಡುವ ತೀರ್ಮಾನ ತಳೆದುದು, ಆತನ ಬದುಕಿನ ಚಿತ್ರಣವನ್ನೇ ಬದಲಿಸುತ್ತದೆ, ಕಲಿಯಬೇಕೆಂಬ ಹಂಬಲವಿದ್ದ ಬಾಲಕನಿಗೆ ಗುರುಗಳು, ವಿದ್ಯಾರ್ಥಿ ಸಮೂಹ ಕೆಟ್ಟದಾಗಿ ನಿಕೃಷ್ಟವಾಗಿ ನಡೆಸಿಕೊಳ್ಳುವುದು ತುಂಬಾ ಅಮಾನುಷವಾದುದು. ಪೊಲೀಸ್ ಅಧಿಕಾರಿಯೊಬ್ಬರ ಮಗ ಶಾಲೆಗೆ ದಾಖಲಾಗಿ ಈ ಬಾಲಕನಿಗೆ ಪ್ರೇರಣೆ ನೀಡಿ, ಆತನಲ್ಲಿದ್ದ ಕೀಳರಿಮೆ ದೂರಮಾಡಿ ಆತನ ವಿದ್ಯಾಭ್ಯಾಸಕ್ಕೆ ಆಸರೆಯಾಗಿ ನಿಂತುದು ಮುಂದೆ ಚೆನ್ನಾಗಿ ಓದಿ ಅಪಹಾಸ್ಯ ನಿಂದನೆ ಮಾಡುತ್ತಿದ್ದ ಸಮಾಜದಲ್ಲೇ ಜಿಲ್ಲಾಧಿಕಾರಿಯಾಗಿ ಕೀರ್ತಿ ಪಡೆದುದು ದೊಡ್ಡ ಸಾಧನೆಯೇ ಸರಿ.

ಸಮಾಜದಲ್ಲಿರುವ ಪ್ರತಿಯೊಬ್ಬರೂ ಸಮಾನರು. ಜಾತಿ, ವರ್ಗ, ಲಿಂಗ ಅಥವಾ ಇನ್ನಾವುದೇ ರೀತಿಯಲ್ಲೂ ಭಿನ್ನತೆ ತೋರಬಾರದು. ಸಾಧನೆ ಎಂಬುದು ಪ್ರತಿಯೊಬ್ಬರ ಶ್ರಮದ ಫಲ, ಅದು ಸಾಧಕನ ಸ್ವತ್ತು ಎಂಬುದನ್ನು ಕತೆಯು ಧ್ವನಿಸುತ್ತದೆ.

ಚಂಡೆ

ಮಲೆನಾಡು ಕರಾವಳಿಯಲ್ಲಿ ಮನೆಮಾತಾಗಿರುವ 'ಯಕ್ಷಗಾನ', ನಾಟಕ, ನೃತ್ಯ ಮುಂತಾದ ಸಾಂಸ್ಕೃತಿಕ ಚಟುವಟಿಕೆಗಳ ದರ್ಶನ ಮಾಡಿಸುವ ಕಥಾವಸ್ತುವನ್ನು ಇದು ಒಳಗೊಂಡಿದೆ.

ಮಲೆನಾಡಿನ ಕಾಳಿಬೀಡಿನ ಕಾಳಿಕಾ ದೇವಾಲಯ ಸುತ್ತಲೂ ಹೆಸರು ಮಾಡಿದ್ದು ಜನರು ಹರಕೆ ಹೊತ್ತು ನಾಟಕ ಮಾಡುವುದು, ಹಳ್ಳಿಯ ಯುವಕರು ಸೇರಿ ನಾಟಕ ಮಂಡಳಿ, ಕಾಳಿಕಾದೇವಿ ಯಕ್ಷಗಾನ ಕಲಾಸಂಘ ಮುಂತಾದ ಸಂಘ ನಿರ್ಮಿಸಿಕೊಂಡು ಹಬ್ಬ-ಜಾತ್ರೆಗಳ ಸಂದರ್ಭಗಳಲ್ಲಿ ನಾಟಕ ಯಕ್ಷಗಾನ ಆಡಿ ಸುತ್ತಲಿನ ಜನರಿಗೆ ಮನರಂಜನೆ ನೀಡುವುದು ಹಿಮ್ಮೇಳ, ಮುಮ್ಮೇಳ ಕೇಳಿ ಹೊಡೆಯುವುದು,

ತಾಳಮದ್ದಲೆ, ರಂಗಪ್ರವೇಶ, ಮೃದಂಗ, ಚಂಡೆ ಬಾರಿಸುವ ಕ್ರಮ, ಕಿರೀಟ, ಪಗಡಿ, ಬಣ್ಣದ ವೇಷಧಾರಣೆ ಕುಣಿಯುವ ರೀತಿ ಭಾಗವತರ ಕಾರ್ಯವೈಖರಿ, ಬಾಲಗೋಪುಲರ ಕುಣಿತ, ಎಲ್ಲರನ್ನೂ ನಕ್ಕು ನಲಿಸುವ ಹಾಸ್ಯ ಪಾತ್ರಗಾರ ಕೋಡಂಗಿಯ ಪ್ರವೇಶ, ಮುಕ್ತಾಯ ಎಲ್ಲವನ್ನೂ ಕತೆಗಾರರು ಸೊಗಸಾಗಿ ದರ್ಶನ ಮಾಡಿಸುತ್ತಾರೆ. ಅದರೊಟ್ಟಿಗೆ ಸೀಮೆಗೆಲ್ಲ ಚಂಡೆ ಬಾರಿಸುವ ಏಕೈಕ ವ್ಯಕ್ತಿ ಎಂದು ಹೆಸರು ಗಳಿಸಿದ್ದ ಸೋಮಯ್ಯನಿಗಿದ್ದ ಹೆಂಗಸರ ಗೀಳು ಮೃತ್ಯುವಿನೊಂದಿಗೆ ಸಮಾಪ್ತಿಯಾಗುವ ಬಗೆಯನ್ನು ಕತೆಯು ಒಳಗೊಂಡಿದೆ.

"ಲಿಟ್ಲರಾಕ್"ಗೆ ನಾಗೋಡಿ ದೇವರ ಆಶೀರ್ವಾದ

ಭಾರತದಲ್ಲಿ ಜನಿಸಿ, ಅಮೇರಿಕಾದಲ್ಲಿ ನೆಲಸಿ ಅಲ್ಲಿನ ಸಂಸ್ಕೃತಿ, ಆಚರಣೆಗಳಿಗೆ ಮನಸೋತು, ಭಾರತೀಯರ ಕೆಟ್ಟ ಆಡಳಿತ ಪದ್ಧತಿ, ಜನರ ನಡವಳಿಕೆ, ನಿಧಾನ ಪ್ರವೃತ್ತಿ, ಸಣ್ಣತನ, ಜಾತೀಯತೆ, ತಾರತಮ್ಯ ಮನೋಭಾವ, ಅವ್ಯವಸ್ಥೆ ಭ್ರಷ್ಟಾಚಾರ, ಲಂಚುಗುಳಿತನ ಹೀಗೆ ಸಮಸ್ಯೆಗಳ ಸರಮಾಲೆಯನ್ನೊತ್ತು ಸಾಗುತ್ತಿರುವ ಭಾರತದ ಎಲ್ಲವನ್ನೂ ದೂರ ತಳ್ಳಿ ಸದಾ ತಾನು ಹುಟ್ಟಿದ ದೇಶವನ್ನೇ ಹಳಿಯುತ್ತಾ ಕ್ರಮೇಣ ಭಾರತವನ್ನು ಮರೆತ ವ್ಯಕ್ತಿಯ ಕುಟುಂಬ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿ ಅದರ ಪರಿಹಾರಕ್ಕೆ ಭಾರತದಲ್ಲಿರುವ ನಾಗೋಡಿ ಮನೆದೇವರ ಮೊರೆಹೋಗುವ ಕಥಾವಸ್ತುವನ್ನು ಒಳಗೊಂಡಿದೆ.

ಯಾವುದೇ ವ್ಯಕ್ತಿ ತಾನು ಹುಟ್ಟಿದ ಊರು, ಸಂಸ್ಕೃತಿ, ಧರ್ಮ, ನಂಬಿಕೆ, ಆಚರಣೆಗಳನ್ನು ಮರೆಯಬಾರದು. ಹುಟ್ಟಿದ ದೇಶವನ್ನು ಹಳಿಯುವ ಕೆಲಸ ಮಾಡಬಾರದು. ಇಲ್ಲಿ ಕಥಾನಾಯಕ ಚಂದ್ರು ಭಾರತದಲ್ಲೇ ಹುಟ್ಟಿ ಇಲ್ಲಿನ ಸಕಲ ಸೌಲಭ್ಯಗಳನ್ನು ಪಡೆದು ರೆಕ್ಕೆ-ಪುಕ್ಕ ಬಲಿತ ಮೇಲೆ ಇಲ್ಲಿನದನ್ನು ಹಳಿದು ಬೇರೊಂದು ದೇಶದ ಸಂಸ್ಕೃತಿಯ ವಶವಾಗುವುದು ದುರಾದುಷ್ಟಕರ. ಕೊನೆಯಲ್ಲಿ ಆತನ ಕುಟುಂಬಕ್ಕೆ ಎದುರಾಗುವ ತೊಡರುಗಳನ್ನು ನಿವಾರಿಸಿಕೊಳ್ಳಲು ಮನೆದೇವರಲ್ಲಿಗೆ ಹೋಗುವುದು ಮರ ಎಷ್ಟೇ ದೊಡ್ಡದಾಗಿ ಬೆಳೆದರೂ ಬೇರಿನ ಆಧಾರ ಬೇಕೆಂಬುದನ್ನು ಸಾರಿ ಹೇಳುತ್ತದೆ.

ಮನೆ

ವಿವಾಹ ಬಂಧನ ನಿರಾಕರಿಸಿ ಸ್ವತಂತ್ರವಾಗಿ ಬದುಕು ರೂಪಿಸಿಕೊಳ್ಳಲು ಮುಂದಾದ ಯುವತಿಯನ್ನು ಸಮಾಜ, ನೋಡುವ ದೃಷ್ಟಿ, ಆಕೆ ಎದುರಿಸುವ ಸಮಸ್ಯೆಗಳು, ಮಾನಸಿಕ ತುಮುಲಗಳನ್ನು ಈ ಕತೆಯು ಬಿಂಬಿಸುತ್ತದೆ.

ಚೆನ್ನಾಗಿ ಓದಿ ಸರ್ಕಾರಿ ಉದ್ಯೋಗ ಪಡೆದು ತನ್ನ ಕಾಲ ಮೇಲೆ ಆಕೆ ನಿಂತುಕೊಂಡದ್ದು ದಿಟ್ಟತನವನ್ನು ತೋರಿಸುತ್ತದಾದರೂ ಕಛೇರಿಯಲ್ಲಿ ನೌಕರರು ನಡೆಸಿಕೊಳ್ಳುವ ರೀತಿ ನಾಚಿಕೆಗೇಡು. ಮುಂದೆ ಆಕೆ ಬಡ್ತಿ ಹೊಂದಿ ತಹಶೀಲ್ದಾರ್ ಆಗಿ ಸ್ವಂತ ಮನೆಕಟ್ಟಲು ಪ್ರಯತ್ನ ಪಟ್ಟಾಗ ನಿವೇಶನಕ್ಕೆ ಅರ್ಜಿ ಹಾಕಿದಂದಿನಿಂದ ಮನೆ ಕಟ್ಟುವವರೆಗೂ ಹಲವು ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಗಂಡ ಇಲ್ಲ ಮಕ್ಕಳಿಲ್ಲ. ಈಕೆಗೆ ಏಕೆ ಇಷ್ಟು ದೊಡ್ಡ ಸೈಟು? ದೊಡ್ಡ ಮನೆ. ಮನೆಯಲ್ಲಿ ಇಷ್ಟೆಲ್ಲ ಬೆಡ್ ರೂಂಗಳು ಬೇಕೆ? ಎಂಬ ಪ್ರಶ್ನೆಗಳು ಎದುರಾದುದು, ಮನೆಕಟ್ಟುವಾಗಿನ ತಕರಾರು ಸಾಲ ಮಂಜೂರು ಮಾಡುವ ಹಿರಿಯ ಅಧಿಕಾರಿ ಹೇಳುವ "ಒಂಟಿ ಹೆಂಗಸು... ಎಲ್ಲೋ ಒಂದು ಸಣ್ಣ ಬಾಡಿಗೆ ಮನೆ ಮಾಡಿಕೊಂಡು ಇರೋದು ಬಿಟ್ಟು, ಇಷ್ಟು ದೊಡ್ಡ ಮನೇನ ಕಟ್ಟೋದು ಯಾಕೆ? ಸರಕಾರ ಬೇರೆ ಅದಕ್ಕೆ ಸಾಲ ಕೊಡಬೇಕು.... ಇದೇ ಸಾಲಾನಾ ಯಾರಿಗಾದ್ರೂ ಸಂಸಾರಸ್ಥರಿಗೆ ಕೊಡಬಹುದಲ್ಲ"[2] ಎಂಬ ಮಾತು ಸಮಾಜ ಒಂಟಿ ಹೆಣ್ಣನ್ನು ನೋಡುವ ಪರಿ, ಸಮಾಜದಲ್ಲಿ ಹೆಣ್ಣಿನ ಸ್ಥಾನಮಾನಗಳ ಅರಿವು ಉಂಟಾಗುತ್ತದೆ. ಉತ್ತಮ ಸರ್ಕಾರಿ ಕೆಲಸದಲ್ಲಿರುವ ಸ್ತ್ರೀಯನ್ನೇ ಹೀಗೆ ನಡೆಸಿಕೊಂಡರೆ ಇನ್ನು ಬಡಪಾಯಿ ಒಂಟಿ ಮಹಿಳೆಯರ ಪಾಡೇನು? ಎಂಬ ಪ್ರಶ್ನೆ ನಮ್ಮನ್ನು ಕಾಡುತ್ತದೆ. ಬದಲಾಗಬೇಕಾದ ಜನರ ವರ್ತನೆಗಳು. ಮನೋಭಾವಗಳು, ಸುಧಾರಿಸಬೇಕಾದ ಸ್ತ್ರೀಸ್ಥಾನಮಾನಗಳ ಅಗತ್ಯತೆಯನ್ನು ಒತ್ತಿ ಹೇಳುತ್ತದೆ.

ಕರಿ ಮರದ ಕುರ್ಚಿ

ಉತ್ತಮ ಅಂತಃಕರಣ, ಬಡಜನರ ಸೇವಾ ಮನೋಭಾವ ಹೊಂದಿದ್ದ ವೈದ್ಯರೊಬ್ಬರು ಸಾವಿನಂಚಿನಲ್ಲಿದ್ದ ಅತ್ಯುತ್ತಮ ಕಲಾತ್ಮಕತೆಯಿಂದ ಕೂಡಿದ ಕೆತ್ತನೆ ಕೆಲಸಗಳಿಗೆ ಹೆಸರಾಗಿದ್ದ ಮರಗೆಲಸ ಮಾಡುವ ಬಡ ಆಚಾರಿಯನ್ನು ಬದುಕಿಸಿದ ಯಶೋಗಾಥೆಯನ್ನು ಈ ಕತೆಯು ಒಳಗೊಂಡಿದೆ.

ಕಠಿಣತಮ ಶಸ್ತ್ರಕ್ರಿಯೆಗಳನ್ನು ಮಾಡಿ ಎಲ್ಲೆಡೆ ಹೆಸರು, ಕೀರ್ತಿ ಸಂಪಾದಿಸಿದ್ದ ಡಾ॥ ಪೈ ಮೂಕ, ಕಿವುಡನಾಗಿದ್ದ. ಯಾವುದೋ ವೈದ್ಯರ ಪ್ರಯೋಗಕ್ಕೆ ತುತ್ತಾಗಿ ತನ್ನ ಎರಡು ಕೈಗಳು ಬೆಂದು ಆಕಾರ ಕಳೆದುಕೊಂಡು ಅನಾಥವಾಗಿ ಬಿದ್ದಿದ್ದ ಆಚಾರಿಯ ಮನೆಗೆ ಸ್ವತಃ ಬಂದು ಆತನಲ್ಲಿ ಪ್ರೀತಿ ತೋರಿ ತನ್ನ ನರ್ಸಿಂಗ್ ಹೋಂನಲ್ಲಿ ಉಚಿತ ಸೇವೆ ನೀಡಿ ಶಸ್ತ್ರಚಿಕಿತ್ಸೆಯ ಮೂಲಕ ಆತನ ಎರಡು ಕೈಗಳು ಮೊದಲಿನಂತಾಗುವಂತೆ ಮಾಡಿ ಮಾನವೀಯತೆ ಮೆರೆಯುವುದು ನಿಜಕ್ಕೂ ಶ್ಲಾಘನೀಯ.

ಆಚಾರಿಯು ತಾನು ಪಡೆದ ಉಚಿತ ಸೇವೆಗೆ ಪ್ರತಿಫಲವಾಗಿ ಕಲಾತ್ಮಕತೆ, ಕುಸುರಿ ಕೆಲಸದಿಂದ ಕೂಡಿದ ನೋಡಲು ಕಪ್ಪುಶಿಲೆಯಲ್ಲಿ ಮಾಡಿದಂತೆ ತೋರುವ ಎಲ್ಲರ ಕಣ್ಮನ ಸೆಳೆಯುವಂತಿದ್ದ 'ಕರಿ ಮರದ ಕುರ್ಚಿ'ಯೊಂದನ್ನು ವೈದ್ಯರಿಗೆ ನೀಡಿ ಕೃತಜ್ಞತೆ ಮೆರೆಯುತ್ತಾನೆ.

ಈ ಕತೆಯಲ್ಲಿ ವೈದ್ಯ ಹಾಗೂ ಆಚಾರಿ ಇಬ್ಬರೂ ಒಂದೊಂದು ಕ್ಷೇತ್ರದಲ್ಲಿ ಅದ್ಭುತ ಪ್ರಾವೀಣ್ಯತೆ ಪಡೆದವರಾಗಿದ್ದು ಇಬ್ಬರ ಕೆಲಸಕ್ಕೂ ಬೆಲೆ ಕಟ್ಟಲಾಗದು. ಕಥೆಗಾರರು ಈ ಕತೆಯ ಮೂಲಕ ಒಬ್ಬ ಮಹಾನ್ ವೈದ್ಯ ಹಾಗೂ ಅದ್ಭುತ ಕಲಾಗಾರನನ್ನು ಪರಿಚಯಿಸಿದ್ದಾರೆ.

ಒಂದು ಸಾವಿನ ನಂತರ

ಈ ಕತೆಯು ರಾಜಕೀಯ ವಸ್ತು ವಿಷಯವನ್ನು ಒಳಗೊಂಡಿದ್ದು ಹೆಣ್ಣನ್ನು ನಾಲ್ಕು ಗೋಡೆಗಳ ಮಧ್ಯೆ ಸೀಮಿತಗೊಳಿಸದೆ ಅವಕಾಶ ಕಲ್ಪಿಸಿದರೆ ಎಂತಹ ಸಾಧನೆ ಬೇಕಾದರೂ ಮಾಡಬಲ್ಲಳು ಎಂಬುದನ್ನು ಸಾಕ್ಷೀಕರಿಸುವ ಕಥಾವಸ್ತುವನ್ನು ಒಳಗೊಂಡಿದೆ.

ಸಾಕಷ್ಟು ಹೆಸರು ಗಳಿಸಿದ್ದ ಎಂ.ಎಲ್.ಎ.ವೊಬ್ಬ ಅಚಾನಕ್ಕಾಗಿ ಹೃದಾಯಾಘಾತದಿಂದ ಅಕಾಲ ಮರಣ ಹೊಂದುತ್ತಾನೆ. ಬರಿದಾದ ಸ್ಥಾನಕ್ಕೆ ಮರುಚುನಾವಣೆ ಮೂಲಕ ಅಭ್ಯರ್ಥಿಯನ್ನು ಭರ್ತಿ ಮಾಡುವ ವಿಚಾರ ಬಂದಾಗ ಅನುಕಂಪದ ಆಧಾರ, ಹಾಗೂ ಎಂ.ಎಲ್.ಎ. ಹೆಸರಿನ ಬಲದಿಂದ ಗೆಲುವು ಸಾಧಿಸಬಹುದೆಂಬ ಲೆಕ್ಕಾಚಾರದಲ್ಲಿ ಪಕ್ಷದ ಮುಖಂಡರು ಆತನ ಪತ್ನಿ 'ಹೇಮಲತ'ಳ ಹೆಸರನ್ನು ಅಂತಿಮಗೊಳಿಸುತ್ತಾರೆ. ಇದು ಪ್ರಸ್ತುತ ರಾಜಕೀಯ ಸಿದ್ಧಾಂತಕ್ಕೆ ಕನ್ನಡಿ ಹಿಡಿದಂತಿದೆ.

ಹೆಂಗಸರಿಗೆ ಹೆಚ್ಚು ಸ್ಥಾನಮಾನಗಳು ಸಿಗಬಾರದೆಂಬ ಅಭಿಪ್ರಾಯ ತಳೆದಿದ್ದ ಎಂಎಲ್ಎ ಪರಶಿವಪ್ಪ ತಾನು ಬದುಕಿದ್ದಾಗ ಹೆಂಡತಿಗೆ ರಾಜಕೀಯದ ನೆರಳು ಬೀಳದಂತೆ ಆಕೆಯನ್ನು ಸಾರ್ವಜನಿಕವಾಗಿ ಕಾಣಿಸಿಕೊಳ್ಳದಂತೆ ಒಂದರ್ಥದಲ್ಲಿ ಗೃಹಬಂಧನದಲ್ಲಿ ಇರಿಸಿದಂತೆ ನಡೆಸಿಕೊಂಡಿದ್ದ. ಆಕೆ ರಾಜಕೀಯದಲ್ಲಿ ಪದವಿ ಪಡೆದಿದ್ದು, ಶಾಲಾ ಕಾಲೇಜಿನಲ್ಲಿ ಉತ್ತಮ ವಾಗ್ಮಿ ಎಂದು ಹೆಸರು ಪಡೆದಿದ್ದಳು. ಗಂಡನ ಸಾವಿನ ನಂತರ ಅವಳಿಗೆ ಅವಕಾಶ ಒದಗಿಬಂದದು ಸೌಭಾಗ್ಯವೇ ಸರಿ, ಆಕೆ ತನ್ನ ಗಂಡನ ಹೆಸರನ್ನು ಪ್ರಚಾರಕ್ಕೆ ಎಲ್ಲೂ ಬಳಸಿಕೊಳ್ಳದೇ ತನ್ನ ಉತ್ತಮ ವ್ಯಕ್ತಿತ್ವ,

ಮಾತು, ತರ್ಕದ ಮೂಲಕ ಜನರ ಮನಗೆದ್ದು ಗಂಡನಿಗಿಂತಲೂ ಒಂದು ಕೈ ಮೇಲು ಎಂಬಂತೆ ಹೆಚ್ಚಿನ ಬಹುಮತ ಪಡೆದು ಶಾಸಕಿಯಾಗಿ ನಂತರ ಮಂತ್ರಿಯಾಗಿ ಆಯ್ಕೆಯಾದುದು ಆಕೆಯ ಪ್ರತಿಭೆ ಹಾಗೂ ಪರಿಶ್ರಮವನ್ನು ಸಂಕೇತಿಸುತ್ತದೆ.

ಆಕೆ ಕೊನೆಯಲ್ಲಿ ಹೇಳುವ "ಅವರು ಸತ್ತು ನನ್ನನ್ನು ಬೆಳೆಸಿದರು... ಅವರು ಬದುಕಿ ಇದ್ದಿದ್ದರೆ... ನಾನು ಇದೆಲ್ಲ ಸಾಧನೆ ಮಾಡುತ್ತಿರಲಿಲ್ಲ"[೮] ಎಂಬ ಮಾತು ಅಕ್ಷರ ಸಹಃ ನಿಜವಾಗಿದ್ದು ಗಂಡ ಬದುಕಿದ್ದರೆ ಆಕೆಯ ಪ್ರತಿಭೆ, ವ್ಯಕ್ತಿತ್ವ ಮನೆಯ ಒಳಗೆ ಮರೀಚಿಕೆಯಾಗಿ ಕಮರಿಹೋಗುತ್ತಿತ್ತು. ಗಂಡನ ಸಾವು ಆಕೆಗೊಂದು ವೇದಿಕೆ ಕಲ್ಪಿಸಿಕೊಟ್ಟಿತು. ಇಲ್ಲಿ ಹೆಣ್ಣಿಗೆ ಎಲ್ಲ ಕ್ಷೇತ್ರದಲ್ಲೂ ಉತ್ತಮ ಅವಕಾಶ ಕಲ್ಪಿಸಿಕೊಡಬೇಕಾದ ಅಗತ್ಯತೆಯನ್ನು ಕತೆಗಾರರು ಎತ್ತಿಹಿಡಿಯುತ್ತಾರೆ.

ಮಂತ್ರಿ

ಪ್ರಸ್ತುತ ಸಮಾಜದಲ್ಲಿ ರಾಜಕೀಯದ ಪ್ರಭಾವ ಹೆಚ್ಚಾಗಿದ್ದು ಆಳುವ ವರ್ಗ ಮತ್ತು ಪ್ರಜೆಗಳ ನಡುವೆ ಇರುವ ಸಂಬಂಧ, ಮನೋಧೋರಣೆಗಳನ್ನು ಕತೆಯು ಬಿತ್ತರಿಸುತ್ತದೆ. ಅಧಿಕಾರವಿದ್ದಾಗ ಮುತ್ತಿಕೊಳ್ಳುತ್ತಿದ್ದ ಜನರು ಅಧಿಕಾರ ಕಳೆದುಕೊಂಡಾಗ ನರಪಿಳ್ಳೆಯೂ ಆತನತ್ತ ಸುಳಿಯದಂತಾಗುವುದು ಇಂದಿನ ರಾಜಕೀಯ ಸ್ಥಿತಿ-ಗತಿಗಳನ್ನು ವ್ಯಂಗ್ಯವಾಗಿ ಚಿತ್ರಿಸಿದಂತಿದೆ.

ಅಧಿಕಾರವಿದ್ದಾಗ ತಮಗೆ ಆಗಬೇಕಾದ ಕೆಲಸ-ಕಾರ್ಯಗಳ ಅರ್ಜಿ ಹಿಡಿದು ಊಟ, ನಿದ್ದೆ, ವಿಶ್ರಾಂತಿ ಮರೆತು ಸಮಾಜದ ಎಲ್ಲ ಜಾತಿಯ, ಎಲ್ಲ ವರ್ಗದ ಜನರೂ ಮಂತ್ರಿಯ ಮೊರೆ ಹೋಗುವುದು. ಆತನ ಕೃಪಾಕಟಾಕ್ಷಕ್ಕೆ ಗುರಿಯಾಗಲು, ಆತನ ಕಣ್ಣಿಗೆ ಬೀಳಲು ಯತ್ನಿಸುವುದು, ಅತಿಯಾದ ಪೋನ್ ಕರೆಗಳ ಹಾವಳಿ, ಆತನಿಗೆ ಕೈಮುಗಿದು ಬೆನ್ನು ಬಾಗಿಸಿ ಭಿನ್ನವಿಸಿಕೊಳ್ಳುವುದು. ಒಟ್ಟಾರೆ ಮಂತ್ರಿಯನ್ನು ದೇವರಂತೆ ಕಾಣುವ ಜನಸಾಗರ ಆತ ಮಾಜಿ ಮಂತ್ರಿಯಾದ ಮೇಲೆ ಆತನತ್ತ, ಆತನ ಮನೆಯತ್ತ ಒಬ್ಬರೂ ಸುಳಿದಾಡದಿರುವುದು, ಫೋನಿನ ಮೇಲೆ ಎರಡಿಂಚು ಧೂಳು, ಸೋಫಾಗಳ ಮೇಲೂ ಧೂಳು. ಇದೆಲ್ಲಾ ರಾಜಕೀಯ ಕಣ್ಣು-ಮುಚ್ಚಾಲೆಗಳು, ದುರಾವಸ್ಥೆ ಹಾಗೂ 'ಗೆದ್ದ ಎತ್ತಿನ' ಬಾಲ ಹಿಡಿದು ಸಾಗುವ ಪ್ರಜೆಗಳ ಮನೋಧೋರಣೆಗಳನ್ನು ಬಿಂಬಿಸುತ್ತದೆ. ರಾಜಕೀಯ ಚದುರಂಗದ ಆಟದಲ್ಲಿ ಗೆಲ್ಲುವ ಕುದುರೆಗಳಿಗಷ್ಟೇ ಬೆಲೆ ಎಂಬ ಸಿದ್ಧಾಂತ ಸ್ಪಷ್ಟವಾಗುತ್ತದೆ.

ಮೂವರು ಮುದುಕರು ಒಂದು ಮುದಿ ಮನೆಯು

ನೈಜ ಘಟನೆಯನ್ನು ಆದರಿಸಿದ ಈ ಕತೆಯು ಕೆಲವು ವರ್ಷಗಳ ಹಿಂದೆ ನಡೆದ ಮುಂಬೈ ಕಟ್ಟಡಗಳ ಕುಸಿತ ದುರಂತದ ನಂತರ ಹಳೆ ಕಟ್ಟಡಗಳ ನೆಲಸಮ ಆದೇಶವನ್ನು ಸರ್ಕಾರ ಹೊರಡಿಸಿದಾಗ ಒಂದೆಡೆ ನೆಲೆ ಕಟ್ಟಿಕೊಂಡು ಬದುಕು ಸಾಗಿಸುತ್ತಿದ್ದ ಜನತೆ ಎದುರಿಸಿದ ಸಮಸ್ಯೆಗಳು ಅದರಲ್ಲೂ ವಿಶೇಷವಾಗಿ ಸದಾ ಬಜಾರಿನ ಹಾಗೆ ಗಿಜುಗುಡುತ್ತಿದ್ದ ಕೆಳವರ್ಗದವರೇ ಅಧಿಕವಾಗಿದ್ದ ಸುಮಾರು ನಾಲ್ಕುನೂರು ಕುಟುಂಬಗಳು ವಾಸವಾಗಿದ್ದ 'ಸೋಹನಲಾಲ ಚಾಳ್'ನ್ನು ನೆಲಸಮ ಮಾಡುವ ಆದೇಶ ಬಂದಾಗ ಅಲ್ಲಿನ ಬಡಜನತೆ ಅನುಭವಿಸಿದ ಯಾತನೆ, ಒಂದೆಡೆಯಾದರೆ ಆ ಚಾಳಿನ ಸನಿಹದಲ್ಲೇ ಇದ್ದ ಮುಂದುವರೆದ ಸಿಂಧಿ, ಕೊಂಕಣಿ ಸಮಾಜದ ಶ್ರೀಮಂತ ಫ್ಲ್ಯಾಟುಗಳಲ್ಲಿ ವಾಸಿಸುವ ಜನ ಸದಾ ಇವರನ್ನು ದ್ವೇಷಿಸಿ ಈ ಚಾಳಿನಲ್ಲಿರುವವರು ಖಾಲಿ ಮಾಡಿದರೆ ಸಾಕು ಎಂಬಂತೆ ವರ್ತಿಸುವ ರೀತಿಯನ್ನು ಪರಿಚಯಿಸುತ್ತದೆ. ಇದು ವರ್ಗ ಸಂಘರ್ಷವನ್ನು ಸಂಕೇತಿಸುತ್ತದೆ. ಅದರೊಂದಿಗೆ ಎಲ್ಲರಿಂದಲೂ ತಾತ್ಸಾರಕ್ಕೊಳಗಾಗಿ ಮನೆಗೆ ಭಾರ ಎಂಬಂತಿದ್ದ ಹಿರಿಯ ಜೀವಗಳು ಸ್ಪಂದಿಸಿದ ರೀತಿಯನ್ನು ಮನದಟ್ಟು ಮಾಡುತ್ತವೆ.

ಚಾಳ್‌ನಲ್ಲಿದ್ದ ಎಲ್ಲ ಕುಟುಂಬಗಳು ಬೇರೆಡೆ ನೆಲೆ ಕಂಡುಕೊಂಡು ಮನೆ ಖಾಲಿ ಮಾಡತೊಡಗಿದಾಗ ಕಳೆದ ೩೦-೪೦ ವರ್ಷಗಳ ಹಿಂದಿನಿಂದಲೂ ಅಕ್ಕಪಕ್ಕದ ಮನೆಯಲ್ಲಿ ಇದೇ ಚಾಳಿನಲ್ಲಿ ವಾಸಿಸುತ್ತಿದ್ದ ಹಿರಿಯ ಜೀವಗಳು ಸ್ನೇಹವನ್ನು ತೊರೆದು ದೂರವಾಗುವ ಸ್ಥಿತಿ ಬಂದಿರುವುದು ಮುಂದೆ ಪರಸ್ಪರ ಸಾಂತ್ವನ ಹೇಳಿಕೊಳ್ಳಲು ಯಾರೂ ಇಲ್ಲದಂತಾಗುತ್ತದೆಯಲ್ಲಾ? ಎಂದು ಕುಟುಂಬ ಸದಸ್ಯರಿಗೆ ಬೇಡವಾದ ಹಿರಿತಲೆಗಳು ಕೊರಗುವುದು ಕಣ್ಣೀರು ತರಿಸುತ್ತದೆ. ಇಂದಿನ ಸಮಾಜ ವಯಸ್ಸಾದ ತಂದೆ-ತಾಯಿಗಳನ್ನು ನಿಕೃಷ್ಟವಾಗಿ ಕಾಣುವ ರೀತಿಯನ್ನು ನೋಡಿದಾಗ ಮೌಲ್ಯಗಳ ಕೊರತೆ ಕಣ್ಮರೆಯಾಗುತ್ತಿರುವ ಕೌಟುಂಬಿಕ ಸಂಬಂಧಗಳನ್ನು ಸ್ಪಷ್ಟಪಡಿಸುತ್ತದೆ.

ಮಕ್ಕಳೊಂದಿಗೆ ಬದುಕಲಾರದೆ ಇದೇ ಚಾಳಿಗೆ ಹಿಂದಿರುಗಿದ ಭಯ್ಯಾ ಸೋನಾಲಿ, ಬಾಕ್ಸರ ಬಸ್ತಿಯಾಂ ಮುದುಕರ ಜೊತೆಗೆ ಚಾಳಿನ ಮಾಲೀಕ ಕುಟುಂಬದ ದೌರ್ಜನ್ಯ. ಸಹಿಸಿಕೊಳ್ಳಲಾರದೇ ತನ್ನ ಚಾಳಿಗೆ ಹಿಂದಿರುಗಿ ಒಟ್ಟಾರೆ ಮೂರು ಮುದುಕರು ಹಳೆಯದಾದ ಮುದಿ ಮನೆ (ಚಾಳ್)ಯಲ್ಲಿ ಇಳಿಜೀವನ ಮುಂದುವರೆಸುವುದು ಬದುಕಿನ ಅತಂತ್ರತೆ, ಭದ್ರತೆಯಿಲ್ಲದ ಜೀವನವನ್ನು

ಪ್ರತಿನಿಧಿಸುತ್ತದೆ. ಇಲ್ಲಿ ಕತೆಗಾರರು ಹಳೆ ಕಟ್ಟಡವನ್ನು ಹಳೆ ಜೀವಗಳಿಗೆ ಸಮೀಕರಿಸಿರುವುದು ಅವರ ಜಾಣ್ಮೆಯನ್ನು ಸೂಚಿಸುತ್ತದೆ.

ಜೋಡು ನಳಿಗೆ ಬಂದೂಕು

ಕತೆಗಾರರು ಮಲೆನಾಡಿನ ಗೌಡರ ಕ್ರೌರ್ಯ ಮುಖಗಳನ್ನು ಕಣ್ಣಾರೆ ಕಂಡವರಂತಿದ್ದು ಗೌಡರು ಗೇಣಿದಾರ ರೈತರನ್ನು ಶೋಷಿಸುವ ರೀತಿ, ಮೋಸ, ದಬ್ಬಾಳಿಕೆ ಅವರನ್ನು ನಿಯಂತ್ರಿಸಲು ಹೊಲೆಯರ ಬಳಕೆ ಹೊಲೆಯರ – ಜೀತಗಾರರ ನಿಕೃಷ್ಟ ಬದುಕಿನ ಚಿತ್ರಣವನ್ನು ಕತೆಯ ಮೂಲಕ ಬಿತ್ತರಿಸುತ್ತಾರೆ.

ಸ್ವಂತ ಭೂಮಿಯಿಲ್ಲದೇ ಗೌಡರ ಜಮೀನಿನಲ್ಲಿ ತಲೆತಲಾಂತರಗಳಿಂದ ಬೆಳೆ ತೆಗೆಯುತ್ತಾ ಅವರು ಕೊಟ್ಟಷ್ಟು ಮನೆಗೊಯ್ದು ಬದುಕು ನಡೆಸುವ ಗೇಣಿ ರೈತರು ಒಂದರ್ಥದಲ್ಲಿ ಜೀತಗಾರರೇ ಆಗಿ ಸ್ವತಂತ್ರವಿಲ್ಲದ ಜೀವನ ನಡೆಸುವುದು. ಇನ್ನೊಂದೆಡೆ ಗೌಡರ ಮನೆಯ ಸತ್ತ ಪ್ರಾಣಿಗಳನ್ನು ಸಾಗಿಸುವ, ಕಕ್ಕಸಿನ ಹೊಂಡ ಶುಚಿ ಮಾಡುವ ಒಟ್ಟಾರೆ ಗೌಡರು ಕಾಲಲ್ಲಿ ತೋರಿಸಿದ್ದನ್ನು ಕೈಯಲ್ಲಿ ಮಾಡುವ ಹೊಲೆಯರ ಹೊಲಸು ಜೀವನದ ಶೋಚನೀಯ ಬದುಕಿನ ಚಿತ್ರಣವನ್ನು ಕತೆಗಾರರು ನೀಡುತ್ತಾರೆ.

ಗೌಡರು ಗೇಣಿರೈತರಿಗೆ ಹೇಳುವ "ಈ ಸಾರಿ ಹಿಂದಿನ ಹಾಗಲ್ಲ......... ಎಕರೆಗೆ ಇಪ್ಪತ್ತು ಚೀಲ ಭತ್ತ, ಅರ್ಧ ಹುಲ್ಲು ಗೌಡರ ಮನೆಗೆ ಹೊಡಿಬೇಕು" ಎಂಬ ಮಾತು ಗೇಣಿ ರೈತರ ಶೋಷಣೆಯ ಪರಮಾವಧಿಯೇ ಸರಿ. ಇದಕ್ಕೆ ಒಪ್ಪದ ರೈತನೊಬ್ಬನನ್ನು ನಿಗ್ರಹಿಸಲು ಮುಗ್ಧ ಹೊಲೆಯನನ್ನು ಬಳಸಿಕೊಳ್ಳುವ ಗೌಡರು ಅವನಿಂದಲೇ ಗೇಣಿರೈತನ ಹತ್ಯೆ ಮಾಡಿಸುವುದು ಮಾನವೀಯತೆಯೇ ಇಲ್ಲದ ಗೌಡರ ಕಲ್ಲು ಹೃದಯವನ್ನು ಸಂಕೇತಿಸುತ್ತದೆ.

ಒಂದೆಡೆ ದುಡಿಮೆಗೆ ಬೇರೆ ಮಾರ್ಗವಿಲ್ಲದ ಗೇಣಿ ರೈತರ ದುಸ್ತರ ಬದುಕು ಇನ್ನೊಂದೆಡೆ ಗೌಡರ ಮೇಲಿನ ಭಯಭಕ್ತಿಯಿಂದ ಅವರು ಹೇಳಿದಂತೆ ನಡೆಯುವ ಹೊಲೆಯರ ದುರಂತ ಜೀವನ ಎರಡನ್ನೂ ಈ ಕತೆಯ ಮೂಲಕ ಅಭಿವ್ಯಕ್ತಪಡಿಸಲಾಗಿದೆ.

ಹಾಲ್ಟಿಂಗ್ ಬಸ್ಸು

ಮಲೆನಾಡಿನ ಸಂಪರ್ಕರಹಿತ ಹಳ್ಳಿಗಳ ರಾತ್ರಿ ವೇಳೆಯ ದುಸ್ತರವಾದ ಜೀವನ, ಜಿಲ್ಲಾ ಕೇಂದ್ರದಿಂದ ನೇರವಾಗಿ ಬಸವನಕಟ್ಟೆ ಹಳ್ಳಿಗೆ ಹಾಲ್ಟಿಂಗ್ ಬಸ್ಸು ಬಿಟ್ಟ ನಂತರ ಆಧುನೀಕತೆಯ ಗಂಧ–ಗಾಳಿ ಬೀಸಿರದ ಸುತ್ತಲಿನ ಹಳ್ಳಿಗಳು ಹೊಸತನ ಕಂಡಂತೆ

ಬದಲಾದ ಜೀವನಶೈಲಿ. ಕುಟುಂಬ ಸಂಬಂಧಗಳು, ಹಳ್ಳಿಗರ ಸಮಸ್ಯೆಗಳತ್ತ ಬೆಳಕು ಚೆಲ್ಲುತ್ತದೆ.

ಕತ್ತಲಾಗುತ್ತಿದ್ದಂತೆ ಮಲಗುತ್ತಿದ್ದ ಮಲೆನಾಡಿನ ಜನತೆ ತಡವಾಗಿ ಬರುತ್ತಿದ್ದ ಹಾಲ್ಟಿಂಗ್ ಬಸ್‌ನಿಂದಾಗಿ ರಾತ್ರಿ ಬಹುಹೊತ್ತಿನ ತನಕ ಎಚ್ಚರದಿಂದಿರುತ್ತಿದ್ದ ಹಳ್ಳಿಗಳು, ಅದರೊಟ್ಟಿಗೆ ವ್ಯಾಪಾರ, ವ್ಯವಹಾರದಲ್ಲಿ ಮುನ್ನಡೆ, ಅತ್ಯಾಧುನಿಕ ವಸ್ತುಗಳ ಆಗಮನ ಕಣ್ಣಿಗೆ ಕಾಣದಂತೆ ನಡೆಯುತ್ತಿದ್ದ ಅನೈತಿಕ ಸಂಬಂಧಗಳು ಸಹಜ ಮಾತುಗಾರಿಕೆ, ಉತ್ತಮ ನಿರೂಪಣಾ ಶೈಲಿಯೊಂದಿಗೆ ಮೂಡಿಬಂದಿದೆ.

ಮಾರಕಾಸ್ತ್ರ

ಈ ಕತೆಯು ಅಮೇರಿಕಾದ ಯುವ ಜನಾಂಗದ ಅಸಭ್ಯ, ಸ್ವೇಚ್ಛ ಜೀವನ ಶೈಲಿಯ ಅರಿವು ಮೂಡಿಸುವುದರೊಟ್ಟಿಗೆ ಪ್ರೀತಿ, ಸ್ನೇಹ ಶಾಂತಿಯ ಆವಾಸಸ್ಥಾನವಾದ ಅಲ್ಲಿನ ಚರ್ಚೊಂದರಲ್ಲಿ ಪ್ರೀತಿ–ಪ್ರೇಮದ ಕಾರಣ ಗುಂಡುಹಾರಿಸಿ ಕೊಲೆಮಾಡಿದ ಘಟನೆಯೊಂದರ ಸುತ್ತ ಹೆಣೆದಂತಿದೆ.

ಲಿಲ್ಲಿ ಕ್ಯಾಂಡಿಡ್‌ನನ್ನು ಪ್ರೀತಿಸುತ್ತಿದ್ದಳು. ಕೊಲೆಗಾರ ಜೂಲಿಯಸ್ ಕೂಡ ಅವಳನ್ನು ಪ್ರೀತಿಸುತ್ತಿದ್ದ. ಲಿಲ್ಲಿ ಈ ಈರ್ವರು ತರುಣರ ಜೊತೆಗೂ ಸಂಪರ್ಕವಿರಿಸಿಕೊಂಡಿದ್ದಳು. ಜೂಲಿಯಸ್ ಕ್ಯಾಂಡಿಡ್‌ನನ್ನು ಚರ್ಚ್‌ನ ಪ್ರಾರ್ಥನಾ ವೇಳೆಯಲ್ಲಿ ಸಂಚು ಮಾಡಿ ಕೊಲೆ ಮಾಡಲು ಈ ಪ್ರೀತಿಯೇ ಕಾರಣವಾಗಿರುತ್ತದೆ. ಶಾಂತಿ, ಪ್ರೀತಿ, ಮಮತೆ, ಸೇವೆ, ಕ್ಷಮೆ ಮೊದಲಾದ ಉದಾತ್ತ ಗುಣಗಳನ್ನು ಜನರ ಮನಸ್ಸಿನಲ್ಲಿ ಭಿತ್ತಿ ಅದಕ್ಕಾಗಿ ಶಿಲುಬೆಯನ್ನೇರಿ ತನ್ನನ್ನು ತಾನೇ ಅರ್ಪಿಸಿಕೊಂಡ ಕ್ರಿಸ್ತನನ್ನು ನಂಬುವ ಜನ ಹಸಿಯಾಗಿ ತಮ್ಮ ಸಹಜೀವಿಯನ್ನು ದೇವಾಲಯದ ಒಳಗೇ ಕೊಲ್ಲುವ ಮಟ್ಟಕ್ಕೆ ತಲುಪಿದ್ದು ಇಂದಿನ ಆಧುನೀಕರಣದ ಸೋಗಿನಲ್ಲಿ ಧರ್ಮ, ಸಂಸ್ಕೃತಿ, ನಂಬಿಕೆಗಳು ಎತ್ತಸಾಗಿವೆ? ಎಂಬ ಅಂಶ ಧ್ವನಿಸುತ್ತದೆ.

ಕೊಲೆ ಘಟನೆ ನಡೆದ ನಂತರ "ಪ್ರೀತಿ ಸ್ನೇಹ ಶಾಂತಿಯ ಅವಾಸಸ್ಥಾನವಾದ ದೇವಾಲಯದೊಳಗೆ ಹೋಗುವ ಮುನ್ನ ನಿಮ್ಮಲ್ಲಿ ಇರುವ ಎಲ್ಲ ಮಾರಕ ಆಯುಧಗಳನ್ನು ಇಲ್ಲಿ ಇರಿಸಿ ಒಳಹೋಗಿ ದೇವರು ನಿಮ್ಮೊಡನೆ ಇರಲಿ"....[೧೦] ಎಂಬ ವಾಕ್ಯಗಳನ್ನು ಒಳಗೊಂಡ ಬೋರ್ಡನ್ನು ಚರ್ಚಿನ ದ್ವಾರದಲ್ಲಿ ಹಾಕಿಸಿದ್ದು ನಗು ಬರಿಸುವಂತಿದ್ದು ಮಾರಕ ಅಸ್ತ್ರಗಳಿಲ್ಲದೆ ಮನುಷ್ಯ ಕೊಲೆ ಮಾಡಲು ಸಾಧ್ಯವಿಲ್ಲವೇ? ಎಂಬ ಜಿಜ್ಞಾಸು ಉಂಟಾಗುತ್ತದೆ.

ಇಂತಹ ಕೆಟ್ಟ ಕಾರ್ಯಗಳಿಗೆ ಕ್ರಿಸ್ತುವರಲ್ಲಿರುವ 'ಪಾಪನಿವೇದನೆ' ಒಂದು ಮುಖ್ಯ ಕಾರಣವಾಗಿದ್ದು ಇದರ ಮೂಲಕ ತಾವು ಮಾಡಿದ ಎಂತಹ ಕ್ರೂರ ಹೀನ ಕೆಲಸಗಳಿಗೂ ಪ್ರಾಯಶ್ಚಿತದ ಮೂಲಕ ಪರಿಹಾರ ಕಂಡುಕೊಳ್ಳಬಹುದೆಂಬ ನಂಬಿಕೆ ಪ್ರೇರಣೆಯಾಗಬಲ್ಲದೆಂಬುದು ನನ್ನ ಅಭಿಪ್ರಾಯವಾಗಿದ್ದು ಇದಕ್ಕೆ ನಿದರ್ಶನವಾಗಿ ಶನಿವಾರ ಬಂತೆಂದರೆ ಪಾಪ ನಿವೇದನೆಗಾಗಿ ಚರ್ಚಿನಲ್ಲಿ ಅಧಿಕ ಸಂಖ್ಯೆಯಲ್ಲಿ ಜನರು ನೆರೆಯುತ್ತಿದ್ದರೆಂದು ಕತೆಗಾರರು ಹೇಳುವ ಮಾತನ್ನು ಉಲ್ಲೇಖಿಸಬಹುದು.

ರೋಬಾಟ್ ಮದರ್

ಇಂದು ಯಂತ್ರನಾಗರೀಕತೆ ತುಂಬಾ ಮುಂದುವರೆದಿದ್ದು ಮನೆಯ ಪ್ರತಿಯೊಂದು ಕೆಲಸಕಾರ್ಯಗಳ ನಿರ್ವಹಣೆಗೆ ಯಂತ್ರಗಳ ಮೇಲಿನ ಅತಿಯಾದ ಅವಲಂಬನೆಯನ್ನು ಕಾಣಬಹುದಾಗಿದ್ದು, ಆಧುನಿಕ ಸಮಾಜದಲ್ಲಿ ಉತ್ತಮ ಜೀವನ ನಿರ್ವಹಣೆಗೆ ಪತಿ–ಪತ್ನಿಯರಿಬ್ಬರೂ ದುಡಿಯಬೇಕಾದ ಅನಿವಾರ್ಯತೆ ಎದುರಾಗಿದೆ. ಈ ಕತೆಯಲ್ಲಿ ಕೆಲಸಕ್ಕಾಗಿ ನಿತ್ಯ ಹೊರಹೋಗುವ ಜಪಾನ್‌ದೇಶದ ಇಬ್ಬರು ದಂಪತಿಗಳು ತಮ್ಮ ಮಗುವನ್ನು ನೋಡಿಕೊಳ್ಳಲು ಮಾತೃಯಂತ್ರದ ಅವಲಂಬನೆ ಮಾಡುತ್ತಾರೆ. ಮಗುವಿನ ಎಲ್ಲ ಬೇಡಿಕೆಗಳು, ನಿತ್ಯದ ಅವಶ್ಯಕತೆಗಳನ್ನು ಗಮನದಲ್ಲಿರಿಸಿಕೊಂಡು ಪತಿಯೇ ಈ ಯಂತ್ರವನ್ನು ವಿಶೇಷ ಕಾಳಜಿವಹಿಸಿ ನಿರ್ಮಿಸಿರುವುದು ವಿಶೇಷ. ಓರ್ವ ತಾಯಿ ಮಾಡಬಹುದಾದ ಸೇವೆಗಿಂತಲೂ ಹೆಚ್ಚಿನ ಸೇವೆಯನ್ನು ಕಂಪ್ಯೂಟರ್ ನಿರ್ದೇಶನದ ನೆರವಿನಿಂದ ಈ ಯಂತ್ರವು ಮಾಡುತ್ತಿರುತ್ತದೆ.

ಒಮ್ಮೆ ಇಬ್ಬರೂ ಕೆಲಸದ ಮೇಲಿರುವಾಗ ಟಿ.ವಿ. ರೇಡಿಯೋ ಪತ್ರಿಕೆಗಳಲ್ಲಿ ಬಂದ ಮಕ್ಕಳ ಅಪಹರಣ ಸುದ್ಧಿಯಿಂದ ವಿಚಲಿತರಾದ ದಂಪತಿಗಳು, ಆಗ ಪತಿಯು ಕಂಪ್ಯೂಟರ್ ನೆರವಿನಿಂದ ತಾನಿರುವ ಕಛೇರಿಯಿಂದಲೇ ಮಗುವಿನ ರಕ್ಷಣೆ ಹೇಗೆ ಮಾಡಬೇಕೆಂದು ಸಲಹೆ ನೀಡಿ ಮಗುವನ್ನು ಒಯ್ಯಲು ಯತ್ನಿಸುವವರನ್ನು ಕುತ್ತಿಗೆ ಬಿಗಿಹಿಡಿದು ಅರೆಜೀವಿಯನ್ನಾಗಿ ಮಾಡುವಂತೆ ಮಾತೃಯಂತ್ರಕ್ಕೆ ನಿರ್ದೇಶನ ರವಾನಿಸಿದ. ಮನೆಗೆ ಮುಂಚಿತವಾಗಿ ಹೋದ ಪತ್ನಿ ಎಂದಿನಂತೆ ಸಹಜವಾಗಿ ಮಗುವನ್ನು ಎತ್ತಿಕೊಳ್ಳಲು ಹೋದಾಗ ಯಂತ್ರದೊಂದಿಗೆ ಸೆಣಸಾಡಿ ಅಮಾನುಷವಾಗಿ ಸಾವನ್ನಪ್ಪುವುದರೊಂದಿಗೆ ಕತೆಗೆ ತೆರೆ ಬೀಳುತ್ತದೆ. ಮಗುವಿನ ಹೆತ್ತತಾಯಿ, ಯಂತ್ರತಾಯಿಯಿಂದ ಸಾವನ್ನಪ್ಪುವುದು ಆಕೆಯ ದುರ್ದೈವ.

ಮಾನವ ತನ್ನ ಬುದ್ಧಿಶಕ್ತಿಯಿಂದ ಊಹಿಸಲೂ ಅಸಾಧ್ಯವಾದ ತನ್ನೆಲ್ಲಾ ಅಗತ್ಯತೆಗಳನ್ನು ಪೂರೈಸಬಲ್ಲ ಯಂತ್ರಗಳನ್ನು ಅವಿಷ್ಕರಿಸುತ್ತಾ ಅವುಗಳ ಮೇಲೆ

ಪೂರ್ಣ ಅವಲಂಬನೆ ಹೊಂದುತ್ತಿದ್ದು ಈ ಯಂತ್ರಗಳು ಕೆಲವೊಮ್ಮೆ ಅಪಾಯ ತಂದೊಡ್ಡಿ ಭಾರೀ ಅನಾಹುತಗಳಿಗೆ ಕಾರಣವಾಗಬಲ್ಲವೆಂಬ ಕಟುಸತ್ಯವನ್ನು ಈ ಕತೆ ಬಿಂಬಿಸುತ್ತದೆ. 'ರೋಬಾಟ್ ಮದರ್' ತಾಯಿ ಮಾಡುವ ಎಲ್ಲ ಕೆಲಸಗಳನ್ನು ಮಾಡಿದರೂ ಅದು ಯಾಂತ್ರಿಕವಾಗಿ ನೀಡುವ ಸಂದೇಶಗಳಿಂದಲೇ ಹೊರತು ಯಾವುದೇ ಭಾವನಾತ್ಮಕ ಸಂಬಂಧ ತೋರಲಾರದು. ಮಾತೃ ಹೃದಯ ಇರಲಾರದು ಎಂಬ ವಾಸ್ತವಾಂಶವನ್ನು ಜನರು ಅರ್ಥಮಾಡಿಕೊಳ್ಳಬೇಕು.

ಗಡಿಯಾರ ಮಾರುವ ಅಜ್ಜಿ

ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಜೀವನ ನಿರ್ವಹಣೆಗೆ ಒಂದಲ್ಲಾ ಒಂದು ಕೆಲಸ ಅವಲಂಬಿಸಿದ್ದು ಮಾಡುವ ಕೆಲಸ ಯಾವುದಾದರೇನು? ಶ್ರದ್ಧೆ ಮತ್ತು ಆಸಕ್ತಿಯಿಂದ ಮಾಡಿದರೆ ಯಶಸ್ಸು ಖಚಿತ ಎಂಬ ಉಕ್ತಿಯಂತೆ ಈ ಕತೆಯಲ್ಲಿ ಬರುವ ಪ್ರಧಾನಪಾತ್ರ ಅಜ್ಜಿ ತನ್ನ ಇಳಿವಯಸ್ಸಿನಲ್ಲೂ ಕಷ್ಟಪಟ್ಟು ಹೊಟ್ಟೆ ತುಂಬಿಸಿಕೊಳ್ಳಲು ಬೇರೆ ಬೇರೆ ವೃತ್ತಿಗಳನ್ನು ಪ್ರಾಮಾಣಿಕವಾಗಿ ಮಾಡುತ್ತಾ ಗೌರವಯುತ ಬದುಕು ಸಾಗಿಸುವುದು ಭ್ರಷ್ಟಾಚಾರ, ಸ್ವಾರ್ಥ, ಮೋಸ, ವಂಚನೆ ತುಂಬಿರುವ ಸಮಾಜಕ್ಕೆ ಆದರ್ಶಪ್ರಾಯಳಾಗಿ ನಿಲ್ಲುತ್ತಾಳೆ.

ಮೊದಲಿಗೆ ತರಕಾರಿ ವ್ಯಾಪಾರ, ನಂತರ ಹೂವಿನ ವ್ಯಾಪಾರ, ಸಿಲವಾರ ಪಾತ್ರೆ ವ್ಯಾಪಾರ, ಕೊನೆಗೆ ಗಡಿಯಾರದ ವ್ಯಾಪಾರ ಹೀಗೆ ಹಲವು ವೃತ್ತಿಗಳನ್ನು ಮಾಡಿ ಸಾಕಷ್ಟು ಅನುಭವ ಗಳಿಸಿದ್ದ ಅಜ್ಜಿ ನ್ಯಾಯಯುತವಾಗಿ ವ್ಯಾಪಾರ ಮಾಡುವುದು. ಯಾರ ಹಂಗೂ ಇಲ್ಲದೆ ಸ್ವತಂತ್ರವಾಗಿ ದುಡಿದು ತಿನ್ನುವ ಮನೋವೃತ್ತಿ ಮೋಸ, ವಂಚನೆಯಿಂದ ಹಣ ಗಳಿಸುವ ಶ್ರೀಮಂತರು, ಸ್ವಾರ್ಥವೇ ಮೈಗೂಡಿರುವ ಭ್ರಷ್ಟ ರಾಜಕಾರಣಿಗಳು ಹಾಗೂ ಅನಾಯಾಸವಾಗಿ ಸರ್ಕಾರಿ ಹಣವನ್ನು ನುಂಗುತ್ತಿರುವ ಅಧಿಕಾರಿಗಳು, ನೌಕರರಿಗೆ ಮಾದರಿಯಾಗಿ ಗೋಚರಿಸುತ್ತಾಳೆ.

"ಈ ಗಡಿಯಾರದಾಗೆ ಸಣ್ಣ ಮುಳ್ಳು ಐತಲ್ಲ ಅದಕ್ಕೆ ದಾರಿ ತೋರಿಸೋದೇ ದೊಡ್ಡ ಮುಳ್ಳು ಅಲ್ವಾ? ನಾನೂ ಅಂಗೇಯ ಅಲ್ಲಿ ಅವನಲ್ಲ, ಮೇಲೆ, ಅವನು ತೋರಿಸಿದ ದಾರಿ ಹಿಡಿದೇ ಓಗತೀನಿ... ಅಂಗೇನೆ ಅಲರಾಮ ಗಂಟೆ ಕೇಳ್ತು ಅಂದ್ರೆ ಎದ್ದು ಹೊರಟು ಬುಡತೀನಿ"[೧೧] ಎಂದು ಹೇಳುವ ಅಜ್ಜಿ ಕಿರಿಯರಿಗೆ ಮಾರ್ಗದರ್ಶನ ನೀಡುವ ತತ್ವಜ್ಞಾನಿಯಂತೆ ಓದುಗರ ಕಣ್ಮುಂದೆ ನಿಲ್ಲುತ್ತಾಳೆ.

ಮುಂಬಯಿಯೆಂಬ ಬ್ಯಾಲೆ

ಬಡತನದ ಬೇಗುದಿ ತಾಳಲಾರದೆ ಹೊಟ್ಟೆಪಾಡಿಗಾಗಿ ಮುಂಬೈಯಂತಹ ಮಹಾಸಾಗರದಲ್ಲಿ ವೇಶ್ಯಾವಾಟಿಕೆಯ ಸುಳಿಯಲ್ಲಿ ಸಿಲುಕಿ ಅದರಿಂದ ಹೊರಬರಲಾರದೆ ನರಳುತ್ತಿರುವ ಹೆಣ್ಣು ಮಕ್ಕಳ ನತದೃಷ್ಟ ಜೀವನವೇ ಈ ಕತೆಯ ವಸ್ತು.

ಮುರುಡೇಶ್ವರ ಕಡಲಿನಲ್ಲಿ ನೀಲಿಕಲ್ಲು ಆಯುವ ಕೆಲಸ ಮಾಡುತ್ತಾ ಪರಸ್ಪರ ಪ್ರೀತಿಸಿದ ಕಾಣ್ತಿ–ಚಂದ್ರಿ ಇನ್ನೇನು ಮದುವೆಯಾಗಬೇಕೆನ್ನುವಷ್ಟರಲ್ಲಿ ಚಂದ್ರಿ ಅಕ್ಕನ ಜೊತೆಗೆ ಮುಂಬೈಗೆ ಹೋಗಬೇಕಾದ ಅನಿವಾರ್ಯತೆ ಎದುರಾಗುತ್ತದೆ. ಕಾಣ್ತಿ ಸಹ ಕ್ರಮೇಣ ಕೆಲಸ ಹುಡುಕಿಕೊಂಡು ಮುಂಬೈಯತ್ತ ಪಯಣಿಸುತ್ತಾನೆ. ೪ ವರ್ಷಗಳ ನಂತರ ಇಬ್ಬರೂ ಮರಳಿ ಊರಿಗೆ ಬಂದಾಗ ಪರಸ್ಪರ ಮಾತುಗಾರಿಕೆಯಲ್ಲಿ ತೊಡಗಿದಾಗ ಚಂದ್ರಿಯನ್ನು ವಿವಾಹವಾಗುವ ಪ್ರಸ್ತಾಪವನ್ನು ಕಾಣ್ತಿ ಮಾಡುತ್ತಾನೆ. ಆಗ ಚಂದ್ರಿ ಹೇಳುವ "ನೀಲಿ ಕಲ್ಲು ಆಯುವಾಗ ನೀನು ನನ್ನ ಬ್ಯಾಲಿಯಿಂದ ಕಾಪಾಡಿದ್ದು ನೆನಪುಂಟಲ್ಲ... ಈಗ ನಾನು ಮುಂಬೈ ಅನ್ನುವ ಬ್ಯಾಲಿಯೊಳಗೆ ತೇಲಿ ಹೋಗೀನಿ... ನನ್ನ ಮತ್ತೆ ಕಾಪಾಡೂಕೆ ಬರಬೇಡ... ಮುಂಬೈ ಶಹರದಾಗೆ ನನ್ನ ಹುಡುಕಲಿಕ್ಕೆ ಬರಬೇಡ... ನಾನೀಗ ನೀಲಿ ಕಲ್ಲು ಆಯೋ ಹುಡುಗಿ ಅಲ್ಲ... ನಾನೀಗ ಆಯೋದು ಬೇರೇನೆ... ಇಲ್ಲಿ ನನ್ನ ತಮ್ಮಂದಿರ ಓದು ಮುಗೀಬೇಕು ಅನ್ನೂದಾದರೆ ನಾನು ನನ್ನ ಅಕ್ಕ ಮುಂಬಯಿಯಲ್ಲಿ ಈ ಕೆಲಸ ಮಾಡಬೇಕು... ಅದು ನಿನಗೆ ಸಂತೋಷ ಕೊಡೋ ಕೆಲಸ ಅಲ್ಲ.... ನಾನು ಹೇಳಿದ್ದು ತಿಳೀತಲ್ಲ"[೧೨] ಎಂಬ ಮಾತುಗಳು ಮುಂಬೈ ವೇಶ್ಯಾವಾಟಿಕೆಯ ನರಕ ಕೂಪದಲ್ಲಿ ಅಕ್ಕನೊಂದಿಗೆ ಆಕೆ ಬಿದ್ದಿರುವ ಅಂಶವನ್ನು ಧ್ವನಿಸುತ್ತದೆ.

ಇಲ್ಲಿ ಕತೆಗಾರರು ಮುರುಡೇಶ್ವರದ ಕಡಲ ನೋಡಲು ಹಿತಕರವೆನಿಸಿದರೂ ಅದರ ಅಲೆಗಳ ನರ್ತನ ರೌದ್ರತೆ ಅಷ್ಟೇ ಭಯಂಕರ ಎಂಬಂತೆ ಪ್ರಶಾಂತವಾಗಿ ಕಾಣುವ ಮುಂಬೈ ನಗರ ವೇಶ್ಯಾವಾಟಿಕೆಯಂತಹ ಹಲವು ದಂದೆಗಳಿಗೆ ಮುಕ್ತವಾಗಿ ತೆರೆದುಕೊಂಡು ಬಡ ಹೆಣ್ಣುಮಕ್ಕಳನ್ನು ತನ್ನತ್ತ ಸೆಳೆದುಕೊಳ್ಳುತ್ತಿರುವ ಬಗ್ಗೆ ಗಮನ ಕೇಂದ್ರೀಕರಿಸಿರುವುದು ಕಂಡುಬರುತ್ತದೆ.

ರಹೀಮನ ಅಕ್ಷರಮಾಲಾ ಪ್ರಕರಣ

ಒಬ್ಬ ಅನಕ್ಷರಸ್ಥ ಮುಸ್ಲಿಂ ವ್ಯಕ್ತಿಯು ತನ್ನ ಧರ್ಮದ ಮೇಲಿರಿಸಿಕೊಂಡಿದ್ದ ಅತಿಯಾದ ಧರ್ಮಾಭಿಮಾನ ಹಾಗೂ ಅಕ್ಷರಸ್ಥ ಕ್ರೈಸ್ತನೊಬ್ಬ ತನ್ನ ಸಂಸ್ಕೃತಿ, ಜಾತಿ

ಧರ್ಮ ಸಂಪ್ರದಾಯಗಳ ಮೇಲಿನ ಅತಿಯಾದ ವ್ಯಾಮೋಹ ಅದರಿಂದಾದ ಕೆಡುಕುಗಳ ಮೇಲೆ ಬೆಳಕು ಬೀರುವುದೇ ಈ ಕತೆಯ ವಸ್ತು.

ರಹೀಮ ಡ್ರೈವರ್‌ಗೆ ಹೇಳುವ "ಮೊಳೆ ಹೊಡ್ದು ಗೋಡೆಗೆ ಹಾಕ್ತಾರಲ್ಲ ಸಾರ್ ಅಕ್ಷರ ಅದನ್ನ ತನ್ನಿ" ಎಂಬ ಮಾತು ಆತ ಎಷ್ಟೊಂದು ಮುಗ್ಧ. ಅವಿದ್ಯಾವಂತ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಆತ ಧರ್ಮಾಭಿಮಾನಿಯಾಗಿದ್ದು ತನ್ನ ಧರ್ಮದ ದೇವರು, ಸಂಪ್ರದಾಯ ಆಚಾರವಿಚಾರಗಳ ಬಗ್ಗೆ ಹೆಚ್ಚು ನಂಬಿಕೆ ಉಳ್ಳವನಾಗಿದ್ದು ತನಗೆ ತಂದುಕೊಟ್ಟಿದ್ದ ಅಕ್ಷರಮಾಲೆಯ 'ವ' ಅಕ್ಷರದ ಮುಂದಿದ್ದ ವರಾಹದ ಚಿತ್ರ ತನ್ನ ಧರ್ಮಕ್ಕೆ ವಿರೋಧವಾಗಿದ್ದು ಅದನ್ನು ತನ್ನ ಮನೆಯಲ್ಲಿ ಹಾಕುವಂತಿಲ್ಲ ಎಂಬ ಮಾತು ಅಂದಾನುಕರಣೆ ಮೂಢನಂಬಿಕೆಯ ದ್ಯೋತಕವಾಗಿದೆ. ಕೊನೆಗೆ ಆತ ತುಂಡುಕಾಗದವನ್ನು ವರಾಹದ ಮೇಲೆ ಅಂಟಿಸಿ ನಂತರ ವಜ್ರದ ಚಿತ್ರವನ್ನು ಅಂಟಿಸುವುದು ನಗು ತರಿಸುತ್ತದೆ. ಒಬ್ಬ ಅನಕ್ಷರಸ್ಥ ತನ್ನ ಧರ್ಮವನ್ನು ನೋಡುವ ರೀತಿ ಈ ರೀತಿಯಾದರೆ ಅಕ್ಷರಸ್ಥ ಕ್ರೈಸ್ತನೊಬ್ಬ ತನ್ನ ಮಗ ಪ್ರೇಮಿಸಿ ಮನೆಗೆ ಕರೆತಂದ ಹುಡುಗಿ ಕೀಳು ಪಂಗಡದವಳೆಂಬ ಕಾರಣಕ್ಕೆ ಅವರ ವಿವಾಹಕ್ಕೆ ಅಡ್ಡಿಪಡಿಸಿ ನಾವು ಬಾಮಣ್ ಪಂಗಡದವರು. ಮಂಗಳೂರಿನವರು, ಈ ಹೊನ್ನಾವರ, ಕುಂದಾಪುರ ಕಡೆ ಜಾರೋಡಿ, ನೇಂದರ್, ಕೂಳಿ ಅಂತೆಲ್ಲಾ ಕೀಳು ಕುಲದವರಿದ್ದಾರೆ. ನಾವು ಹೆಣ್ಣು ತರೋದಾದ್ರೆ ಬಾಮಣ್ ಮನೆತನದಿಂದಲೇ, ನಮ್ಮ ರಕ್ತ ನಮ್ಮ ಸಂಸ್ಕಾರ, ನಮ್ಮ ಮನೆತನದ ಗೌರವ, ಮಾನ ಕಾಪಾಡಬೇಕಾದ್ದು ನನ್ನ ಕರ್ತವ್ಯ ಎಂದು ಸಂಭಾವಿತನಂತೆ ಮಾತನಾಡುವ ತಂದೆ "ನಾನು ಯಾವುದನ್ನೂ ಸಹಿಸಿಕೊಳ್ಳಬಲ್ಲೆ... ಆದರೆ ನಮ್ಮ ಧರ್ಮ ಪದ್ಧತಿ ರೀತಿ ರಿವಾಜಿಗೆ ಅನ್ಯಾಯ ದ್ರೋಹ ಆದರೆ ನಾನು ಸಹಿಸಲಾರೆ" ಎಂಬ ಮಾತುಗಳು ಧರ್ಮದ ಕಟ್ಟಾಭಿಮಾನವನ್ನು ಪ್ರತಿನಿಧಿಸುತ್ತದೆ.

ಇಂದಿನ ಆಧುನಿಕ ಸಮಾಜದಲ್ಲಿ ಯುವ ಜನಾಂಗ ತಮ್ಮ ಧರ್ಮ, ಸಂಪ್ರದಾಯ ಸಂಸ್ಕೃತಿ ಮರೆತು ಅಂತರ್‌ಜಾತಿ ವಿವಾಹದೆಡೆ ಆಕರ್ಷಿತರಾಗುತ್ತಿರುವುದು ಒಂದೆಡೆಯಾದರೆ ಸಮಾಜ, ಕುಟುಂಬಗಳು ವ್ಯತಿರಿಕ್ತವಾಗಿ ಪ್ರತಿಕ್ರಯಿಸುತ್ತಿರುವುದು ಕಂಡುಬರುತ್ತದೆ. ಶಿಕ್ಷಣ, ಆಧುನಿಕತೆಯಿಂದ ಸಮಾಜ ಎಷ್ಟೇ ಮುಂದುವರೆದಿದ್ದರೂ ಜಾತಿಧರ್ಮಗಳ ಮೇಲಿನ ವ್ಯಾಮೋಹ ಕಡಿಮೆಯಾಗುತ್ತಿಲ್ಲ. ಈ ನಿಟ್ಟಿನಲ್ಲಿ ನಾವೆಲ್ಲರೂ ಒಂದೇ, ನಮ್ಮದು ಮಾನವ ಕುಲ ಇರುವುದು ಎರಡೇ ಜಾತಿಗಳು ಒಂದು ಗಂಡು ಮತ್ತೊಂದು ಹೆಣ್ಣು ಎಂಬ ಕಟುಸತ್ಯವನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು.

ನೀಚಗೋಡಿನ ಕ್ಷುದ್ರರು

ಎರಡು ಭಿನ್ನ ಸಂಸ್ಕೃತಿಗಳ (ಉಚ್ಛ-ನೀಚ) ನಡುವಿನ ವೈರುಧ್ಯಗಳು ಮೇಲ್ಜಾತಿಯವರು ಕೆಳಜಾತಿಯ ಶೂದ್ರರ ನಂಬಿಕೆ ಆಚರಣೆಗಳು ಸಂಸ್ಕೃತಿಯನ್ನು ಅಪಹಾಸ್ಯ ಮಾಡಿ ಅವರ ವೃತ್ತಿಯನ್ನು ನಿಕೃಷ್ಟವಾಗಿ ಕಂಡು ಶೋಷಿಸುವ ಪರಿಯನ್ನು ಹಾಗೆಯೇ ಶೂದ್ರರನ್ನು ಮತಾಂತರ ಮಾಡುವ ಪ್ರಯತ್ನವನ್ನು ಈ ಕತೆಯು ದರ್ಶಿಸುತ್ತದೆ.

ಉಚ್ಚಕುಲದವರು ಎಂದು ಕರೆಸಿಕೊಳ್ಳುವ ಜನರ ಮನೆ, ಹೊಲ, ತೋಟಗಳಿದ್ದ ಪ್ರದೇಶ ಉಚ್ಚಾಪುರವೆಂದು ಕರೆಯಲ್ಪಡುತ್ತಿದ್ದರೆ ಶೂದ್ರರು, ಸ್ವಪಚರು, ಕ್ಷುದ್ರರು ಎಂದೆಲ್ಲ ಉತ್ತಮರಿಂದ ಕರೆಸಿಕೊಂಡು ಬದುಕುತ್ತಿದ್ದ ಜನರಿರುವ ಪ್ರದೇಶ ನೀಚಗೋಡು ಎಂಬ ಹೆಸರು ಪಡೆದಿತ್ತು ಎಂಬುದು ಉಚ್ಚ-ನೀಚ ಭಾವನೆಯು ಊರಿನ ಹೆಸರಿನಿಂದ ಮೊದಲುಗೊಂಡು ಸಂಪ್ರದಾಯ, ನಂಬಿಕೆ ಆಚರಣೆಗಳು, ಸಂಸ್ಕೃತಿಯವರೆಗೆ ಎಲ್ಲೆಡೆ ಹರಡಿರುವುದನ್ನು ಕತೆಗಾರರು ಮನವರಿಕೆ ಮಾಡುತ್ತಾರೆ. 'ಶೂದ್ರರು ಹುಟ್ಟಿರೋದೇ ಉತ್ತಮರ ಸೇವೆ ಮಾಡೋದಕ್ಕೆ ನಿಮ್ಮ ಜೀವನ ಪಾಪನವಾಗಿ ಪುಣ್ಯ ಸಿಗೋದು ಉತ್ತಮರ ಸೇವೆಮಾಡಿ ಅವರ ಎಂಜಲು ತಿಂದಾಗ' ಎಂದು ಮೇಲ್ಜಾತಿಯ ಲೋಲಾಕ್ಷಯ್ಯ ಹೇಳುವುದು ಜಾತೀಯತೆಯ ಕ್ರೌರ್ಯ ಮುಖವನ್ನು ಬಿಂಬಿಸುತ್ತದೆ. ಶೂದ್ರರು ಮುಟ್ಟಿದರೆ, ಮನೆ ಹೊಕ್ಕರೆ ಮೈಲಿಗೆಯಾಗುತ್ತದೆ ಎಂದು ಮಡಿವಂತಿಕೆ ತೋರುವ ಮೇಲ್ಜಾತಿಯ ಲೋಲಾಕ್ಷಯ್ಯ ಹೀನ ಕುಲದ ಗಿಡ್ಡನ ಹೆಂಡತಿಯನ್ನು ಭೋಗಿಸಲು ಪ್ರಯತ್ನಿಸುವುದು ಎಷ್ಟು ಸರಿ? ಶೂದ್ರರನ್ನು ಸಮಾಜದಲ್ಲಿ ಬೆಳೆಯಲು ಬಿಡದೆ ಅವರಿಂದ ಎಲ್ಲ ಬಗೆಯ ಸೇವೆ ಮಾಡಿಸಿಕೊಂಡು ಸಂಸ್ಕೃತಿ ಆಚರಣೆಗಳ ಹೆಸರಿನಲ್ಲಿ ಅಮಾನುಷವಾಗಿ ಶೋಷಣೆ ಮಾಡುವ ರೀತಿ ನಿಜಕ್ಕೂ ಶೋಚನೀಯ.

ಶೂದ್ರರು ತಮ್ಮ ಸ್ಥಿತಿಗತಿ, ಸ್ಥಾನಮಾನಗಳನ್ನು ಉನ್ನತೀಕರಿಸಿಕೊಳ್ಳಬೇಕೆಂದು ಕ್ರೈಸ್ತಧರ್ಮದತ್ತ ಒಲವು ತೋರಿ ಮತಾಂತರ ಹೊಂದಲು ಪ್ರಯತ್ನಿಸಿದಾಗ ತಮ್ಮ ಕೆಲಸಗಳನ್ನು ಮಾಡುವ ಕೆಲಸಗಾರರು ಇಲ್ಲದಂತಾಗುತ್ತಾರೆಂದು ರಾಜಕೀಯ ಪಿತೂರಿ ನಡೆಸುವುದು ನೋಡಿದರೆ ಮೇಲ್ಜಾತಿಯವರು ತಾವೂ ಬದುಕದೇ ಬದುಕುವವರನ್ನೂ ಬಿಡದೇ ತ್ರಿಶಂಕು ಸ್ಥಿತಿಯತ್ತ ಕೊಂಡೊಯ್ಯುವುದು ಸ್ವಾತಂತ್ರ್ಯ ಹರಣವನ್ನು ಸೂಚಿಸುತ್ತದೆ.

ಕತೆಯ ಕೊನೆಯ ಭಾಗದಲ್ಲಿ ಉಚ್ಚ ನೀಚ ಕುಲದವರನ್ನು ಒಗ್ಗೂಡಿಸುವ ಕತೆಗಾರರು ಜಾತಿ, ಮತ, ಧರ್ಮಗಳೆಂಬ ಕಂದಕಗಳನ್ನು ದಾಟಿ ಐಕ್ಯತೆಯ ಬೀಜಮಂತ್ರವನ್ನು ಪಠಿಸುವುದು ಸಮಾಜದ ಉತ್ತಮ ಬೆಳವಣಿಗೆಯ ದ್ಯೋತಕವಾಗಿದೆ.

ಹೆಬ್ಬೆಟ್ಟಿನವ

ಕತೆಗಾರರು ಲೋಕೋಪಯೋಗಿ ಇಲಾಖೆಯಲ್ಲಿ ಸುದೀರ್ಘ ಸೇವೆ ಸಲ್ಲಿಸಿದವರಾಗಿದ್ದು ತಮ್ಮ ಸೇವಾವಧಿಯಲ್ಲಿ ಕಂಡು ಕೇಳಿದ ನಡೆದ ಎಲ್ಲ ಘಟನೆಗಳನ್ನು ಕತೆಗಳ ಮೂಲಕ ಭಿತ್ತರಿಸಿ ಸಮಾಜದಲ್ಲಿ ಸುಧಾರಣೆ ಬಯಸಿ ಭ್ರಷ್ಟಾಚಾರ ಮುಕ್ತ ಸಮಾಜದ ನಿರ್ಮಾಣವಾಗಬೇಕೆಂದು ಆಶಿಸುತ್ತಾರೆ.

ಈ ಕತೆಯು ಲೋಕೋಪಯೋಗಿ ಇಲಾಖೆಯಲ್ಲಿನ ಭ್ರಷ್ಟಾಚಾರ, ಸುಳ್ಳುಲೆಕ್ಕಗಳು, ಕಳ್ಳಬಿಲ್ಲುಗಳ ಸೃಷ್ಟಿಮಾಡಿ ಸರ್ಕಾರಿ ಹಣವನ್ನು ಅನಾಯಾಸವಾಗಿ ಹೊಡೆಯುವ ಭ್ರಷ್ಟ ಸರ್ಕಾರಿ ನೌಕರರು, ಅಧಿಕಾರಿಗಳ ಮುಖವಾಡಗಳನ್ನು ಕಳಚಿ ಬಣ್ಣಬಯಲು ಮಾಡುತ್ತದೆ.

ಸರ್ಕಾರಿ ಇಲಾಖೆಗಳಲ್ಲಿ ಲಂಚ ಪಡೆಯುವುದು ಸಾಮಾನ್ಯ ಸಂಗತಿಯಾಗಿದ್ದು ಇದನ್ನು ಮೀರಿ ಸುಳ್ಳು ರಶೀದಿಗಳಿಗೆ ಹೆಬ್ಬೆಟ್ಟನ್ನು ಒತ್ತಲೆಂದೇ ಇಂಜಿನಿಯರೊಬ್ಬ ಅನಕ್ಷರಸ್ಥ ವ್ಯಕ್ತಿಯೊಬ್ಬನನ್ನು ಉದ್ಯೋಗಕ್ಕೆ ನೇಮಿಸಿಕೊಂಡು ಅವನಿಗೆ ಬಿಡಿಗಾಸನ್ನಷ್ಟೇ ನೀಡಿ ತಾನು ಸಾಕಷ್ಟು ಹಣ ಮಾಡಿಕೊಂಡು ಸರ್ಕಾರಿ ಹಣವನ್ನು ತಿಂದು ತೇಗುವ ರೀತಿ ಭ್ರಷ್ಟಾಚಾರದ ಪರಮಾವಧಿಯನ್ನು ಸೂಚಿಸುತ್ತದೆ. ಈತನಿಂದಲೇ ನಿತ್ಯವೂ ಕಳ್ಳಬಿಲ್ಲುಗಳಿಗೆ ಹೆಬ್ಬೆಟ್ಟು ಒತ್ತಿಸಿಕೊಂಡು ಸಾಕಷ್ಟು ಹಣ, ಆಸ್ತಿ, ಮಾಡಿಕೊಂಡ ಅಧಿಕಾರಿಗಳು ಸಮಾಜದ ಉತ್ತುಂಗಕ್ಕೆ ಬೆಳೆದರೆ ಹೆಬ್ಬೆಟ್ಟು ಒತ್ತುವವ ಮಾತ್ರ ಶೆಡ್ಡಿನಲ್ಲಿ ಬದುಕುತ್ತಾ ಆತನ ಹೆಂಡತಿ–ಮಕ್ಕಳು ಹರಕಲು ಬಟ್ಟೆ ಧರಿಸಿ, ಗಂಜಿಗೂ ಪರದಾಡುವ ಸ್ಥಿತಿ ನೋಡಿದರೆ ಅಧಿಕಾರಿಗಳ ದಗಲಬಾಜಿತನ, ನೀಚತನದ ಕ್ರೌರ್ಯ ಮುಖದರ್ಶನವಾಗುತ್ತದೆ. ಭ್ರಷ್ಟಾಚಾರದ ಕಪ್ಪು ಛಾಯೆ ಇಂದಿನ ಸಮಾಜದವರೆಗೂ ಮುಂದುವರೆಯುತ್ತಾ ಇಂದು ದೊಡ್ಡ ಸಾಮಾಜಿಕ ಸಮಸ್ಯೆಯಾಗಿ ಕಾಡುತ್ತಿದ್ದು ಇದಕ್ಕೆ ಕೊನೆ ಎಂದು? ಎಂಬ ಪ್ರಶ್ನೆ ಪ್ರಜ್ಞಾವಂತರನ್ನು ಕಾಡುತ್ತಿದೆ.

ನಿನ್ನುದ್ಧಾರವೆಷ್ಟಾಯ್ತು?

ಸಮಾಜಕ್ಕೆ ಇದೊಂದು ಉಪದೇಶಾತ್ಮಕವಾದ ಕತೆ. ಇದರ ಕಥಾನಾಯಕ ಒಬ್ಬ ಬಡಸಾಹಿತಿ. ಈತ ಸಾಹಿತ್ಯದ ಮೂಲಕ ಸಮಾಜಕ್ಕೆ ಮಾರ್ಗದರ್ಶನ

ನೀಡುತ್ತಾನೆ. ಕುಡಿತ, ಧೂಮಪಾನ ಮುಂತಾದ ದುಶ್ಚಟಗಳನ್ನು ಬಿಡಿಸುತ್ತಾನೆ. ಬರಹದಷ್ಟೆ ಅವನ ಮಾತೂ ಶಕ್ತಿಪೂರ್ಣವಾದದ್ದು. ಆದ್ದರಿಂದ ಆತನನ್ನು ಸಭೆ ಸಮಾರಂಭಗಳಿಗೆ ಆಹ್ವಾನಿಸುತ್ತಾರೆ. ಭಾಷಣಗಳ ಮೂಲಕವೂ ಉಪದೇಶ ಮಾಡುತ್ತಾನೆ. ಒಟ್ಟಾರೆ ಸಮಾಜದಲ್ಲಿ ಈತ ಅತ್ಯಂತ ಜನಪ್ರಿಯ ವ್ಯಕ್ತಿಯಾಗುತ್ತಾನೆ. ಇವನ ಮಾತು ಬರಹಗಳಿಂದಾಗಿ ನಡತೆಗೆಟ್ಟವರೂ ಸಹ ಸರಿದಾರಿಗೆ ಬಂದಿದ್ದಾರೆ. ಗೃಹಿಣಿಯರು ತಮ್ಮ ಕೌಟುಂಬಿಕ ಜೀವನವನ್ನು ಸರಿಮಾಡಿಕೊಂಡಿದ್ದಾರೆ. ಸ್ವಗತಃ ಶೈಲಿಯ ಮೂಲಕ ಕತೆಯು ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಆದರೆ ವಿಪರ್ಯಾಸವೆಂದರೆ ಸ್ವತಃ ಈ ಸಾಹಿತಿ ಹೇಳುವುದು ಪುರಾಣ ತಿನ್ನುವುದು ಬದನೆಕಾಯಿ ಎಂಬಂತೆ ಮಹಾನ್ ಕುಡುಕ. ವಿಷಾಯ ಲಂಪಟ, ಅನಾಥ ಹಸಿದವ. ಆದರೂ ತನ್ನ ಪ್ರತಿಭೆಗೆ ಪುರಸ್ಕಾರ ನೀಡಲು ಎಲ್ಲಾ ಬೇಕು ಎನ್ನುತ್ತಾನೆ. 'ಕುದಿಯುವ ನನ್ನ ದೇಹದ ಬಿಸಿ ಆರಲು ಯಾವುದಾದರೂ ಒಂದು ಹೆಣ್ಣು ಸಾಕು' ಎಂದು ಹೇಳುವ ಆತನ ವ್ಯಕ್ತಿತ್ವ ನಿಜಕ್ಕೂ ಹೇಸಿಗೆ ಬರಿಸುತ್ತದೆ. 'ನಿನ್ನುದ್ಧಾರವೆಷ್ಟಾಯ್ತು' ಎಂಬ ಮಂಕುತಿಮ್ಮನ ಕಗ್ಗದ ಒಂದು ಸಾಲು ಪದೆಪದೆ ನೆನಪಿಗೆ ಬಂದು ಅವನ ಆತ್ಮಸಾಕ್ಷಿಯನ್ನು ಕೆಣಕತೊಡಗುತ್ತದೆ. ಸಮಾಜಕ್ಕೆ ಮಾರ್ಗದರ್ಶನ ಮಾಡುವ ವ್ಯಕ್ತಿ ತನ್ನ ಖಾಸಗೀ ಬದುಕಿನಲ್ಲಿ ಮೊದಲಿಗೆ ಹೇಗಿರಬೇಕೆಂಬ ಜಿಜ್ಞಾಸೆಯನ್ನು ಈ ಕತೆ ಹುಟ್ಟುಹಾಕುತ್ತದೆ.

ಸ್ವರ್ಗದ ಬಾಗಿಲಲ್ಲಿ ನರಕ

ಸಮಾಜದಲ್ಲಿ ದುಡ್ಡಿಗಾಗಿ ಮೈಮಾರಿಕೊಳ್ಳುವ ವೇಶ್ಯೆಯರ ಧಾರುಣ ಬದುಕಿನ ಚಿತ್ರಣವನ್ನು ತೆರೆದಿಡುವ ಕತೆ 'ಸ್ವರ್ಗದ ಬಾಗಿಲಲ್ಲಿ ನರಕ'.

ಊರಿಗೆ ಬರುವ ಸುಂದರ ಸ್ತ್ರೀಯನ್ನು ಫಕೀರನೊಬ್ಬ ತನ್ನ ಕುದುರೆಗಾಡಿಯಲ್ಲಿ ಕರೆತರುತ್ತಾನೆ. ಆಕೆ ವೇಶ್ಯೆ ಎಂಬುದು ತಿಳಿದು ಭಕ್ಷೀಸಿಗಾಗಿ ಶ್ರೀಮಂತರನ್ನು ಆಕೆಯ ಬಳಿ ಕರೆತರುತ್ತಾನೆ. ಅವಳು ಅದಕ್ಕಾಗಿ ಇನಾಮು ಕೊಡುತ್ತಾಳೆ. ಹೀಗೆಯೇ ಇದು ಮುಂದುವರಿದು ಮುಂದೊಂದು ದಿನ ಸ್ವತಃ ಫಕೀರನಿಗೆ ಈ ಅದ್ಭುತ ಸುಂದರಿಯನ್ನು ಒಮ್ಮೆಯಾದರು ಅನುಭವಿಸಬೇಕೆಂಬ ಆಸೆ ಮೊಳೆಯುತ್ತದೆ. ತನ್ನ ಮನದಾಸೆಯನ್ನು ಆಕೆಗೆ ಹೇಳಿದಾಗ ನಿನ್ನಂಥ ಬಡಪಾಯಿಗಳೆಲ್ಲ ನನ್ನ ಮುಟ್ಟೋಕಾಗುತ್ತ? ೫೦ ರೂಪಾಯಿ ಇಟ್ಟು ಅನಂತರ ನಿನ್ನಾಸೆ ಪೂರೈಸಿಕೋ ಎನ್ನುತ್ತಾಳೆ. ಆತ ಹಟಕ್ಕೆ ಬಿದ್ದು ಮನೆಮಂದಿ ಕೊನೆಗೆ ಕುದುರೆಗೆ ಹಾಕುವ ಆಹಾರದಲ್ಲಿಯೂ ಉಳಿತಾಯ ಮಾಡಿ ಅವಳ ಬಳಿಬಂದು ನಿಲ್ಲುತ್ತಾನೆ. ಆಕೆ ತನ್ನ ಮರ್ಮಾಂಗದ ಸುತ್ತ ಇರುವ ರಸಿಕೆ

ತುಂಬಿದ ವ್ರಣಗಳನ್ನು ತೋರಿಸಿದಾಗ ಫಕೀರ ಆಘಾತಕ್ಕೊಳಗಾಗುತ್ತಾನೆ. 'ಹಣವಂತರು ನನಗೆ ಈ ರೋಗಾನ ಅಂಟಿಸಿದ್ರು ನಾನು ಅವರ ಮೇಲೆ ಸೇಡು ತೀರಿಸಿಕೋತಾ ಇದೀನಿ. ನಿನ್ನಂಥ ಬಡವನನ್ನು ನಾನು ಬಲಿ ತೆಗೆದುಕೊಳ್ಳುವುದಿಲ್ಲ. ನೀನು ಹೊಟ್ಟೆ–ಬಟ್ಟೆ ಕಟ್ಟಿ ಸುರೀತಿಯಾಂತ ನಾನು ನಂಬಿರಲಿಲ್ಲ. ಇಷ್ಟು ಬೇಗ ಜೀವನ ಹಾಳು ಮಾಡಿಕೊಳ್ಳಬೇಡ' ಎಂದು ಬುದ್ದಿಮಾತು ಹೇಳಿ ಹಣಕ್ಕೆ ಆಸೆಪಡದ ಸರೋಜ ಒಬ್ಬ ಬಡವನನ್ನು ಉಳಿಸಿ ಮಾನವೀಯತೆ ಮೆರೆಯುತ್ತಾಳೆ. ಇದು ಆಕೆಯು ಬದುಕಿನ ಹೋರಾಟದಲ್ಲೂ ಒಳ್ಳೆಯತನ ತೋರುವ ಇನ್ನೊಂದು ಮುಖದರ್ಶನ ಮಾಡಿಸುತ್ತದೆ.

ಅಡಿಟಿಪ್ಪಣಿ

೧. ಡಾ. ನಾ.ಡಿಸೋಜ: ಸಮಗ್ರ ಕಥೆಗಳು, ಸಂಪುಟ–೧, ಪು. ೧೨.

೨. ಅದೇ, ಪು. ೫೨.

೩. ಅದೇ, ಪು. ೮೬

೪. ಅದೇ, ಪು. ೧೬೩

೫. ಅದೇ, ಪು. ೨೩೮

೬. ಅದೇ, ಪು. ೪೯೪

೭. ಅದೇ, ಪು. ೫೩೨

೮. ಅದೇ, ಪು. ೫೫೩

೯. ಡಾ. ನಾಡಿಸೋಜ: ಸಮಗ್ರ ಕಥೆಗಳು, ಸಂಪುಟ.೨, ಪು. ೧೪೮

೧೦. ಅದೇ, ಪು. ೨೪೦

೧೧. ಅದೇ, ಪು. ೨೭೮

೧೨. ಅದೇ, ಪು. ೨೮೬.

ಅಧ್ಯಾಯ – ೪

"ನಾ.ಡಿಸೋಜರ ಕಥೆಗಳಲ್ಲಿ ಕ್ರೈಸ್ತಧರ್ಮದ ಹಿನ್ನೆಲೆಯ ಕಥೆಗಳ ವಸ್ತು ವಿವೇಚನೆ"

ಸುಮಾರು ೫೦ ವರ್ಷಗಳಿಂದೀಚೆಗೆ ಕ್ರೈಸ್ತ ಹಿನ್ನೆಲೆಯನ್ನು ಇಟ್ಟುಕೊಂಡು ಕನ್ನಡದಲ್ಲಿ ಡಿಸೋಜ ಕೊಟ್ಟಷ್ಟು ಕತೆಗಳನ್ನು ಮತ್ತ್ಯಾರೂ ಕೊಟ್ಟಿರಲಾರರು. ಕತೆಗಾರ ತಾನು ಹುಟ್ಟಿ ಬೆಳೆದ ಕೆಥೋಲಿಕ್ ಸಮುದಾಯದ ಸಮಷ್ಠಿ ಬದುಕನ್ನು ತೀರಾ ಸಾಮಿಪ್ಯದಿಂದ ಕಂಡುಕೊಂಡಿರುವುದರಿಂದ ತನ್ನ ಧರ್ಮದ ಒಳಧನಿಯನ್ನು ಚೆನ್ನಾಗಿ ಅರಗಿಸಿಕೊಂಡು ಕತೆಗಳ ಮೂಲಕ ಸಾಕ್ಷಿಗಳಾಗಿ ನಿಂತಿವೆ.

ಕೆಥೋಲಿಕ್ ಸಮಾಜವನ್ನು ಕುರಿತು ಅವರು ಬರೆದಿರುವ ಕತೆಗಳ ಒಟ್ಟು ಸಂಖ್ಯೆ ನೂರನ್ನು ಮೀರಿರಬಹುದು. ವಿಶೇಷವೆಂದರೆ ಅವರು ಪ್ರಾಟೆಸ್ಟೆಂಟ್ ಕ್ರೈಸ್ತ ಸಮಾಜವನ್ನು ಕುರಿತು ಬರೆದದ್ದು ಕೇವಲ ಒಂದೇ ಒಂದು ಕತೆ. 'ಬಂಡಾಯ' ಅವರ ಬರಹದ ಸ್ಥಾಯಿಭಾವ. ತಮ್ಮ ಸಮಾಜದ ಸಂಪ್ರದಾಯ ಮೂಢ ನಂಬಿಕೆಗಳನ್ನು ಗೇಲಿ ಮಾಡುತ್ತಾರೆ. ಕ್ರೈಸ್ತ ಸಂವೇದನೆಯ ಕತೆಗಳ ಮೂಲಕ ಡಿಸೋಜ ತಮ್ಮ ಸಮೂದಾಯದ ಪೂಜೆ, ಹಬ್ಬದ ಸಂಭ್ರಮ, ಮದುವೆ, ಶವಸಂಸ್ಕಾರ, ಧರ್ಮದ ಒಳಿತು-ಕೆಡುಕು ಎಲ್ಲವನ್ನು ಹಿಡಿದಿಡುತ್ತಾರೆ. ಅವರ ಕತೆಗಳಲ್ಲಿ ಒಬ್ಬ ಬಂಡಾಯಗಾರ ಒಳಗಿದ್ದು ಪ್ರತಿಭಟನೆಯ ಮೂಲಕ ಕಾಣಿಸಿಕೊಳ್ಳುತ್ತಾನೆ. ನಿರೂಪಣೆಯಲ್ಲಿ ನಿರುದ್ವಿಘ್ನತೆ ಇರುತ್ತದೆ. ಆದರೂ ಧಾರ್ಮಿಕ ಮೌಢ್ಯವನ್ನು ಅವರು ತೀವ್ರವಾಗಿಯೇ ವಿರೋಧಿಸುವುದು ಕಂಡುಬರುತ್ತದೆ. ಪಂಪ ಘೋಷಿಸಿದ 'ಮಾನವ ಜಾತಿ ತಾನೊಂದೆವಲಂ' ನಿಂದ ಕುವೆಂಪು ಹೇಳುವ 'ವಿಶ್ವಮಾನವ' ಪರಿಕಲ್ಪನೆವರೆಗಿನ ವಿಶ್ವಮುಖಿಯಾದ ಮಾನವ ಧರ್ಮದಲ್ಲಿ ಅತಿಯಾದ ನಂಬಿಕೆ, ಸೆಳೆತ ಉಳ್ಳವರು ಡಿಸೋಜ. ಈ ಹಿನ್ನೆಲೆಯಲ್ಲಿ ಡಿಸೋಜರನ್ನು ಕ್ರೈಸ್ತಧರ್ಮದ ಲೇಖಕ, ಕ್ರೈಸ್ತ ಸಂವೇದನೆಯುಳ್ಳವ ಎಂದು ಹೇಳುವುದು ಅವರ ವಿಶಾಲವಾದ ವ್ಯಕ್ತಿತ್ವವನ್ನು ಕುಬ್ಜಗೊಳಿಸುವ ಮಾತಾದೀತು. ಆದ್ದರಿಂದ ಈ ಅಂಶವನ್ನು ಗಮನದಲ್ಲಿಟ್ಟುಕೊಂಡೇ ಅವರ ಕ್ರೈಸ್ತ ಸಮಾಜ ಕುರಿತಾದ ಕತೆಗಳನ್ನು ಅವಲೋಕನ ಮಾಡಿದ್ದೇನೆ.

"ದೇವರ ಇಚ್ಛೆಯೂ; ಸೈತಾನನ ಕೈವಾಡವು"

ಕ್ರೈಸ್ತ ಪಾದ್ರಿಯೊಬ್ಬ ಹೆಣ್ಣಿನ ವ್ಯಾಮೋಹಕ್ಕೆ ಸಿಲುಕಿ ಆಕೆಯನ್ನು ಪ್ರೇಮಿಸಿ ಹೆಣ್ಣು ಮಗುವೊಂದರ ಜನನಕ್ಕೆ ಕಾರಣನಾಗುತ್ತಾನೆ. ಆ ಮಗು ಬೆಳೆದು ದೊಡ್ಡವಳಾಗುತ್ತಾಳೆ,

ಸಹಾಯಕ್ಕೆಂದು ತಾನೇ ಅರ್ಜಿ ಹಾಕಿ ಕರೆಸಿಕೊಂಡಿದ್ದ ಕಿರಿಯಪಾದ್ರಿಯ ಬಂಗಲೆಗೆ ಹೆಚ್ಚು ಹೋಗುತ್ತಿದ್ದ ತನ್ನ ಮಗಳ ಚಲನವಲನ ಗಮನಿಸಿದ ಪಾದ್ರಿ ಆಕೆಯನ್ನು ಅನುಮಾನಿಸುತ್ತಾನೆ. ಕಿರಿಯ ಪಾದ್ರಿಗೆ ಹತ್ತಿರವಾಗುತ್ತಿದ್ದಾಳೆಂದು ಆತಂಕ ವ್ಯಕ್ತಪಡಿಸಿ ಕಿರಿಯ ಪಾದ್ರಿಯನ್ನು ಅಲ್ಲಿಂದ ಎತ್ತಂಗಡಿ ಮಾಡಿಸಲು ಊರಿನ ಜನರಿಂದ ಮೇಲಧಿಕಾರಿಗಳಿಗೆ ಪತ್ರ ಬರೆಸುವ ಹುನ್ನಾರ ನಡೆಸಿ ಯಶಸ್ವಿಯಾಗುತ್ತಾನೆ.

ವಾಸ್ತವದಲ್ಲಿ ಕಿರಿಯಪಾದ್ರಿ ಒಳ್ಳೆಯವನೇ ಆಗಿದ್ದು ಆತನಲ್ಲಿ ಅವಳ ಬಗ್ಗೆ ಯಾವುದೇ ವ್ಯಾಮೋಹ ಇರುವುದಿಲ್ಲ. ಆತ ದಿಟ್ಟತನದ, ಆತ್ಮವಿಶ್ವಾಸವುಳ್ಳ ವ್ಯಕ್ತಿಯಾಗಿರುತ್ತಾನೆ. ಕೊನೆಯಲ್ಲಿ ಕಿರಿಯ ಪಾದ್ರಿ ಹೇಳುವ ಮಾತು "ಇಲ್ಲಿಂದ ಆದಷ್ಟು ಬೇಗನೆ ಹೋಗಬೇಕು ಅನ್ನೋದು ನನ್ನ ಆಸೆ ಕೂಡ. ಸೈತಾನ ಬಲೆ ಬೀಸ್ತಿದ್ದಾನೆ. ನಾನು ಆ ಬಲೇಲಿ ಬೀಳಬಾರದು. ನನ್ನ ಚಿಂತೆ ನನಗೆ ಸಾಕಾಗಿದೆ. ನನ್ನ ಈವತ್ತೆ ಇಲ್ಲಿಂದ ಬಿಡುಗಡೆ ಮಾಡಿಬಿಡಿ.... ನಾನು ಹೋಗ್ತೀನಿ"[7] ಎಂಬುದು ಹಿರಿಯ ಪಾದ್ರಿಯ ಕಿವಿಯಲ್ಲಿ ಪ್ರತಿಧ್ವನಿಸುತ್ತದೆ. ಸಣ್ಣಪಾದ್ರಿ ತನಗಿಂತ ತುಂಬಾ ದೊಡ್ಡವನಾಗಿ ಬೆಳೆದುನಿಂತಂತೆ ಭಾಸವಾಗುತ್ತದೆ.

ಇಲ್ಲಿ ಕತೆಗಾರರು ಎಲ್ಲ ಪಾದ್ರಿಗಳೂ ಲೌಕಿಕ ಜೀವನದಲ್ಲಿ ಆಸಕ್ತರಾಗಿರಲಾರರು. ಧರ್ಮದ ಮುಖ್ಯ ನೆಲೆಗಟ್ಟಿನಲ್ಲಿ ಅನುಪಾಲನೆ ಮಾಡುವ ಉತ್ತಮ ಪಾದ್ರಿಗಳೂ ನಮ್ಮ ಮುಂದಿದ್ದಾರೆ ಎಂಬುದನ್ನು ಗಮನಕ್ಕೆ ತರುವ ಪ್ರಯತ್ನ ಮಾಡುತ್ತಾರೆ. ಹಾಗೆಯೇ ತನ್ನ ಮನಸ್ಸಿನ ಬಿಂಬವನ್ನು ಇನ್ನೊಬ್ಬರಲ್ಲಿ ಕಾಣದಂತೆ ಎಚ್ಚರಿಸುತ್ತಾರೆ. ಕ್ರೈಸ್ತರ ಮಡಿವಂತಿಕೆಯ ಬೂಟಾಟಿಕೆಯನ್ನು ಈ ಕತೆಯ ಮೂಲಕ ಬಯಲಿಗೆಳೆಯುತ್ತಾರೆ. ಚರ್ಚಿನ ಹಿಂದೆ ಮರೆಯಾಗಿರುವ ಹಲವಾರು ಬಗೆಯ ಅಧರ್ಮ, ಅನ್ಯಾಯದ ಮುಖಗಳನ್ನು ಪರಿಚಯಿಸುತ್ತಾರೆ.

'ದೇವರ ಕೆಲಸದ ಮನುಷ್ಯ': ಈ ಕತೆಯು ಲೌಕಿಕ ಜೀವನ ನಡೆಸುತ್ತಿದ್ದ ಸಾಮಾನ್ಯ ವ್ಯಕ್ತಿಯೊಬ್ಬ ಪಾದ್ರಿಯ ಬಳಿ ಕೆಲಸಕ್ಕೆ ಸೇರಿ 'ದೇವರ ಕೆಲಸದ ಮನುಷ್ಯ'ನೆಂದು ಜನರಿಂದ ಕರೆಸಿಕೊಂಡು ಕೊನೆಗೆ ಆತನ ಮಗನಿಂದಲೇ ಅವನ ಅಸಲಿ ಬಣ್ಣ ಬಯಲಾಗುವ ಕಥಾವಸ್ತುವನ್ನು ಒಳಗೊಂಡಿದೆ.

ಫಾರೆಸ್ಟ್ ಗಾರ್ಡ್ ಆಗಿದ್ದ ಪಿರೇರ ಶ್ರೀಗಂಧ ಕದ್ದು ಸಾಗಿಸುವವರ ಜತೆ ಶಾಮೀಲಾಗಿ, ಕೆಲಸ ಕಳೆದುಕೊಂಡು ನಂತರ ಮುರುಡೇಶ್ವರದ ಒಂದು ಚರ್ಚಿನಲ್ಲಿ ಪಾದ್ರಿಯ ಬಳಿ ಕೆಲಸಕ್ಕೆ ಸೇರಿ ತನ್ನ ಮಾತು, ಚಾಣಾಕ್ಷ ಬುದ್ಧಿಯಿಂದ ಚರ್ಚನಲ್ಲಿ ಹಲವು ಬದಲಾವಣೆ ತಂದು, ಪಾದ್ರಿಯ ಮನಗೆದ್ದು ಚರ್ಚಿನ ಕೇಂದ್ರ ಭಾಗವಾಗಿ

[illegible]

ನಿಲ್ಲುತ್ತಾನೆ. ಹಾಳಾಗುತ್ತಿದ್ದ ಯುವ ಕ್ರೈಸ್ತ ಸಮುದಾಯವನ್ನು ತಿದ್ದಿ ಎಲ್ಲರ ಪಾಲಿಗೆ 'ದೇವರ ಕೆಲಸದ ಮನುಷ್ಯ' ನಾಗಿ ಮಹತ್ವದ ಸ್ಥಾನ ಪಡೆಯುತ್ತಾನೆ.

ಆದರೆ ವಾಸ್ತವದಲ್ಲಿ ಈತ ಪರಸ್ತ್ರೀಯೊಂದಿಗೆ ಸಂಬಂಧವಿರಿಸಿಕೊಂಡಿದ್ದ ಲಂಪಟನಾಗಿದ್ದು ಆಕೆ ತನ್ನ ಮಾತಿನ ಚಾಕಚಕ್ಯತೆಯಿಂದ ಪಾದ್ರಿಯನ್ನು ಮರಳು ಮಾಡಿ ಆಕೆಯನ್ನು ಅಡುಗೆ ಕೆಲಸ ಮಾಡಿಸಿಕೊಳ್ಳುವ ನೆಪದಲ್ಲಿ ಚರ್ಚಿಗೆ ಕರೆಸಿಕೊಳ್ಳುತ್ತಾನೆ. ಆಕೆಯ ಮಗಳನ್ನು ಒಳ್ಳೆ ಕಡೆಗೆ ಕೊಟ್ಟು ಮದುವೆ ಮಾಡುತ್ತಾನೆ. ಕತೆಯ ಕೊನೆಯವರೆಗೂ ಒಳ್ಳೆಯವನಂತೆ ಕಾಣುವ ಆತ ಪ್ರಶ್ನಾತೀತ ವ್ಯಕ್ತಿಯಾಗಿ ಉಳಿಯುತ್ತಾನೆ. ಪ್ರಾರಂಭದಿಂದಲೂ ತಂದೆಯನ್ನು ಗಮನಿಸುತ್ತಿದ್ದ ಹಿರಿಯ ಮಗ ಬೇಸತ್ತು ದಿಟ್ಟತನದಿಂದ ತಂದೆಯೊಡನೆ ವಾಗ್ವಾದಕ್ಕಿಳಿದಾಗ ನಕಲಿ ಮುಖವಾಡಗಳೆಲ್ಲಾ ಕಳಚಿಬಿದ್ದು 'ದೇವರ ಕೆಲಸದ ಮನಷ್ಯ' 'ಪಾಪದ ಮನುಷ್ಯ'ನಾಗಿ ಕಂಡುಬರುತ್ತಾನೆ.

ಚರ್ಚಿನ ಕೆಲಸ-ಕಾರ್ಯಗಳ ಪೂರ್ಣಪ್ರಮಾಣದ ಜವಾಬ್ದಾರಿ ನಿಯಂತ್ರಣವನ್ನು ಪಾದ್ರಿಗಳೇ ವಹಿಸಬೇಕಾದ ಅವಶ್ಯಕತೆಯನ್ನು ಕತೆಗಾರರು ನಿರೂಪಿಸುತ್ತಾರೆ.

ಪಾದರಿಯಾಗುವ ಹುಡುಗ: ಇಷ್ಟವಿಲ್ಲದಿದ್ದರೂ ಬಲವಂತವಾಗಿ ಯುವಕನೋರ್ವನನ್ನು ತಂದೆ-ತಾಯಿಗಳು ಚರ್ಚಿನ ಪಾದ್ರಿಯನ್ನಾಗಿಸಲು ಸಾಕಷ್ಟು ಪ್ರಯತ್ನಿಸಿ ವಿಫಲರಾಗುವ ಕಥಾವಸ್ತುವನ್ನು ಇದು ಒಳಗೊಂಡಿದೆ.

ಹುಟ್ಟಿದ ಯಾವ ಮಕ್ಕಳೂ ಉಳಿಯುತ್ತಿಲ್ಲವೆಂಬ ಕಾರಣಕ್ಕೆ ಅಪ್ಪ-ಅಮ್ಮ ಮುಂದೆ ನಮ್ಮ ಮಕ್ಕಳು ಉಳಿದರೆ ಓರ್ವ ಮಗನನ್ನು ಪಾದ್ರಿಯಾಗಿ ದೇವರ ಸೇವೆಗೆ ಬಿಡುವುದಾಗಿ ಹರಕೆ ಹೊತ್ತು ಅದರಂತೆ ಕಿರಿಯಮಗ (ವಿನ್ಸೆಂಟ್) ನನ್ನು ಪಾದ್ರಿ ಮಾಡುವ ಪ್ರಯತ್ನ. ಆದರೆ ವಿನ್ಸೆಂಟ್‌ಗೆ ತನ್ನ ಗೆಳೆಯರಂತೆ ಲೌಕಿಕ ಜೀವನದಲ್ಲಿ ಒಲವಿದ್ದ ಕಾರಣ ಆ ಜಂಜಾಟದಿಂದ ಪಾರಾಗಿ ಮುಂಬಯಿಗೆ ಪ್ರಯಾಣ ಬೆಳೆಸುವುದರೊಂದಿಗೆ ಕತೆ ಕೊನೆಗೊಳ್ಳುತ್ತದೆ.

ಇಲ್ಲಿ ಕತೆಗಾರರು ಬೇರೆ ಧರ್ಮಗಳಲ್ಲಿರುವಂತೆ ಕ್ರೈಸ್ತ ಧರ್ಮದಲ್ಲೂ ಇರುವ ಹರಕೆ, ಕಾಣಿಕೆ ಮೊದಲಾದ ಸಂಪ್ರದಾಯ, ನಂಬಿಕೆಗಳನ್ನು ತಿಳಿಸುತ್ತಾ ಬಲವಂತವಾಗಿ ಮುಗ್ಧ ಯುವಕನನ್ನು ದೇವರ ಸೇವೆಗೆ ಬಿಡುವ ಪ್ರಯತ್ನವನ್ನು ನಿರಾಕರಿಸುತ್ತಾರೆ.

"ಪಾದರಿಗಳು ಧರ್ಮ ದೇವರು ಅಂತಾರಲ್ಲ. . . . ಮಾಂಸದ ಊಟ ಇಲ್ದೆ ಒಂದು ದಿನ ಇರುತಾರೋ ಕೇಳು"[3] ಎಂಬ ಮಾತು ಕ್ರೈಸ್ತಧರ್ಮದ ಪಾದ್ರಿಗಳು

ಪ್ರತಿನಿತ್ಯ ಮಾಂಸಾಹಾರ ಸೇವನೆಯನ್ನು ಕತೆಗಾರರು ತಾವು ಮೂಲತಃ ಕ್ರೈಸ್ತರಾದರೂ ಅದನ್ನು ವಿರೋಧಿಸುವ ನಿಲುವು ಕಂಡುಬರುತ್ತದೆ. ದೇವರ ಸೇವೆ, ನಿತ್ಯ ಪ್ರಾರ್ಥನೆ, ದಿವ್ಯ ಪ್ರಸಾದ ನೀಡುವ ಪಾದ್ರಿಗಳು ತಾಮಸ ಆಹಾರವನ್ನು ವರ್ಜಿಸಿ ಸಾತ್ವಿಕ ಆಹಾರ ಸೇವನೆಯತ್ತ ಒಲವು ತೋರುವಂತೆ ಕಿವಿಮಾತು ಹೇಳಿದ್ದಾರೆ.

'ದೇವರ ಶಿಲುಬೆ ಮನೆಗೆ ಬಂದದ್ದು': ಕ್ರೈಸ್ತಧರ್ಮದ ಚಿಹ್ನೆ ಶಿಲುಬೆಯು ಶಾಂತಿ. ಸ್ನೇಹ, ವಿಶ್ವಾಸ, ನಂಬಿಕೆಯ ಪ್ರತೀಕ ಎಂಬುದನ್ನು ಪ್ರಾರಂಭದಲ್ಲೆ ತಿಳಿಸುವ ಕತೆಗಾರರು. ಈ ಶಿಲುಬೆಯನ್ನು ಶ್ರೀಮಂತರು ಬಡವರೂ ಪ್ರತಿಯೊಬ್ಬರೂ ತಮ್ಮ ಮನೆಗೆ ಬರಮಾಡಿಕೊಳ್ಳುವುದರಿಂದ, ನೆರೆಹೊರೆಯವರನ್ನು ಮನೆಗೆ ಆಹ್ವಾನಿಸಿ ಪ್ರಾರ್ಥನೆ ದೇವರ ಸೇವೆ, ದಿವ್ಯ ಪ್ರಸಾದ ಸೇವನೆಯಿಂದ ಪರಸ್ಪರ ಪ್ರೀತಿ, ವಿಶ್ವಾಸ, ವೃದ್ಧಿ ನೆಮ್ಮದಿಯ ಬದುಕು ಸಾಗಿಸಲು ಅನುವಾಗುತ್ತದೆ ಎಂಬ ಸತ್ಯವನ್ನು ಮನವರಿಕೆ ಮಾಡುತ್ತಾರೆ. ಇದು ಕ್ರೈಸ್ತ ಧರ್ಮೀಯರ ಧಾರ್ಮಿಕ ನಂಬಿಕೆಗಳನ್ನು ಸಂಕೇತಿಸುತ್ತದೆ.

ಒಮ್ಮೆ ವ್ಯಕ್ತಿಗಾಗಲೀ, ಕುಟುಂಬಕ್ಕಾಗಲಿ ಅಂಟಿದ ಕಳಂಕ ಬಂದ ಕೆಟ್ಟ ಹೆಸರು ಮುಂದೆ ಎಷ್ಟೇ ಒಳ್ಳೆತನ ತೋರಿ ಬದಲಾದರೂ ಅದು ದೂರಾಗದು ಎಂಬ ನೀತಿ ಈ ಕತೆಯಲ್ಲಿ ಅಡಗಿದೆ. ಆಗಾಗ್ಗೆ ಕಳ್ಳತನ ಮಾಡಿ 'ಚೋರ್‌ಪೆದ್ರು' ಎಂದು ಊರಲೆಲ್ಲಾಹೆಸರು ಮಾಡಿದ್ದ ಗಂಡ ಬದುಕಿರುವಾಗ ಅವನ ಒಳ್ಳೆಯ ಹೆಂಡತಿ ಇಬ್ಬರು ಮಕ್ಕಳನ್ನು ಚೋರ್‌ಪೆದ್ರು ಹೆಂಡತಿ–ಮಕ್ಕಳೆಂದು ಅಡ್ಡಹೆಸರಿನಿಂದ ಕರೆಯುವುದು ಅವರ ಪಾಲಿನ ದುರ್ದೈವವೇ ಸರಿ, ಗಂಡ ತೀರಿಕೊಂಡ ನಂತರ ಅವನ ಹಿಂದೆಯೇ ಅಡ್ಡಹೆಸರು ಹೋಗಬಹುದೆಂದು ಭಾವಿಸಿದ ಹೆಂಡತಿಯ ನಂಬಿಕೆ ಸುಳ್ಳಾಗುತ್ತದೆ. ಆಕೆ ತನ್ನ ಕುಟುಂಬಕ್ಕಂಟಿದ ಕಳಂಕವನ್ನು ದೂರ ಮಾಡಲು ಶಿಸ್ತು ಅಚ್ಚುಕಟ್ಟಾದ ಮಾದರೀ ಜೀವನ ನಡೆಸಿ ದೇವರ ಶಿಲುಬೆ ಕ್ರೈಸ್ತ ಧರ್ಮೀಯರ ಮನೆಯಿಂದ ಮನೆಗೆ ಪಾದ್ರಿ ಹೇಳಿದ ನಿಯಮ, ಸಂಪ್ರದಾಯದಂತೆ ಸರಧಿ ಪ್ರಕಾರ ಈಕೆಯ ಮನೆಗೆ ಬಂದಾಗ ದೇವರ ಶಿಲುಬೆ ಮಾತ್ರ ಒಳಗೆ ಕರೆತರಲಾಗುತ್ತದೆ. ದೇವರ ಮುಂದೆ ಎಲ್ಲರ ಮನೆಯಲ್ಲೂ ಮಾಮೂಲಿಯಂತೆ ಇಡುತ್ತಿದ್ದ ಕಾಣಿಕೆಡಬ್ಬಿ ಮಾತ್ರ ಇವರ ಮನೆ ಒಳಗೆ ಪ್ರವೇಶಿಸದಿರುವುದು ಬದಲಾಗದ ಸ್ವಧರ್ಮೀಯರ ಮನಸ್ಸು ಭಾವನೆಯನ್ನು ಸಂಕೇತಿಸುತ್ತದೆ. ಯಾರೋ ಮಾಡಿದ ತಪ್ಪಿಗೆ ಯಾರಿಗೋ ಶಿಕ್ಷೆ ಎಂಬಂತೆ ಮನೆ ಮಂದಿ ಅನುಭವಿಸುವ ಮಾನಸಿಕ ಯಾತನೆಗಳನ್ನು ಈ ಕತೆಯು ಬಿಂಬಿಸುತ್ತದೆ.

ಪಾದರಿ ಹೆನ್ರಿ ಸಿಂಸನ್:ಈ ಕತೆಯು ಇಂಗ್ಲೆಂಡಿನಿಂದ ಭಾರತಕ್ಕೆ ಬಂದು ಕರ್ನಾಟಕದ ಮಂಗಳೂರು, ಮರ್‌ಕೆರಾ ನಡುವೆ ಇದ್ದ ಗುಡ್ಡದಲ್ಲಿ ದೊಡ್ಡ ಚರ್ಚ್‌ವೊಂದನ್ನು ಕಟ್ಟಿಸಿ

ತನ್ನ ಲೌಕಿಕ ಜೀವನವನ್ನು ತ್ಯಜಿಸಿ ಕ್ರೈಸ್ತ ಧರ್ಮದ ಪುನರುತ್ಥಾನಕ್ಕೆ ಹಾಗೆಯೇ ಸುತ್ತಲಿನ ಕ್ರೈಸ್ತ ಮತೀಯರ ಸೇವೆಗೆ ತನ್ನ ಜೀವನವನ್ನು ಮುಡಿಪಾಗಿಟ್ಟ ಪಾದ್ರಿ ಹೆನ್ರಿ ಸಿಂಸನ್‌ನ ತ್ಯಾಗ, ಸಮರ್ಪಣಾ ಭಾವ, ಭಕ್ತಿಯನ್ನು ಪ್ರತಿನಿಧಿಸುತ್ತದೆ.

ಇಂದಿನ ಸಮಾಜದಲ್ಲಿ ಎಷ್ಟೇ ಹಣ, ಆಸ್ತಿ, ಹೊಂದಿ ಸ್ಥಿತಿವಂತರಾದರೂ ಸಮಾಜದ ಒಳಿತಿಗಾಗಿ ಧರ್ಮ ದೇವರ ಸೇವೆಗೆಂದು ಖರ್ಚು ಮಾಡುವ ಜನ ವಿರಳವಾಗಿದ್ದು ಪರದೇಶದಿಂದ ನಮ್ಮಲ್ಲಿಗೆ ಬಂದು ಧರ್ಮೋದ್ಧಾರಕ್ಕೆ ಜನಸೇವೆಗೆ ತನು, ಮನ, ಧನ ನೀಡಿ ಎಲ್ಲರಿಗಿಂತ ಭಿನ್ನವಾಗಿ ನಿಲ್ಲುವ ಹೆನ್ರಿಸಿಂಸಸ್ ನಿಜಕ್ಕೂ ಆದರಣೀಯ. ಸಿಂಸನ್ ಪದೇ ಪದೇ ಹೇಳುತ್ತಿದ್ದ. "ದೇವರಲ್ಲಿ ನಂಬಿಕೆ ಇಡಿ, ಜೊತೆಗೆ ಸೋಮಾರಿತನ ಬಿಟ್ಟು, ಮೂಢನಂಬಿಕೆಗಳನ್ನು ತ್ಯಜಿಸಿ, ಶ್ರದ್ಧೆ, ಪ್ರೀತಿ, ಉತ್ಸಾಹ, ಸಂತೋಷದಿಂದ ದುಡಿಯಿರಿ...."[೩] ಎಂಬ ಮಾತು ಎಷ್ಟೊಂದು ಅರ್ಥಗರ್ಭಿತವಾಗಿದ್ದು ಇದರಿಂದ ಸುಖೀಸಮಾಜ ನಿರ್ಮಾಣ ಸಾಧ್ಯ ಎಂಬುದು ಕತೆಗಾರರ ಆಶಯ.

ಇವರದ್ದು ಇನ್ನೊಂದು ಕತೆ: ಈ ಕತೆಯು ಬದುಕಿನ ಸ್ಥಿತಿ–ಗತಿಗಳನ್ನು ಉನ್ನತೀಕರಿಸಿಕೊಳ್ಳಲು ಕ್ರೈಸ್ತಧರ್ಮಕ್ಕೆ ಮತಾಂತರಗೊಂಡ ದಲಿತರು, ಕ್ರಿಶ್ಚಿಯನ್ನರು ಮುಂದುವರೆದ ಪಟ್ಟಿಯಲ್ಲಿದ್ದಾರೆಂದು ಸರ್ಕಾರ ಇವರಿಗೆ ಸರಕಾರಿ ಜಮೀನು ನೀಡುವಲ್ಲಿ ತಿರಸ್ಕರಿಸಿದ್ದು ಅದರಿಂದ ಅತಂತ್ರ ಸ್ಥಿತಿ ತಲುಪಿದ ಮಾದಿಗ ಕ್ರಿಸ್ತರು ಉಪದೇಶಿ ಪಾದ್ರಿಯ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ ಆತನ ಸಾವಿಗೆ ಕಾರಣವಾದ ಘಟನೆಯೊಂದರ ಸುತ್ತ ಎಣೆದಿದೆ.

ಮಾದಿಗರು ಸ್ವಂತಃ ಜಮೀನು ಹೊಂದಿ ಸ್ವತಂತ್ರವಾಗಿ ಉಳುಮೆ ಮಾಡುವುದು ಸಂಪ್ರದಾಯ ವಿರೋಧ, ಪರಂಪರೆಯನ್ನು ಮುರಿಯುವಂತಹ ಉದ್ಧಟತನದ ಪ್ರದರ್ಶನ ಎಂಬಂತಿದ್ದ 'ರಾವಿನಾಳ್' ಹಳ್ಳಿಯಲ್ಲಿ ಹೊಸದಾಗಿ ಬಂದ ಪಾದ್ರಿಯೊಬ್ಬ ಮತಾಂತರಗೊಂಡ ಮಾದಿಗರಿಗೆ ಸ್ವತಂತ್ರ ಬದುಕು ನಿರ್ಮಿಸಿಕೊಡಬೇಕೆಂಬ ಒಳ್ಳೆಯ ಮನಸ್ಸಿನಿಂದ ಸರಕಾರಕ್ಕೆ ಅರ್ಜಿಹಾಕಿಸಿ ಅವರಿಗೆ ಎರಡು ಎಕರೆ ಜಮೀನು ಕೊಡಿಸಲು ಪ್ರಯತ್ನಿಸುವುದು ಆ ಸಮಯದಲ್ಲಿ ಪಾದ್ರಿ ಹೇಳುವ ಮಾತು "ಒಂದು ಸಾರಿ ನೀವು ಒಳ್ಳೆ ಸ್ಥಿತಿಗೆ ಬಂದ್ರಿ ಅಂದ್ರ ಎಲ್ರು ಗೌರವ ಕೊಡತಾರ, ಮರ್ಯಾದಿ ಕೊಡತಾರ . . . ನಿಮ್ಮ ಮಕ್ಕಳ ಸ್ಥಿತಿಗತಿ ಬದಲಾಗತದ ಅದಕ್ಕೆ ಅಂಜಬ್ಯಾಡ್ರಿ. ಇಟ್ಟ ಹೆಜ್ಜೇನ ಹಿಂದಕ್ಕೆ ಇಡಬ್ಯಾಡಿ"[೪] ಎಂಬುದು ಅವರಲ್ಲಿ ಆತ್ಮವಿಶ್ವಾಸ ಹೆಚ್ಚಿಸುತ್ತದೆ, ಕ್ರಿಶ್ಚಿಯನ್ನರು ಫಾರವರ್ಡ್ ಲಿಸ್ಟ್‌ನಲ್ಲಿದ್ದಾರೆಂಬ ನೆಪ ಹೇಳಿ ಅಧಿಕಾರಿಗಳು ಇವರಿಗೆ ಜಮೀನು ನೀಡಲು

ನಿರಾಕರಿಸುವುದು ಇದರಿಂದ ಅತಂತ್ರಸ್ಥಿತಿ ತಲುಪಿದ ಮಾದಿಗ ಕ್ರಿಸ್ತುವರು ಉಪದೇಶಿ ಪಾದ್ರಿಯನ್ನು ಹಲ್ಲೆ ನಡೆಸಿ ಅಮಾನುಷವಾಗಿ ಕೊಲ್ಲುತ್ತಾರೆ.

ಇಲ್ಲಿ ಕತೆಗಾರರು ಇಂದಿನ ಸಮಾಜದಲ್ಲಿ ಹೆಚ್ಚಾಗಿ ದಲಿತ ಜನಾಂಗದವರು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಹೊಂದುತ್ತಿರುವುದು, ಇವರು ಸಮಾಜದ ದೃಷ್ಟಿಯಲ್ಲಿ ದಲಿತರಾಗಿ ಸರಕಾರಿ ಲೆಕ್ಕದಲ್ಲಿ ಕ್ರಿಶ್ಚಿಯನ್ನರಾಗಿ ಬದುಕುತ್ತಿದ್ದು ಈ ಜನರ ಬದುಕು ಉತ್ತಮಗೊಳ್ಳುವುದು ಹೇಗೆ? ಎಂದು ಪ್ರಶ್ನಿಸುತ್ತಾರೆ. ಅತಂತ್ರ ಸ್ಥಿತಿಯಲ್ಲೇ ಇಂತವರು ಕೊನೆಯವರೆಗೂ ಬದುಕು ಸಾಗಿಸಬೇಕಾದ ಅನಿವಾರ್ಯತೆಯ ಮೇಲೆ ಬೆಳಕು ಚೆಲ್ಲುತ್ತಾರೆ. ಮತಾಂತರದಿಂದ ದಲಿತರ ಧರ್ಮ ಬದಲಾಯಿತೆ ವಿನಾ ಅವರ ಸ್ಥಿತಿಗತಿ ಬದಲಾಗಲಿಲ್ಲ ಎನ್ನುತ್ತದೆ ಕತೆ. ಬದಲಾವಣೆಯೆಂಬುದು ಹೊರಗಿನದಲ್ಲ. ಆಗಬೇಕಾದ್ದು ಒಳಗಿನಿಂದ ಎಂಬ ಸತ್ಯವನ್ನು ತೆರೆದಿಡುವ ಕತೆಗಾರರು ಪರೋಕ್ಷವಾಗಿ ಮತಾಂತರ ಪ್ರಕ್ರಿಯೆಯನ್ನು ವಿರೋಧಿಸುವ ನಿಲುವು ತಳೆಯುವುದು ಕಂಡುಬರುತ್ತದೆ.

ಬೀಳ್ಕೊಡುಗೆ: ಈ ಕತೆಯು ಕಾನ್ವೆಂಟ್‌ವೊಂದರ ಮದರ್ (ಆಡಳಿತಾತ್ಮಕ ಮುಖ್ಯಸ್ಥೆ) ಸಿಸ್ಟರ್ಸ್ (ಕನ್ಯಾಸ್ತ್ರೀಯರು/ಶಿಕ್ಷಕಿಯರು) ಗಳ ಶಿಸ್ತು, ಶ್ರದ್ಧೆ, ವಿಧೇಯತೆ, ಕರ್ತವ್ಯನಿಷ್ಠೆ, ದೈನಿಕ ಭಾವನೆಯನ್ನು ಪರಿಚಯಿಸುವುದರ ಜೊತೆಗೆ ಸುಮಾರು ೧೦ ವರ್ಷಗಳ ಕಾಲ ಸಿಸ್ಟರ್ ಆಗಿ ಎಲ್ಲ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾ ಹೆಸರು ಮಾಡಿದ್ದ ತೆರೇಜಾ ಯುವಕನೋರ್ವನ ವ್ಯಕ್ತಿತ್ವಕ್ಕೆ ಆಕರ್ಷಿತಳಾಗಿ ದೈವಿಕ ಜೀವನವನ್ನು ಬಿಟ್ಟು ಲೌಕಿಕ ಜೀವನದತ್ತ ಪಯಣಿಸುವ ಕಥಾವಸ್ತುವನ್ನೊಳಗೊಂಡಿದೆ.

ತೆರೆಜಾಳ ಚಲನವಲನಗಳನ್ನು ಸೂಕ್ಷ್ಮವಾಗಿ ಗಮನಿಸಿದ ಉತ್ತಮ ಅಂತಃಕರಣ ಮಾತೃ ಮನೋಭಾವ ಹೊಂದಿದ್ದ ಮದರ್ ಆಕೆಯ ಅಂತರಾಳದ ಇಂಗಿತವನ್ನರಿತು ಜೀವನದ ಪಾಠ ಹೇಳಿ, ಪುರಸ್ಕರಿಸಿ, ಆತ್ಮೀಯತೆಯಿಂದ ಬೀಳ್ಕೊಡುವುದು ಆಕೆಯ ಮಾನವೀಯತೆ ದೂರದೃಷ್ಟಿಯನ್ನು ಸಂಕೇತಿಸುತ್ತದೆ. ಒಂದೆಡೆ ಒಳ್ಳೆಯ ಕಾರ್ಯವನ್ನು ಮಾಡಿದ ಸಮಾಧಾನ ಮತ್ತೊಂದೆಡೆ ಇಂತಹದು ಮತ್ತೆ ಮರುಕಳಿಸದಿರಲೆಂಬ ಭಾವ ಸಹಜವಾಗಿಯೇ ಮೂಡಿತು.

ಇಂದು ಕ್ರೈಸ್ತ ಧರ್ಮದಲ್ಲಿ ಕನ್ಯಾಸ್ತ್ರೀ ಪಟ್ಟ ಧರಿಸಿ ಬಡತನ ವಿಧೇಯತೆ, ಬ್ರಹ್ಮಚರ್ಯೆ ಈ ಮೂರಕ್ಕೆ ಅಂಟಿಕೊಂಡು ಶ್ರದ್ಧಾ ಮನೋಭಾವದಿಂದ ದುಡಿಯುತ್ತಿರುವ ಸಾಕಷ್ಟು ಮಂದಿ ನಮ್ಮ ಮುಂದಿದ್ದು ಆಧುನಿಕತೆ, ಜಾಗತೀಕರಣ, ಸಮೂಹ ಮಾಧ್ಯಮ ಮೊದಲಾದವುಗಳು ಧರ್ಮದ ಮೇಲೆ ಪ್ರಭಾವ ಬೀರಿ ಬದಲಾಗುತ್ತಿರುವ ಜೀವನ ಶೈಲಿಯನ್ನು ಕತೆಗಾರರು ಪರೋಕ್ಷವಾಗಿ ತೋರ್ಪಡಿಸುತ್ತಾರೆ.

ಪ್ರೇರಣೆ: ಶ್ರೀಮಂತ ಲೌಕಿಕ ಜೀವನವನ್ನು ತ್ಯಜಿಸಿ ಇಟಲಿಯಿಂದ ಬಂದು ಮಲೆನಾಡಿನ 'ಕುಮರಿ' ಎಂಬ ಕುಗ್ರಾಮದ ಸರ್ವಾಂಗೀಣ ಅಭಿವೃದ್ಧಿಯೊಂದಿಗೆ ಅಲ್ಲಿ ಇಟಲಿ ಮಾದರಿಯ ಬೃಹತ್ ಚರ್ಚ್‌ವೊಂದನ್ನು ನಿರ್ಮಿಸಿ ಬಡವರ ಸೇವೆ, ಸರಳತೆ, ವಿಧೇಯತೆ, ದೈವ ಭಕ್ತಿಯ ಮೂಲಕ ನೆಮ್ಮದಿಯನ್ನು ಕಾಣಲು ಯತ್ನಿಸಿ ಸಫಲನಾಗುವ ಪಾದ್ರಿ ಮುಂದೆ ಬರುವ ಪಾದ್ರಿಗಳಿಗೆ 'ಪ್ರೇರಣೆ'ಯಾಗುವ ಕಥಾವಸ್ತುವನ್ನೊಳಗೊಂಡಿದೆ.

ಕೇವಲ ೧೦ ಕ್ರೈಸ್ತ ಕುಟುಂಬಗಳಿದ್ದ ಅವೂ ಸುತ್ತಲಿರುವ ಇತರ ಮತೀಯರ ಜತೆ ಮಿಲನಗೊಂಡು ಅಮತೀಯರೇ ಆಗಿಹೋಗಿದ್ದ 'ಕುಮರಿ' ಮಲೆನಾಡಿನ ಕಣಿವೆಯೊಂದರಲ್ಲಿ ದಟ್ಟ ಕಾನನ ಮಧ್ಯೆ ಇದ್ದ ಹಳ್ಳಿಯಾಗಿದ್ದು ಮೂಲಭೂತ ಸೌಲಭ್ಯಗಳೇ ಇಲ್ಲದ ಈ ಹಳ್ಳಿ ಇಟಲಿ ಪಾದ್ರಿಯ ಆಗಮನದೊಂದಿಗೆ ಬೃಹತ್ತಾಗಿ ಬೆಳೆದು 'ಕುಮರಿಪೇಟೆ'ಯಾದುದು ಆತನ ನಿಷ್ಠಾವಂತ ಸೇವೆಯ ಫಲ. ಶ್ರೀಮಂತಿಕೆಯ, ಆಡಂಬರದ ಸುಖಭರಿತ, ಲೌಕಿಕ ಜೀವನ ನಡೆಸಲು ಹಂಬಲಿಸುವ ಇಂದಿನ ಸಮಾಜದಲ್ಲಿ ಶ್ರೀಮಂತನಾಗಿಯೇ ಜನ್ಮ ತಳೆದ ಈ ಪಾದ್ರಿ ಲೌಕಿಕ ಜೀವನದತ್ತ ಆಕರ್ಷಿತನಾಗದೇ ಸಮಾಜ ಸೇವೆ ದೇವರ ಸೇವೆಗೆಂದು ತನ್ನ ಇಡೀ ಜೀವನವನ್ನು ಮೀಸಲಿಟ್ಟು ನಿಸ್ವಾರ್ಥ ಸೇವೆ ಮಾಡುವುದು ಎಲ್ಲರಿಗೂ 'ಪ್ರೇರಣೆ' ನೀಡುವಂತದ್ದು.

ಕಿರುಗಂಟೆ ಪಾದರಿ: ಧರ್ಮ, ದೇವರ ಬಗ್ಗೆ ಆಸಕ್ತಿ ಕಳೆದುಕೊಂಡು ಕ್ರೈಸ್ತಧರ್ಮದ ಮುಖ್ಯ ಆಚರಣೆಗಳಾದ ಪೂಜೆ, ಪಾಪನಿವೇದನೆ, ದಿವ್ಯಪ್ರಸಾದ ಸ್ವೀಕಾರ ಎಲ್ಲವನ್ನೂ ಮರೆತು ಲೌಕಿಕ ಜೀವನದಲ್ಲಿ ಮುಳುಗಿ ಹೋಗಿದ್ದ ಕ್ರೈಸ್ತ ಬಾಂದವರನ್ನು ಬಲವಂತವಾಗಿ ಅವರ ಮನೆ ಮನೆಗೆ ಹೋಗಿ ಕಿರುಗಂಟೆ ಬಾರಿಸುವ ಮೂಲಕ ಚರ್ಚಿನತ್ತ ಜನರು ಹೆಚ್ಚಾಗಿ ಬರುವಂತೆ ಮಾಡಿದ ಪಾದರಿಯೊಬ್ಬರ ಕಥಾವಸ್ತುವನ್ನೊಳಗೊಂಡಿದೆ.

ಚರ್ಚಿಗೆ ಬರುವ ಬೆರಳೆಣಿಕೆಯಷ್ಟು ಜನರಿಗಾಗಿ ಲೌಕಿಕ ಸುಖ ಸಂತೋಷಗಳನ್ನು ತ್ಯಜಿಸಿ ತ್ಯಾಗದ ಬದುಕು ನಡೆಸುತ್ತಿದ್ದ ಪಾದ್ರಿಗೆ ಸ್ವಧರ್ಮೀಯರು ತನ್ನನ್ನು ಧರ್ಮವನ್ನು ಅವಹೇಳನಕ್ಕೆ ಗುರಿಪಡಿಸುತ್ತಿರುವ ಹಾಗೇ ಕಂಡು ಎಲ್ಲಾ ಕುಲಬಾಂಧವರನ್ನು ಕ್ರಿಸ್ತನತ್ತ ತಿರುಗುವಂತೆ ಮಾಡಲು ಆತ ಮಾಡಿದ ಹಲವು ಪ್ರಯೋಗಗಳು, ಅದರಲ್ಲೂ ಕಿರುಗಂಟೆ ಹಿಡಿದು ಮನೆ-ಮನೆಗೆ ತಿರುಗಿ ಚರ್ಚಿನತ್ತ ಬರುವಂತೆ ಪಾದ್ರಿಯೊಬ್ಬ ಕರೆದದ್ದು ಇದೇ ಮೊದಲು.

ಮೇಲ್ನೋಟಕ್ಕೆ ಜನರನ್ನು ಆಕರ್ಷಿಸಲು ಇದೊಂದು ಉತ್ತಮ ಮಾರ್ಗವಾಗಿ ಗೋಚರಿಸಿದರೂ ಜನ ತಾವಾಗಿಯೇ ಪ್ರಯತ್ನಶೀಲರಾಗಬೇಕು. ತಾವಾಗಿಯೇ

ಬರಬೇಕಲ್ಲದೆ ಬೇರೆ ಯಾವ ರೀತಿಯಲ್ಲೂ ಬಲವಂತವಾಗಿ ಎಳೆದು ತರುವ ಕೆಲಸವಾಗಬಾರದು. ಧರ್ಮ, ದೇವರು, ನಂಬಿಕೆ, ಆಚರಣೆಗಳೆಲ್ಲಾ ವ್ಯಕ್ತಿಗತವಾಗಿದ್ದು ಅದು ಅವರವರ ಬಾವಕ್ಕನುಗುಣವಾಗಿ ಅನುಸರಣೆಯಾಗುತ್ತದೆ ಎಂಬುದು ನನ್ನ ತೀರ್ಮಾನವಾಗಿದೆ.

ಕ್ಯಾತರೀನ: ಊರಿನ ಎಲ್ಲರ ಅಭಿಮಾನ, ವಿಶ್ವಾಸಕ್ಕೆ ಪಾತ್ರನಾಗಿದ್ದ ಪಾದ್ರಿಯ ಜೀವನ ಹೆಣ್ಣೆಂಬ ಮಾಹೆಯ ಮೋಹ, ಆಕರ್ಷಣೆ, ಬಂಧನಕ್ಕೆ ಸಿಲುಕಿ ಆತನ ತನು-ಮನ ತಳಮಳಿಸುವ ರೀತಿ ಮೋಹಪಾಶದಿಂದ ಹೊರಬರಲಾರದೇ ಅತ್ತ ಧಾರ್ಮಿಕ ನಿಯಮಗಳನ್ನು ಸಮರ್ಪಕವಾಗಿ ಅನುಪಾಲನೆ ಮಾಡಲಾಗದೆ ಎರಡು ದೋಣಿಗಳಲ್ಲಿ ನಿಂತು ಪಯಣಿಸುವಂತಾದ ಆತನ ಬದುಕಿನ ತಲ್ಲಣ, ಏರಿಳಿತಗಳನ್ನು ಕತೆಯು ದರ್ಶನ ಮಾಡಿಸುತ್ತವೆ.

ಕ್ಯಾತರೀನ ಕತೆಯ ಕೇಂದ್ರಬಿಂದುವಾಗಿದ್ದು ಪಾದ್ರಿಯ ಪಾಲಿಗೆ ಮೋಹದ ಬಲೆಯಾಗುತ್ತಾಳೆ. ಬಂದ ಎಲ್ಲ ಸಂಬಂಧಗಳನ್ನು ಮುರಿದು ಬೀಳುವಂತೆ ಮಾಡುವ ಪಾದ್ರಿಯು ಒಂದು ರೀತಿಯಲ್ಲಿ ಆಕೆಯ ಜೀವನ ಹಾಳಾಗಲು ಪರೋಕ್ಷವಾಗಿ ಕಾರಣನಾಗುತ್ತಾನೆ.

ಹಿರಿಯ ಪಾದರಿ ವಿಲಿಯಂ ಈತನಿಗೆ ಹೇಳುವ "ನಾವು ಸಾಂಸಾರಿಕ ಸುಖ ಭೋಗವನ್ನು ತ್ಯಜಿಸಿ ದೇವರ ಸೇವೆಗೆ ನಿಂತವರು. ಇಂತಹ ವಿಷಯಗಳಲ್ಲಿ ನಾವು ಜಾಗರೂಕರಾಗಿರಬೇಕು"[3] ಎಂಬ ತೂಕದ ಮಾತು ಪ್ರಭಾವ ಬೀರಿ ಹಿಂದಿನದನ್ನೆಲ್ಲ ನೆನಪಿಗೆ ತಂದುಕೊಂಡು ಮಿಡುಕಾಡುವುದು ಬೇರೆ ಕಡೆ ವರ್ಗ ಮಾಡಿಸಿಕೊಂಡು ಮೋಹದಿಂದ ಪಾರಾಗುವ ಉಪಾಯ ತದನಂತರದಲ್ಲಿ ಆ ಹುಡುಗಿ ಬೇರೊಂದು ಜಾತಿಯವನ ಜತೆ ಓಡಿಹೋಗುವುದು ಎಲ್ಲವೂ ಸಿನಿಮಾ ರೀತಿಯಲ್ಲಿ ಗೋಚರವಾಗುತ್ತದೆ.

ಗಿಳಿಯೇ ಓ ಗಿಳಿಯೇ: ಪಾದ್ರಿಯ ಎಲ್ಲ ಮಾತುಗಳಿಗೂ, ಒಳ್ಳೆಯ ಕೆಲಸಗಳಿಗೂ ಆಮೆನ್ (ಹಾಗೇ ಆಗಲಿ) ಎಂದು ನುಡಿಯುತ್ತಿದ್ದ ಬಾಲಕನೊಬ್ಬನಿಂದ ದೊರಕಿದ್ದ ಗಿಳಿಯ ಕಥಾವಸ್ತುವನ್ನೊಳಗೊಂಡಿದ್ದು ಕೊನೆಗೆ ಬಾಲಕನ ತಾಯಿಯನ್ನು ಪಾದ್ರಿಯು ಬಳಸಿಕೊಳ್ಳುವುದು. ಯಾವಾಗಲೂ ಆಮೆನ್ ಎಂದು ನುಡಿಯುತ್ತಿದ್ದ ಗಿಳಿ ಪಂಜರದಿಂದ ದೂರವಾಗುವುದು ಏನೂ ಅರಿಯದ ಪಶು-ಪಕ್ಷಿಗಳೂ ಸಹ ಕೆಟ್ಟ ಕೆಲಸಕ್ಕೆ ಮನ್ನಣೆ ನೀಡಲಾರವೆಂಬ ಸಂದೇಶ ನೀಡುತ್ತದೆ. ಹಾಗೆಯೇ ಕೆಲವು ಚರ್ಚ್‌ಗಳಲ್ಲಿ ನಡೆಯುವ ಪಾದ್ರಿಗಳ ಲಂಪಟತನ, ಇನ್ನೊಂದು ಮುಖದ ದರ್ಶನ

ಮಾಡಿಸುತ್ತದೆ, ಇದೊಂದು ಹಲವು ಅರ್ಥದ ನೆಲೆಗಳಿರುವ ಕತೆಯಾಗಿದ್ದು ಇಲ್ಲಿನ ಚಾಲ್ತಿದಾರ ಕಾಡಿನ ಪ್ರಾಣಿ-ಪಕ್ಷಿಗಳ ಬಗ್ಗೆ ಅತೀವ ಪ್ರೀತಿಯುಳ್ಳ ಮತ್ತು ಕಾಡಿನ ಬಗ್ಗೆ ಆಳವಾದ ತಿಳಿವಳಿಕೆ ಉಳ್ಳ ವ್ಯಕ್ತಿ, ತೇಜಸ್ವಿಯವರ ಕರ್ವಾಲೊದ ಮಂದಣ್ಣನ ಪಾತ್ರವನ್ನು ಈತ ನೆನಪಿಸುತ್ತಾನೆ.

ಬಂಡಾರ: ಈ ಕತೆಯು ಒಬ್ಬ ಬಡ, ಅನಕ್ಷರಸ್ಥ ಮಹಿಳೆಯ ಧಾರ್ಮಿಕ ಸಹಿಷ್ಣತೆ, ಸೇವಾ ಮನೋಭಾವವನ್ನು ಎತ್ತಿ ಹಿಡಿಯುವುದರ ಜೊತೆಗೆ ಹುಟ್ಟಿನಿಂದ ಹಿಂದೂಧರ್ಮೀಯಳಾಗಿ, ಸವದತ್ತಿ ಎಲ್ಲಮ್ಮನ ಆರಾಧಕಳಾಗಿ ನಿತ್ಯ ಪಟ್ಟಣದ ಹಲವೆಡೆ ತಿರುಗಿ ಎಲ್ಲರಿಗೂ ಅವ್ವಾ ಒಳ್ಳೇದು ಮಾಡುತ್ತಾಳೆ. ಪರಸಾದ ತಕ್ಕೊಳಿ' ಎಂದು ಎಲ್ಲಮ್ಮನ ಬಂಡಾರ ಹಂಚುತ್ತಾ ಸಮಾಜದ ಗಮನ ಸೆಳೆದಿದ್ದ ಜೋಗತಿ ಕ್ರೈಸ್ತ ಧರ್ಮದ ಬಗ್ಗೆ ತಿಳಿದು ಕ್ರಿಸ್ತನ ಕತೆಗಳನ್ನು ಕೇಳಿಸಿಕೊಂಡು ಆತನನ್ನು ಆಧರಿಸುವ ತುಂಬು ಮನೋಧೋರಣೆಯನ್ನು ಪ್ರತಿಬಿಂಬಿಸುತ್ತದೆ.

"ನಾ ಹೆಚ್ಚು ತಿಳಿದಾಕಿ ಅಲ್ಲ ಆದ್ರೂ ನನಗೆ ಅನ್ನಸತ್ಯೆತೆ....... ಒಬ್ಬ ಮನ್ಸ ದೊಡ್ಡವನಾಗಬೇಕು ಅಂದ್ರ..... ಅವನು ಬದುಕಿದಾಗ ಮಾತ್ರ ದೊಡ್ಡವನಾದ್ರ ಸಾಲ್ದು. . . . ಮರಣದಲ್ಲೂ ಅವನು ದೊಡ್ಡವನಾಗಬೇಕು. . . ಅಲ್ಲೇನ್ರೀ"[೬]. . . . ಎಂದು ಆಕೆ ಹೇಳುವ ಮಾತು ವಿಚಾರವಂತರಿಗೂ ಮೀರಿದ್ದಾಗಿದ್ದು ಸೇವೆ, ಪ್ರೀತಿ, ಪ್ರೇಮ, ತ್ಯಾಗ ಮುಂತಾದ ಸದ್ಗುಣಗಳಿಗೆ ಹೆಸರಾದ ಕ್ರಿಸ್ತನನ್ನು ನೆನಪಿಸುತ್ತದೆ. ಈ ಎಲ್ಲವನ್ನೂ ಹುಟ್ಟುಗುಣವಾಗಿ ಹೊಂದಿರುವ ಮಾತಿನಲ್ಲಿ ಲವಲೇಶವೂ ಸ್ವಾರ್ಥಪರ ಚಿಂತನೆಯಿಲ್ಲದ ಆಕೆಯ ವ್ಯಕ್ತಿತ್ವ ಆದರಣೀಯ. ತನ್ನ ಧರ್ಮವನ್ನು ಪ್ರೀತಿಸುವುದರ ಜೊತೆಗೆ ಕ್ರೈಸ್ತ ಧರ್ಮದಲ್ಲಿರುವ ಉತ್ತಮ ಗುಣಗಳನ್ನು ನಿತ್ಯ ಜೀವನದಲ್ಲಿ ಅನುಸರಣೆ ಮಾಡಲ್ಪಟ್ಟ ಜೋಗುತಿಯ ಪರಧರ್ಮಸಹಿಷ್ಣತೆ, ಹೃದಯ ಶ್ರೀಮಂತಿಕೆ, ವಿಶಾಲ ಮನೋಧೋರಣೆಯನ್ನು ಕತೆಯು ಎತ್ತಿ ಹಿಡಿಯುತ್ತದೆ.

ಗೋಲ್ಗೋಥಾ: ಪ್ರಾಚೀನ ಪರ್ಶಿಯಾದಲ್ಲಿ ಕಾಣಿಸಿಕೊಂಡು ಪ್ಯಾಲಿಸ್ಟೈನ್‌ಗೂ ಹಬ್ಬಿ ರೋಮನ್ನರ ಕಾಲದಲ್ಲೂ ಮುಂದುವರೆದ, ದೇಶದ ಪದ್ಧತಿ, ಸಂಪ್ರದಾಯ ಆಚರಣೆಯ ಗೀಳಿನಲ್ಲಿ ಕೆಲ ಅಪರಾಧ ಮಾಡಿದವರನ್ನು ಶಿಲುಬೆಗೇರಿಸಿ ಅಮಾನುಷವಾಗಿ ಕೊಲ್ಲುವ ಪದ್ಧತಿಯ ಕರಾಳ ಚಿತ್ರಣದೊಂದಿನ ಕ್ರಿಸ್ತನ ವಧೆಯ ಹೃದಯ ಕಲಕುವ ಸನ್ನಿವೇಶವೇ ಈ ಕತೆಯ ವಸ್ತು.

'ಗೋಲ್ಗೋಥಾ' ಎಂಬುದು ಒಂದು ಚಿಕ್ಕ ಬೆಟ್ಟ ಇದು ಜೆರುಸಲೇಮಿನ ಖ್ಯಾತಿಗೆ ಕಾರಣವಾಗಿದೆ. ಈ ಬೆಟ್ಟದ ನೆತ್ತಿಯ ಮೇಲೆ ಶಿಲುಬೆಯ ನಡುಗಂಬ ನೆಟ್ಟಿದ್ದು ದೇಶದ

ಸಂಪ್ರದಾಯದಂತೆ ರೋಮನ್ ನಾಗರೀಕರಲ್ಲದವರು ಕೆಲವು ಅಪರಾಧಗಳು, ಕೊಲೆ, ಸುಲಿಗೆ, ವ್ಯಭಿಚಾರ, ಇನ್ನಿತರ ಕ್ರೂರ ಕೃತ್ಯಗಳನ್ನು ಎಸಗಿದಾಗ ಆ ವ್ಯಕ್ತಿಗಳ ಹೆಗಲ ಮೇಲೆ ಅಡ್ಡಕಂಬವನ್ನು ಹೊರಿಸಿ ಊರ ತುಂಬ ಮೆರವಣಿಗೆ ಮಾಡಿ ಛೀ ಥೂ ಎಂದು ಉಗಿದ ನಂತರ ಗೋಲ್ಗೋಥಾ ಬೆಟ್ಟ ಹತ್ತಿಸಿ ಅಲ್ಲೊಂದು ಶಿಲುಬೆಯಾಕಾರಾದ ಆಕೃತಿ ರಚಿಸಿ ಅಪರಾಧಿಯ ಕೈ-ಕಾಲುಗಳಿಗೆ ಮೊಳೆ ಜಡಿದು ಅಮಾನುಷವಾಗಿ ಶಿಲುಬೆಗೇರಿಸಿ ಕೊಲ್ಲುವ ಮಾನವನ ಪೈಶಾಚಿಕ ವರ್ತನೆಯನ್ನು ಕತೆಗಾರರು ಮನ ಮಿಡಿಯುವಂತೆ ಚಿತ್ರಿಸಿದ್ದಾರೆ.

ಗೊಲ್ಗೋಥಾ ನಡುಗಂಬದ ಕಾವಲುಗಾರನೊಂದಿಗೆ ನಿರ್ಮಲ ಹೃದಯನೂ, ಪ್ರೇಮಮಯಿಯೂ ಆದ ಕ್ರಿಸ್ತ ನಡೆಸುವ ಸಂಭಾಷಣೆ ಮೌಲ್ಯಾಧಾರಿತವಾಗಿದ್ದು ಕ್ರಿಸ್ತ ಹೇಳುವ "ಈ ಪ್ರಪಂಚವೆಲ್ಲ ಸುಂದರವಾದದ್ದು. . . . ಇಲ್ಲಿ ಕೆಟ್ಟದ್ದು, ಕಳಂಕದಿಂದ ಕೂಡಿದ್ದು ಎಂದು ಏನೂ ಇಲ್ಲ.. . . . ನಾವು ಮಾತ್ರ ಅಂಥದ್ದನ್ನು ಸೃಷ್ಟಿ ಮಾಡಿದ್ದೇವೆ".[೨] ಮನುಷ್ಯ ಬದಲಾಗಬೇಕು. ಹಳೆಯ ನಂಬಿಕೆಗಳನ್ನು ಬದಲಾಯಿಸಬೇಕು. ಕಣ್ಣಿಗೆ ಕಣ್ಣು ಜೀವಕ್ಕೆ ಜೀವ ಅನ್ನುವ ಮಾತು ಸುಳ್ಳಾಗಬೇಕು. ನಾವು ಎಲ್ಲರನ್ನು ಕ್ಷಮಿಸುತ್ತ ಹೋದರೆ ಇಡೀ ಸಮುದಾಯ ಬದಲಾಗುತ್ತಾ ಹೋಗುತ್ತದೆ. ಹಿಂಸೆಯಿಂದ ಏನನ್ನೂ ಸಾಧಿಸಲಾಗುವುದಿಲ್ಲ. ಪರಸ್ಪರ ಪ್ರೀತಿ ನಮ್ಮ ಬದುಕನ್ನು ಸುಧಾರಿಸುತ್ತದೆ. ಎಂದೆಲ್ಲಾ ಒಳ್ಳೆಯ ಮಾತುಗಳನ್ನಾಡಿ ಗೋಲ್ಗೋಥಾಕ್ಕೆ ಅಂಟಿದ್ದ ಕಳಂಕವನ್ನು ದೂರ ಮಾಡಲು ಪ್ರಯತ್ನಿಸಿದ ಮಹಾನ್ ಮಾನವತಾವಾದಿ, ದೈವಧೂತ ಕ್ರಿಸ್ತನನ್ನೂ ರೋಮನ್‌ರಕ್ಕಸರು ಗೋಲ್ಗೊಥಾದಲ್ಲಿ ಶಿಲುಬೆಗೇರಿಸಿ ಹತ್ಯೆ ಮಾಡಿದ ಅಮಾನವೀಯ ಘಟನೆಯನ್ನು ಕತೆಯು ತೆರದಿಡುತ್ತದೆ.

ಇಲ್ಲಿ ಕತೆಗಾರರು ಸಂಪ್ರದಾಯ ಆಚರಣೆಯ ಸೋಗಿನಲ್ಲಿ ಶಿಲುಬೆಗೇರಿಸಿ ಪೈಶಾಚಿ ವರ್ತನೆ ತೋರಿದ, ಜನರಿಗೆ ಹಿತೋಪದೇಶ ಮಾಡಿ ಸಮಾಜವನ್ನು ಸರಿದಾರಿಗೆ ತರಲು ಯತ್ನಿಸಿದ ಅಮಾಯಕ ಯೇಸುಕ್ರಿಸ್ತನ ಹತ್ಯೆ ಮಾಡಿದ ರಕ್ಕಸರ ವರ್ತನೆಯನ್ನು ಖಂಡಿಸಿ ಮಾನವೀಯ ಗುಣಗಳು, ಮೌಲ್ಯಗಳನ್ನು ಎತ್ತಿ ಹಿಡಿದು ವಿಶ್ವಕ್ಕೆಲ್ಲಾ ಮಾದರಿಯಾದ ಕ್ರಿಸ್ತನ ಅಪೂರ್ವ ವ್ಯಕ್ತಿತ್ವವನ್ನು ಅನಾವರಣಗೊಳಿಸುತ್ತಾರೆ.

ಅಡಿಟಿಪ್ಪಣಿ

೧. ಡಾ. ನಾ.ಡಿಸೋಜ: ಸಮಗ್ರ ಕಥೆಗಳು, ಸಂಪುಟ–೧, ಪು. ೬೭.

೨. ಅದೇ, ಪು. ೧೩೯.

೩. ಅದೇ, ಪು. ೨೯೩.

೪. ಅದೇ, ಪು. ೩೬೨.

೫. ಅದೇ, ಪು. ೪೪೪.

೬. ಡಾ. ನಾ.ಡಿಸೋಜ, ಸಮಗ್ರ ಕಥೆಗಳು, ಸಂಪುಟ. ೨, ಪು. ೨೨೭.

೭. ಅದೇ, ಪು. ೪೬೭.

ಅಧ್ಯಾಯ–೫

"ನಾ.ಡಿಸೋಜರ ಕಥೆಗಳಲ್ಲಿ ಪರಿಸರ ಸಂಬಂಧಿ ಕಥಾ ವಸ್ತುವಿನ ವಿವೇಚನೆ"

ನಾ.ಡಿಸೋಜ ಪರಿಸರ ಕಾಳಜಿಯುಳ್ಳ ಮಹತ್ವದ ಕಥೆಗಾರರೆನಿಸಿದ್ದು ತಮ್ಮೆಲ್ಲಾ ಕೃತಿಗಳಲ್ಲಿ 'ಪರಿಸರ ನಾಶವೇ ಮಾನವ ಜನಾಂಗದ ವಿನಾಶದ ಮೂಲ. ಪರಿಸರವನ್ನು ಉಳಿಸಿಕೊಂಡು ಬಾಳಿದರೆ ಮಾನವನ ಬಾಳು ಸಂತುಷ್ಟ' ಎಂಬುದನ್ನು ಮತ್ತೆ ಮತ್ತೆ ಪ್ರಸ್ತಾಪಿಸುತ್ತಾರೆ.

ನಾ.ಡಿಸೋಜರವರ ಬಹುಪಾಲು ಎಲ್ಲ ಕತೆಗಳು ಸಂಭವಿಸುವುದು ಶಿವಮೊಗ್ಗ ಜಿಲ್ಲೆಯ ಮಲೆನಾಡು, ಉತ್ತರ ಕನ್ನಡದ ಹೊನ್ನಾವರ ಹಾಗೂ ಅಲ್ಲಿಯ ಊರುಗಳ ಭೌಗೋಳಿಕ ವ್ಯಾಪ್ತಿಯ ಒಳಗಡೆ 'ಮುಳುಗಡೆ' ಅವರ ಬರಹದ ಸ್ಥಾಯೀಭಾವ. ತಮ್ಮ ಕಣ್ಮುಂದೆ ಸಂಭವಿಸಿದ ಸಾಕಷ್ಟು ಊರುಗಳು ಜಲಸಮಾಧಿಯಾಗಿ ತಾವು ನೋಡಿದ ಓಡಾಡಿದ ಸ್ಥಳಗಳು, ಮನೆಗಳು ಕನಸಿನಲ್ಲಿ ಕಂಡ ದೃಶ್ಯಗಳಂತೆ ಅದೃಶ್ಯವಾಗಿವೆ. ನೀರು ಸಮುದ್ರವಾಗಿ ಹರಡಿ ನಿಂತಿದೆ. ಸಾವಿರಾರು ಜನರು ವಸತಿ, ಕೃಷಿ ಭೂಮಿ ಎಲ್ಲವನ್ನೂ ಕಳೆದುಕೊಂಡು ಭಾರವಾದ ಹೃದಯ ಹೊತ್ತು ದಿಕ್ಕುದೆಸೆಯಿಲ್ಲದೆ ಹೋಗಿದ್ದಾರೆ. ಸಾಕುಪ್ರಾಣಿಗಳು ಕೆಲವು ಕಾಡುಸೇರಿ ಇನ್ನೂ ಕೆಲವು ಮುಳುಗಿ ಸತ್ತಿವೆ. ಇವೆಲ್ಲವನ್ನೂ ಮೀರಿ ಅಲ್ಲಿಯೇ ನೆಲೆ ನಿಂತವರ ಬದುಕು ನರಕವಾಗಿದೆ. ನೆಲದ ಬೇರುಗಳನ್ನೇ ಹರಿದುಕೊಂಡು ಹೋದವರ ಸಂಕಟದ ವ್ಯಥೆಗಳು ಒಂದೊಂದೂ ಸಹ ಪ್ರತ್ಯೇಕ ಕತೆಗಳಾಗಿ ಮೈತಳೆದಿರುವುದನ್ನು ಗಮನಿಸಬಹುದು.

ಮಲೆನಾಡಿನ ಹೃದಯಭಾಗದಲ್ಲಿ ಹುಟ್ಟಿಬೆಳೆದ ಡಿಸೋಜ ಕಾಡನ್ನು ತಮ್ಮ ಕತೆಗಳಲ್ಲಿ ಆಪ್ತವಾಗಿ ಚಿತ್ರಿಸಿರುವುದು ಸಹಜ ಎನಿಸಿದರೂ ಅವು ಪರಿಸರ ಕಾಳಜಿಯ ಜೊತೆಗೆ ಆಧುನಿಕತೆ ಹುಟ್ಟಿ ಹಾಕಿರುವ ಅಭಿವೃದ್ಧಿಯ ಹುಸಿ ಭ್ರಮೆಗಳ ಸ್ಪಷ್ಟ ಗ್ರಹಿಕೆ ಅವರಿಗಿದೆ. ಪ್ರಕೃತಿಯೊಂದಿಗಿನ ಒಡನಾಟ, ಅನ್ವೇಷಣೆ, ಆಪ್ತತೆಯನ್ನು ಕುವೆಂಪು, ತೇಜಸ್ವಿಯವರಂತೆ ಡಿಸೋಜ ಕತೆಗಳು ಕೂಡ ಕಂಡುಕೊಳ್ಳುತ್ತವೆ. ಪ್ರಕೃತಿಯ ಒಳಗಿನ ನಿರಂತರ ಚಲನೆ ಶೋಧವಾಗಿ ಮುಂದುವರಿಯುತ್ತದೆ. ಇದನ್ನು ಅವರ ಕಾದಂಬರಿ ಪ್ರಕಾರದಲ್ಲೂ ಕಾಣಬಹುದಾಗಿದೆ.

ಪ್ರಕೃತಿ ನೋಡಲು ಸುಂದರವಾಗಿ ಗೋಚರಿಸಿದರೂ ಅದರ ಹಿಂದಿರುವ ಭಯಾನಕತೆ, ಮಾನವನ ಕ್ರೌರ್ಯವನ್ನು ಹಾಗೆಯೇ ಪ್ರಕೃತಿಯ ಸಹಜ ಬೆಳವಣಿಗೆ

ವಿಕೋಪಗಳು, ಮಾನವ ಪ್ರಕೃತಿಯ ನಡುವಿನ ಸಂಬಂಧ ಎಲ್ಲವನ್ನು ಪರಿಸರ ಕಾಳಜಿ ಕತೆಗಳಲ್ಲಿ ಗಮನಿಸಬಹುದು.

'ಕಡಲು' ಅವರ ಪರಿಸರ ಕತೆಗಳಲ್ಲಿನ ಮುಖ್ಯ ವಸ್ತುವಾಗಿದ್ದು ಸಾವಿರಾರು ಜನರ ಬದುಕನ್ನು ಕಟ್ಟಿ ಕೊಟ್ಟಿರುವ ಈ ಕಡಲು ಕರಾವಳಿ ತೀರದ ಜನರ ಬದುಕೂ ಹೌದು ಭರವಸೆಯೂ ಹೌದು. ಕಡಲು ಕಾದರೆ ತಾಯಿ, ಮುನಿದರೆ ಸಾವು ಎನ್ನುವುದು ಇವರ ಕತೆಗಳ ಸರಳ ಸಂದೇಶ. 'ನದಿಯೊಂದರ ಕತೆಗಾರ'ನೆಂದು ಹೆಸರಾಗಿರುವ ಡಿಸೋಜ ಶರಾವತಿ ನದಿಯ ಇಕ್ಕೆಲಗಳ ಬದುಕನ್ನು ತಮ್ಮ ಬರಹದ ತೆಕ್ಕೆಗೆ ತೆಗೆದುಕೊಂಡಿದ್ದಾರೆ. ಮುಳುಗಡೆ ಜಪಪಾತ–ನದಿಯ ಹರಿವಿನಗುಂಟ ಅವರ ಬರವಣಿಗೆ ನಿರಂತರವಾಗಿ ಚಲಿಸುತ್ತದೆ. ನದಿ ನಿರಂತರವಾಗಿ ಹರಿದು ಹಲವಾಗಿ ಕವಲೊಡೆಯುತ್ತದೆ, ಧುಮ್ಮಿಕ್ಕುತ್ತದೆ ಮತ್ತು ಶಾಂತವಾಗಿಯೂ ಹರಿಯತೊಡಗುತ್ತ ಕಡಲ ಒಡಲು ಸೇರುತ್ತದೆ. ನದಿಯು ಚಲನಶೀಲತೆ, ಪರಿವರ್ತನೆ, ಪುನರ್‌ರಚನೆ ಹಾಗೂ ಶುಭ್ರತೆಯ ಸಂಕೇತ. ಈ ಗುಣ ನಾ.ಡಿಸೋಜರವರ ಬದುಕು–ಬರಹಗಳೆರಡನ್ನೂ ಆವರಿಸಿದೆ.

ಕತೆಗಾರ ತಾನು ಹುಟ್ಟಿ–ಬೆಳೆದ ಮಲೆನಾಡಿನ ವಿಸ್ಮಯಗಳು, ಪರಿಸರ, ಜನಜೀವನವನ್ನು ಆಧಾರವಾಗಿಟ್ಟುಕೊಂಡು ಹಲವು ಕತೆಗಳನ್ನು ರಚಿಸಿರುವುದು ಕಂಡುಬರುತ್ತದೆ. ಅವುಗಳಲ್ಲಿ ಮುಖ್ಯವಾದವುಗಳನ್ನು ಈ ನಿಟ್ಟಿನಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಪ್ರಜ್ಞಾ ಎಂಬ ನದಿ: ಮಲೆನಾಡಿನಲ್ಲಿ ಹಿಂದೆ ಇದ್ದ 'ಪ್ರಜ್ಞಾ' ಎಂಬ ನದಿ ಈ ಮೊದಲು ಮೈದುಂಬಿ ಹರಿಯುತ್ತಿದ್ದ ರೀತಿಯನ್ನು ಬಣ್ಣಿಸಿ ಕಾಲಾಂತರದಲ್ಲಿ ಬತ್ತಿ ಬರಿದಾಗಿ ಖಾಲಿ–ಖಾಲಿಯಾದ ಅಣೆಕಟ್ಟು, ಹೆಬ್ಬಂಡೆಗಳು, ಮರುಳುರಾಶಿಯ ದರ್ಶನವನ್ನು ಈ ಕತೆಯು ಮಾಡಿಸುತ್ತದೆ. ಅಲ್ಲದೆ ಸರ್ಕಾರ ಸರಿಯಾದ ಯೋಜನೆಯಿಲ್ಲದೆ ಮಾಡಿದ ವ್ಯರ್ಥ ಪ್ರಯತ್ನ ಇದರಿಂದ ಉಂಟಾದ ಕಾಲ, ಹಣ, ಶ್ರಮ ಎಲ್ಲದರ ನಷ್ಟದ ಲೆಕ್ಕವನ್ನು ನೀಡುತ್ತದೆ.

ಪ್ರವಾಸಿಗನಿಗೆ ಮಾಹಿತಿ ನೀಡುವ ಅಣೆಕಟ್ಟು ಕಾವಲುಗಾರ 'ಪ್ರಜ್ಞಾ' ನದಿಯ ಬಗ್ಗೆ ಒಂದಿಷ್ಟು ಮಾಹಿತಿ ನೀಡುತ್ತಾನೆ. "ತುಂಬಾ ದೊಡ್ಡ ನದಿ, ಮಳೆಗಾಲದಲ್ಲಿ ನೆರೆ ಬರ್ತಿತ್ತು. ಬೇಸಿಗೇಲೂ ಅದರಲ್ಲಿ ನೀರು ಇರುತ್ತಿತ್ತು. ಮಲೆನಾಡಿನಲ್ಲಿ ಹುಟ್ಟಿ ಘಟ್ಟ ಇಳಿದು, ಸಮುದ್ರ ಸೇರುತ್ತಿತ್ತು. ಸೊಗಸಾದ ನದಿ ಅದರ ಕುಣಿತ, ಹರಿಯೋದನ್ನು ನೋಡಬೇಕಿತ್ತು. ಶ್ರೀರಾಮ ವನವಾಸದ ಕಾಲದಲ್ಲಿ ಈ ಕಡೆ ಬಂದಿದ್ದ. ಅವನ

[illegible]

ಪೂಜೆಗೆ ನೀರು ಸಿಗಲಿಲ್ಲವಂತೆ ಶ್ರೀರಾಮನಿಂದ ಈ ನದಿ ಹುಟ್ತು. ಯಾರೋ ಇದಕ್ಕೆ ಪ್ರಜ್ನ್ಹಾ ಅಂತ ಹೆಸರಿಟ್ಟು ಅವತ್‌ನಿಂದ ಇಲ್ಲಿ ಹರೀತಿತ್ತು ಈ ನದಿ ಕಾಡಿನ ರಾಣಿಯಾಗಿ ಈ ನಾಡಿನ ಚೆಲುವಾಗಿ”[೧] ಎಂಬುದು ಪ್ರಜ್ನ್ಹಾ ನದಿಯ ಪರಿಪೂರ್ಣ ಚಿತ್ರಣ ನೀಡುತ್ತದೆ.

ಸರ್ಕಾರ ಈ ನದಿಗೆ ಮುಂದಾಲೋಚನೆ, ಸೂಕ್ತ ಯೋಜನೆಯಿಲ್ಲದೆ ಸುಮಾರು ೧೦೦ ಕೋಟಿ ವ್ಯಯ ಮಾಡಿ ಅಣೆಕಟ್ಟು ಕಟ್ಟಿಸಿತು. ದುರಾದೃಷ್ಟವಶಾತ್ ಈಗ ಒಂದು ಹನಿ ನೀರಿಲ್ಲ. ಖಾಲಿ ಹೊಡೆಯುತ್ತಿರುವ ಅಣೆಕಟ್ಟು ಹೆಬ್ಬಂಡೆಗಳು ಮರಳುರಾಶಿಯನ್ನು ನೋಡುತ್ತಿದ್ದರೆ ಬೇಸರ ಮನೆಮಾಡುತ್ತದೆ. ಪ್ರಜ್ನ್ಹಾ ನದಿಯ ನೆನಪು ಕಾಡುತ್ತದೆ. ಸರ್ಕಾರ ಈ ನಿಟ್ಟಿನಲ್ಲಿ ಸರಿಯಾದ ಯೋಜನೆ ರೂಪಿಸಿದ್ದರೆ ಮಲೆನಾಡಿನ ಜನಜೀವನ ಉತ್ತಮಗೊಳ್ಳುತ್ತಿತ್ತು. ಯೋಚನೆ ಇಲ್ಲದೆ ರೂಪಿಸಿದ ಯೋಜನೆಯ ವಿಫಲತೆಯಿಂದಾಗಿ ಸಾರ್ವಜನಿಕರ ಹಣ ವ್ಯರ್ಥವಾಗಿ ಪೋಲಾದುದು ನಮ್ಮ ದುರ್ದೈವವೇ ಸರಿ.

ಹೌದು ಇದು ಬಂದದ್ದು ಎಲ್ಲಿಂದ? ಸ್ವಚ್ಚ ನಿರ್ಮಲ ಪರಿಸರದಿಂದ ಕೂಡಿದ್ದ, ಸುವ್ಯವಸ್ಥಿತ ರೀತಿಯಲ್ಲಿ ಎಲ್ಲ ಅನುಕೂಲತೆಯುಳ್ಳ ಪಟ್ಟಣವೊಂದಕ್ಕೆ ಹೆಚ್ಚು ಜನರ ವಲಸೆ, ಕಾರ್ಖಾನೆಗಳ ಸ್ಥಾಪನೆ, ವಾಹನಗಳ ದಟ್ಟಣೆ ಇನ್ನಿತರ ಕಾರಣಗಳಿಂದಾಗಿ ಅಲ್ಲಿಯ ಪರಿಸರ ಹೇಗೆ ಕಲ್ಮಶಗೊಂಡಿತು ಅದರ ಪರಿಣಾಮ ಏನಾಯಿತು? ಎಂಬುದನ್ನು ಈ ಕತೆಯು ದರ್ಶಿಸುತ್ತದೆ.

ಶುದ್ಧವಾಗಿದ್ದ ಪಟ್ಟಣದ ಚರಂಡಿಗಳಲ್ಲಿ ಕೊಂಚ ಕೊಂಚವಾಗಿ ಹೊಲಸು ತುಂಬಿ ಹೊಲಸಿನ ಹೊಂಡದ ನಿರ್ಮಾಣ, ಅದರಲ್ಲಿ ಹುಳಗಳ ಸೃಷ್ಟಿಯಾಗಿ ರಾಕ್ಷಸ ಹುಳುವೊಂದು ಬೇರೆ ಹುಳಗಳಿಗೆ ಆಹಾರ ಸಿಗದಂತೆ ಚರಂಡಿಯಲ್ಲಿ ಸಿಕ್ಕ ಆಹಾರವನ್ನೆಲ್ಲಾ ತಾನೇ ನುಂಗಿ ಬೆಳೆಯಲು ಪ್ರಯತ್ನಿಸುವುದು ಇಂದಿನ ಸಮಾಜದಲ್ಲಿನ ಜನರ ಸ್ವಾರ್ಥಪರ ಚಿಂತನೆಯ ಪ್ರತೀಕವಾಗಿದ್ದು ತಾನು ಮಾತ್ರ ಬೆಳೆಯಬೇಕು ಎಂದು ಹಪ–ಹಪಿಸುವ ರಾಜಕೀಯ ವ್ಯಕ್ತಿಗಳನ್ನು ಸಹ ಒಂದೆಡೆ ಸಮೀಕರಿಸಿ ಕತೆಗಾರರು ಹೇಳಿದಂತಿದೆ.

ಚರಂಡಿಯ ಕಿಂಡಿಗಳಲ್ಲಿ ಆ ರಾಕ್ಷಸಹುಳು ಸಮಾಜದಲ್ಲಿ ನಡೆಯುವ ಅನ್ಯಾಯ, ಅಸತ್ಯ, ನಿರಪರಾಧಿಯ ಕೊಲೆ, ಶೋಷಣೆ, ಸರ್ವಾಧಿಕಾರ, ಮೈ ತುಂಬಾ ತೊಟ್ಟರೂ ಬೆತ್ತಲೆಯಾಗಿ ಕಾಣುವ ಹೆಂಗಸರು, ಹೆಂಗಸರನ್ನು ತೃಪ್ತಿಪಡಿಸಲು ಎಂತಹ ನೀಚ ಕೆಲಸಕ್ಕೂ ಹೇಸದ ಕ್ರೂರ ಗಂಡಸರು, ಜನರ ಗುಪ್ತ ವ್ಯವಹಾರಗಳು, ಸಭ್ಯತೆಯ ಸೋಗಿನಲ್ಲಿ ಒಳಪಿತೂರಿ ಮಾಡುವ ಜನ ಇವೆಲ್ಲವನ್ನು ಗಮನಿಸುತ್ತದೆ. ಮಹಾನಗರದ

ಜನ ಸುಖ-ಸಂತೋಷ, ವಿನೋದದಲ್ಲಿ ಮುಳುಗಿದ್ದಾಗ ಭೂಕಂಪನವಾಗಿ ಅಲ್ಲೋಲ ಕಲ್ಲೋಲ ವಾತಾವರಣ ಸೃಷ್ಟಿಯಾಗಿ ದೈತ್ಯಾಕಾರದ ಪ್ರಾಣಿಯೊಂದು ಸಿಕ್ಕಿದ್ದನ್ನೆಲ್ಲಾ ನಾಶ ಮಾಡುತ್ತಾ ಮಹಾನಗರವನ್ನು ಮುಳುಗಿಸುತ್ತದೆ. ಇದು ಎಲ್ಲಿಂದ ಬಂದದ್ದು? ಎಂಬುದೇ ಯಾರಿಗೂ ಅರಿವಾಗದಂತಾಗುತ್ತದೆ.

ಕತೆಗಾರರು ಇಲ್ಲಿ ಮನುಷ್ಯ ಮಾಡುವ ಪ್ರತಿಯೊಂದು ಕೆಟ್ಟ ಕೆಲಸಗಳಿಗೆ ಮಾಲಿನ್ಯಕ್ಕೆ ದುರ್ವರ್ತನೆಗಳಿಗೆ ಕೊನೆ ಎಂಬುದು ಇದ್ದೇ ಇದೆ. ಇವು ಹೆಚ್ಚಾದಾಗ ಪ್ರಕೃತಿಯೇ ತಕ್ಕ ಪಾಠ ಕಲಿಸುತ್ತದೆ. ತಪ್ಪು ಮಾಡಿದವರು ತಕ್ಕ ಶಾಸ್ತಿ ಅನುಭವಿಸಬೇಕಾಗುತ್ತದೆ ಎಂಬುದನ್ನು ಪರೋಕ್ಷವಾಗಿ ಸೂಚಿಸುತ್ತಾರೆ.

ಹರಿಕಂತಾರರ ಸಣ್ಣಿ: ಕರಾವಳಿ ಪರಿಸರ ಸಮುದ್ರದ ಸೊಬಗು, ಆರ್ಭಟ, ಅಲೆಗಳ ನರ್ತನ, ಮೀನುಗಾರರ ಪರಿಶ್ರಮ, ಉಡುಗೆ-ತೊಡುಗೆಗಳು ಮೊದಲಾದವುಗಳ ದರ್ಶನವನ್ನು ಈ ಕತೆ ಮಾಡಿಸುತ್ತದೆ.

ಈ ಕತೆಯ ನಾಯಕ ಏಳು ವರ್ಷ ಪ್ರಾಯದ ಮೀನುಗಾರರ ಮಗ ಸಣ್ಣಿ. ಮಹಾಬಲೇಶ್ವರ ದೇವಸ್ಥಾನದ ಹಿಂಬದಿಯ ಸಮುದ್ರವೇ ಈತನ ಕಾರ್ಯಕ್ಷೇತ್ರ. ಲಂಗೋಟಿ, ಸೊಂಟಕ್ಕೆ ಕಪ್ಪುದಾರ, ಧರಿಸಿದ ಅವನು ಸಮುದ್ರದ ನೀಲಿ ನೀರಿನಲ್ಲಿ ಮೀನಿನಂತೆ ಈಜಬಲ್ಲ. ಪ್ರವಾಸಿಗರು ಎಸೆದ ನಾಣ್ಯವನ್ನು ಕ್ಷಣ ಮಾತ್ರದಲ್ಲಿ ತರಬಲ್ಲ ಚೂಟಿ ಬಾಲಕ. ಒಮ್ಮೆ ತಾನೊಬ್ಬನೇ ಒಂಟಿಯಾಗಿ ಸಮುದ್ರಕ್ಕೆ ಹೋಗಿ ಸಮುದ್ರದ ಬೋರ್ಗರೆತವನ್ನು ಲೆಕ್ಕಿಸದೇ ಅಪಾಯದಿಂದ ಪಾರಾಗಿ ಹೊರಲಾರದಷ್ಟು ದಪ್ಪ ಗಾತ್ರದ ಮೀನನ್ನು ತಂದ ಅವನ ಸಾಹಸ ನಿಜಕ್ಕೂ ಓದುಗರಿಗೆ ಅಚ್ಚರಿಯನ್ನುಂಟು ಮಾಡುತ್ತದೆ.

ಸಮುದ್ರದ ಅಲೆಗಳು, ಮರುಳುದಂಡೆ ಅಲ್ಲಲ್ಲಿ ಕಾಣುವ ದೋಣಿಗಳು, ಮರುಳು ದಂಡೆಯ ಮೇಲೆ ಸಾಲುಗಟ್ಟಿ ನಿಂತ ಜನರು, ಹುಟ್ಟು, ಬಲೆಗಳೊಡನೆ ಸಮುದ್ರಕ್ಕೆ ಇಳಿವ ಮೀನುಗಾರರು ಮರಳುದಂಡೆಯ ಮೇಲೆ ಕೈಕಾಲು ಚಾಚಿಕೊಂಡು ಸ್ವಚ್ಛಂದವಾಗಿ ಮಲಗಿರುವ ನುಗ್ಗಿ ಬರುವ ಅಲೆಗಳೊಂದಿಗೆ ಆಟವಾಡುತ್ತಿರುವ ಪ್ರವಾಸಿಗರು ಇದಾವುದರ ಕಡೆಯೂ ಗಮನ ಹರಿಸದೆ ಮೊಗೇರರು ದೋಣಿಗಳ ಮಗ್ಗುಲಲ್ಲಿ ಕುಳಿತು ಬಲೆ ಹೆಣೆಯುತ್ತಲೋ, ಮೀನು ಒಣಗಿಸುತ್ತಲೋ ಇರುವುದು ಇವೆಲ್ಲವೂ ಕರಾವಳಿ ಸಮುದ್ರ ತೀರದ ಚಿತ್ರಣ, ಅಲ್ಲಿನ ಬದುಕು, ಬವಣೆಗಳ ಸಮಗ್ರ ನೋಟವನ್ನು ದರ್ಶನ ಮಾಡಿಸುತ್ತದೆ.

ಮೇಲುಪರ್ವತದ ಹೊಸಮನೆ

ಮಲೆನಾಡಿನ ಪ್ರದೇಶಗಳ ಸೌಂದರ್ಯ, ನಿಸರ್ಗ ರಮಣೀಯತೆಯ ದರ್ಶನವನ್ನು ಈ ಕತೆಯು ಮಾಡಿಸುತ್ತದೆ. ಕತೆಗಾರರು ಮೂಲತಃ ಮಲೆನಾಡಿನವರೇ ಆಗಿದ್ದು ತಾವು ಹುಟ್ಟಿ ಬೆಳೆದ ಪ್ರದೇಶದ ಪರಿಸರ ಜನಜೀವನವನ್ನು ಆಧಾರವಾಗಿಟ್ಟುಕೊಂಡು ಈ ಕತೆಯನ್ನು ರಚಿಸಿದಂತಿದೆ.

ಚಿಕ್ಕಮಗಳೂರು ಜಿಲ್ಲೆಗೆ ಸೇರಿದ ಕೊಪ್ಪ, ಶೃಂಗೇರಿಯ ಕಾಫಿ ಎಸ್ಟೇಟುಗಳು ಹಾಗೂ ತೀರ್ಥಹಳ್ಳಿ, ಜಯಪುರ, ಬಾಳೆಹೊನ್ನೂರು ಮೊದಲಾದ ಸ್ಥಳಗಳ ದಟ್ಟ ಕಾಡು. ಕೈ ಚಾಚಿದರೆ ಎಟಕುತ್ತವೇನೋ ಅನ್ನುವಂತಿದ್ದ ಗುಡ್ಡಸಾಲು, ಕಿರಿದಾದ ರಸ್ತೆಗಳು, ಅಲ್ಲೊಂದು ಇಲ್ಲೊಂದು ಮನೆ, ಅಲ್ಲಿನ ಜನಜೀವನ, ಜೀವನಶೈಲಿ, ರಸ್ತೆ ತಿರುವುಗಳು, ಮಂಜು, ಮಳೆ ಇವೆಲ್ಲದರ ಆಸ್ವಾದವನ್ನು ಆರಂಭದಲ್ಲಿ ನೀಡುತ್ತಾರೆ.

ಕಳಸದಿಂದ ೧೮ ಮೈಲಿ ಮುಂದೆ ಮಲೆತಪ್ಪಲು ಆ ಪ್ರದೇಶದ ಹತ್ತಿರದಲ್ಲೇ ಹರಿಯುವ ತುಂಗಾನದಿ ಬೆಟ್ಟಗಳ ಬುಡದಲ್ಲಿನ ಮನೆಗಳು, ಒಂದೆರೆಡು ಮನೆ ಇರೋ ಹಳ್ಳಿಗಳು, ಹತ್ತಿರದಲ್ಲೇ ಇರುವ ಆನೆಗುಡ್ಡ ಅದರ ವರ್ಣನೆ ಅಪ್ಯಾಯಮಾನವಾದುದು. ಎತ್ತರದ ಮರಗಳು, ಹೊಲ-ತೋಟಗಳು, ಅಲ್ಲಲ್ಲಿ ಗುಡ್ಡದ ಮೇಲಿನಿಂದ ಧುಮುಕುತ್ತಿದ್ದ ಅಬ್ಬಿಗಳು, ಕಣಿವೆ, ಅಡಕೆ ತೋಟ, ನೀಲಿ ಭಾನು, ಕೆಂಪು ಮುಗಿಲು ಇವೆಲ್ಲವೂ ಒಳಗೊಂಡ ಪರಿಸರವು ಸ್ವರ್ಗಕ್ಕೆ ಮಿಗಿಲಾಗಿ ಕಂಡುಬರುತ್ತವೆ.

ನಂತರ ಕತೆಗಾರರು ಮೇಲುಪರ್ವತದ ಪರಿಚಯ ಮಾಡಿಕೊಡುತ್ತಾ ಆಕಾಶ ತಿವಿಯುವಂತೆ ನಿಂತಿದ್ದ ಅದರ ಎತ್ತರ, ಅಗಲ, ಅದರ ಮೇಲೆ ಬೆಳೆದ ಕಾಡುಮರಗಳು, ಪೊದೆಗಳು, ಅಲ್ಲಲ್ಲಿ ಮುಂದೆ ಚಾಚಿಕೊಂಡ ಬಂಡೆಗಳು, ಕೆಳಗಿನಿಂದ ಇಳಿಬಿದ್ದ ಧಾರೆಯಂತೆ ಹರಿದು ಧುಮುಕಿ ಬರುತ್ತಿದ್ದ ನೀರ ಝರಿ, ಗುಪ್ಪೆ ಗುಪ್ಪೆಯಾಗಿ ಬಿದ್ದ ತಿಳಿ ಹಸಿರು, ಕಡು ಹಸಿರು. ಅಲ್ಲಲ್ಲಿ ಕೆಂಪು ನೀಲಿ ಹೂಗಳು ಈ ಎಲ್ಲಾ ವರ್ಣನೆಗಳನ್ನು ಕಂಡಾಗ ಕತೆಗಾರರು ಎಷ್ಟು ಸೂಕ್ಷ್ಮವಾಗಿ ಮಲೆನಾಡಿನ ಸೊಬಗನ್ನು ಗಮನಿಸಿದ್ದಾರೆಂಬುದು ಹಾಗೆಯೇ ಸಹಜ ಬರವಣಿಗೆಯಲ್ಲಿ ಮೂಡಿಬಂದಿರುವುದನ್ನು ಗಮನಿಸಬಹುದು.

ಕಾಡುಮರ: ಈ ಕತೆಯು ಪಶ್ಚಿಮಘಟ್ಟದ ಕಾಡಿನ ಸೊಬಗು ಅಲ್ಲಿನ ರಮಣೀಯ ಪರಿಸರದ ಆಸ್ವಾದವನ್ನು ನೀಡುವುದರ ಜೊತೆಗೆ ಶ್ರೀಮಂತರು, ನಮ್ಮನ್ನಾಳುವ ನಾಯಕರು ತಮ್ಮ ವೈಭವದ, ಆಡಂಬರದ ಜೀವನಕ್ಕೆ ಕಾಡಿನ ನಾಶ ಹೇಗೆ

ಮಾಡುತ್ತಿದ್ದಾರೆ? ಅದರಿಂದ ಪ್ರಾಣಿ-ಪಕ್ಷಿಗಳು, ಪರಿಸರದ ಮೇಲಾಗುತ್ತಿರುವ ದುಷ್ಪರಿಣಾಮವನ್ನು ಮನದಟ್ಟು ಮಾಡುತ್ತದೆ.

ಪಶ್ಚಿಮಘಟ್ಟವೆಂದರೆ ಪ್ರಕೃತಿ ಪ್ರಿಯರ ಪಾಲಿನ ಸ್ವರ್ಗ ಇಲ್ಲಿ ಅಪರೂಪದ ಗಿಡ-ಮರಗಳು, ಪೊದೆಗಳು, ಅಪೂರ್ವ ಪ್ರಾಣಿ-ಪಕ್ಷಿಗಳು, ಕ್ರಿಮಿಕೀಟಗಳು, ಬಿಸಿಲೇ ಪ್ರವೇಶಿಸದ ಕೆಲ ಪ್ರದೇಶಗಳು, ಕಾಡು ಕಣಿವೆಯ ನಡುವೆ ಹಿರಯುವ ನದಿ. ಬೆಟ್ಟಗಳ ಸಾಲು ಕಣ್ಣು ತಂಪಾಗಿಸಿ ಮನಸ್ಸಿಗೆ ಮುದ ನೀಡುತ್ತದೆ. ಇಂತಹ ಪಶ್ಚಿಮಘಟ್ಟದಲ್ಲಿ ಸಾಕಷ್ಟು ಎತ್ತರ, ದಪ್ಪಗಾತ್ರದ ಮರಗಳಿದ್ದು ಈ ಕಾಡಿನಿಂದ ನಾಯಕನೊಬ್ಬ ಬೆಂಗಳೂರಿನ ತನ್ನ ಮಹಾಸೌಧದ ಸೊಬಗು ಹೆಚ್ಚಿಸಿಕೊಳ್ಳಲು ಬಾರಿ ಗಾತ್ರದ ಸುಮಾರು ೨೦-೨೨ ಅಡಿ ಎತ್ತರದ ಕಾಡುಮರವನ್ನು ಕತ್ತರಿಸಿ ಭಾರೀ ಟ್ರಕ್‌ಗಳ ಸಹಾಯದಿಂದ ಕೊಂಡೊಯ್ದು ಕ್ರೇನುಗಳ ನೆರವಿನಿಂದ ಬಂಗಲೆ ಮುಂಭಾಗದ ತೋಟದಲ್ಲಿ ನಿಲ್ಲಿಸುತ್ತಾರೆ. ಹುಲ್ಲಿನ ಟರ್ಫಿಂಗ್ ಮಾಡಿಸಿ ಕೆಲ ಬಳ್ಳಿಗಳನ್ನು ಹಬ್ಬಿಸಿ ತನ್ನ ಶ್ರೀಮಂತಿಕೆಯನ್ನು ಎಲ್ಲರೆದುರು ಪ್ರದರ್ಶಿಸಿ ಹೆಸರುವಾಸಿಯಾಗುತ್ತಾರೆ. ಪ್ರಕೃತಿಯ ಮಡಿಲಲ್ಲಿ ಹಕ್ಕಿ-ಪಕ್ಷಿಗಳು, ಅಳಿಲಿನಂತಹ ಪ್ರಾಣಿಗಳು, ಸಹಸ್ರಾರು ಕೀಟಗಳಿಗೆ ಆಶ್ರಯತಾಣವಾಗಿದ್ದ ಈ ಕಾಡುಮರವನ್ನು ಕಡಿಸಿದ್ದೂ ಅಲ್ಲದೇ ಮುಳುಗಡೆ ಪ್ರದೇಶದ ಕಾಡು ಕಡಿಸುವುದು ಅದರಿಂದ ಸಾಕಷ್ಟು ಲಾಭ ಮಾಡಿಕೊಳ್ಳುವುದು ನೋಡಿದರೆ ಪರಿಸರವನ್ನು ಉಳಿಸಿ ಬೆಳೆಸಬೇಕಾದ ನಮ್ಮನ್ನಾಳುವ ನಾಯಕರೇ ಪ್ರಕೃತಿ ನಾಶದ ಕೆಲಸಕ್ಕೆ ಕೈಹಾಕುವುದು ಸಮಾಜದ ದುರ್ದೈವವೇ ಸರಿ.

ಕತೆಯ ಕೊನೆಯ ಭಾಗದಲ್ಲಿ ಕಾಡುಮರ ನರಳುವ ಶಬ್ದ. ಅದರಿಂದ ನಾಯಕನ ತೋಟದ ಗಿಡಮರಗಳ ಕಂಪನ, ಗಿಡ, ಮರ, ಬಳ್ಳಿಗಳು ಬೆಂಕಿಯ ಝಳಕ್ಕೆ ಸಿಲುಕಿ ಬಾಡಿ ಹೋದಂತಾಗುವುದು ಇವೆಲ್ಲವೂ ಮಾನವ ಇದೇ ರೀತಿ ಅರಣ್ಯನಾಶ ಮಾಡುತ್ತಾ ಹೋದಲ್ಲಿ ಪರಿಸರ ಅಸಮತೋಲನ ಉಂಟಾಗಿ ಬಿಸಿಲಿನ ತಾಪ ಹೆಚ್ಚಾಗಿ ಮಾನವನನ್ನೊಳಗೊಂಡಂತೆ ಸಮಸ್ತ ಜೀವಸಂಕುಲ ವಿನಾಶವಾಗುವ ಮುನ್ನೆಚ್ಚರಿಕೆಯನ್ನು ನೀಡುತ್ತದೆ. ಕಾಡು ಮತ್ತು ನಾಡಿನ ನಡುವಿನ ಸಂಬಂಧ ಸಂಘರ್ಷವಾಗಬಾರದು, ನಾಡು ಕಾಡಿನೊಳಗೆ ಪ್ರವೇಶ ಮಾಡಿದಂತೆಲ್ಲ ಅಲ್ಲಿನ ಬದುಕು ನಾಶವಾಗುತ್ತದೆ ಎಂಬ ಸತ್ಯವನ್ನು ಈ ಕತೆ ಹೇಳುತ್ತದೆ.

ನಡುಗಡ್ಡೆ: ಈ ಕತೆಯು ವರಾಹಿ ನದಿಗೆ ಅಣೆಕಟ್ಟು ಕಟ್ಟಿದ್ದರಿಂದ ಮುಳುಗಡೆಯಾದ ಮಲೆನಾಡಿನ ಕೆಲಹಳ್ಳಿಗಳ ಜನತೆ ಎದುರಿಸಿದ ಸಂಕಷ್ಟಗಳು, ಮುಳುಗಡೆ ಪ್ರದೇಶಗಳ ಪರಿಸರ. ಅದರಲ್ಲೂ ಸುತ್ತಲೂ ನೀರು ನಿಂತು ದ್ವೀಪದಂತೆ ಕಾಣುತ್ತಿದ್ದ ಗುಬ್ಬಗೋಡಿನ

ನಿಸರ್ಗ ರಮಣೀಯತೆ ಅದರ ಗಂಭೀರತೆಯನ್ನು ಪರಿಚಯಿಸುವುದರ ಜೊತೆಗೆ ಇಡೀ ದ್ವೀಪದಲ್ಲಿ ಹೊರಗಿನ ಜನರ ಸಂಪರ್ಕವಿಲ್ಲದೆ ಬದುಕು ನಡೆಸುತ್ತಿದ್ದ ದಂಪತಿಗಳ ಜೀವನಕ್ರಮವನ್ನು ತೆರೆದಿಡುತ್ತದೆ.

ಯಾರಿಗೋ ವಿದ್ಯುತ್ ಶಕ್ತಿ ನೀಡಲು ಇನ್ನಾರಿಗೋ ಕೆಲಸ ಕೊಡಲು ಅಣೆಕಟ್ಟು ಕಟ್ಟಿ ಮಲೆನಾಡಿನ ಯಡೂರು, ಮಾಣಿ, ಹುಲಿಕಲ್ಲು, ಗುಬ್ಬಗೋಡು, ಕಾನಮನೆ, ಶೀರ್ನಾಳಿ, ಉಳಕೊಪ್ಪ ಮೊದಲಾದ ಹಳ್ಳಿಗಳ ಬಲಿ ಕೊಟ್ಟದ್ದು ದುರ್ದೈವವೇ ಸರಿ. ಒಂದೆಡೆ ತಲತಲಾಂತರಗಳಿಂದ ನೆಲೆನಿಂತು ಬದುಕು ಕಟ್ಟಿಕೊಂಡಿದ್ದ ಜನತೆ ಸರ್ಕಾರ ನೀಡುವ ಪರಿಹಾರ ಧನಕ್ಕಾಗಿ ಕೈಚಾಚಬೇಕಾಗಿ ಬಂದದ್ದು, ಬೇರೊಂದು ಪ್ರದೇಶಕ್ಕೆ ಸ್ಥಳಾಂತರವಾಗಬೇಕಾದ ಅನಿವಾರ್ಯತೆ ಎದುರಾದದ್ದು, ಪರಿಸರದೊಂದಿಗೆ ಆತ್ಮೀಯ ಸಂಬಂಧವಿರಿಸಿಕೊಂಡು ಪರಿಸರದ ಒಂದು ಭಾಗವಾಗಿದ್ದ ಅವರು ಮೂಲಸ್ಥಾನ ತೊರೆಯಬೇಕಾದುದು ಬದುಕಿನ ಅಸಹಾಯಕತೆಯನ್ನು ಸೂಚಿಸುತ್ತದೆ.

ಗುಬ್ಬಗೋಡಿನ ಸುತ್ತ ಸುಮಾರು ೮ ಕಿ.ಮೀ ನೀರು ನಿಂತು ದ್ವೀಪದಂತೆ ಕಾಣುತ್ತಿದ್ದು ಅದರೊಳಗೆ ನಾಗರೀಕತೆಯ ಸಂಪರ್ಕ ಕಳೆದುಕೊಂಡಂತೆ ಬದುಕು ಸಾಗಿಸುತ್ತಿದ್ದ ವಿಶ್ವೇಶ್ವರ, ನಾಗವೇಣಿಯರ ಧೈರ್ಯ ಮೆಚ್ಚುವಂತಹದು.

"ಡೇಮಿಗಾಗಿ ನಾವು ಬಹಳಷ್ಟನ್ನು ತ್ಯಾಗ ಮಾಡಿದ್ವಿ... ಅದರ ಸೌಲಭ್ಯ ನಮಗೇನೆ ದೊರಕಲಿಲ್ಲ."[೨] ಎಂದು ವಿಶ್ವೇಶ್ವರ ಹೇಳುವ ಮಾತು ಎಲ್ಲರಿಗೆ ಬೆಳಕು ನೀಡಲು ಸಾಕಷ್ಟು ಜಮೀನು ಸರ್ಕಾರಕ್ಕೆ ನೀಡಿದ ಇವರು ವಿದ್ಯುತ್ ಸೌಕರ್ಯ ವಂಚಿತರಾಗಿ ಕತ್ತಲೆಯಲ್ಲೇ ಬದುಕುವ ಪರಿಯನ್ನು ತಿಳಿಸುತ್ತದೆ.

ಡ್ಯಾಂ ಕಟ್ಟಿದ್ದರಿಂದ ನಾಡಿಗೆ ಬೆಳಕು ಸಿಕ್ಕಿತು. ಆದರೆ ಹಿನ್ನೀರಿನ ಜನರ ಬದುಕು ಶಾಶ್ವತವಾಗಿ ಕತ್ತಲಾಯಿತು. ಅಂದರೆ ಇಲ್ಲಿ ಮುಳುಗಿದ್ದು ಕೇವಲ ನೆಲ, ಗುಡ್ಡ, ಬೆಟ್ಟಗಳಲ್ಲ, ಊರು ಮನೆಗಳಲ್ಲ ಇವೆಲ್ಲಕ್ಕಿಂತ ಮುಖ್ಯವಾಗಿ ಅಲ್ಲೊಂದು ಬದುಕಿತ್ತಲ್ಲ ಅದು ಮುಳುಗಡೆಯಾಯಿತು. ಇದೊಂದು ನಾಡಿ–ಹೃದಯ ಕಲಕಿದ ಸಂಗತಿ ಎಂಬುದಾಗಿ ವಿವೇಚಿಸಬಹುದು.

ಕಾಡುಕೋಣ: ಈ ಕತೆಯು ಮಲೆನಾಡಿನ ದಟ್ಟ ಕಾಡು, ಕಾಡಿನ ಸೆರಗಿನಲ್ಲೇ ಇರುವ ಹಳ್ಳಿಗಳು ಅಲ್ಲಿಯ ತೋಟ, ಹೊಲಗದ್ದೆಗಳ ಪ್ರಕೃತಿ ಸೊಬಗನ್ನು ಪರಿಚಯಿಸುವುದರೊಂದಿಗೆ, ಮಾನವ ತನ್ನ ಸ್ವಾರ್ಥಕ್ಕೆ ಕಾಡುಕಡಿದು ತೋಟ–ಮನೆ ಮಾಡಿಕೊಳ್ಳುವುದು, ಲಿಂಗನಮಕ್ಕಿಯಂತಹ ಅಣೆಕಟ್ಟು ಕಟ್ಟಲು ಕಾಡಿನ ವಿನಾಶ

ಅದರಿಂದಾಗಿ ಕಾಡುಪ್ರಾಣಿಗಳು, ಪಕ್ಷಿಗಳು ದಿಕ್ಕುತೋಚದೆ ಹಳ್ಳಿ-ನಗರಗಳತ್ತ ವಲಸೆ ಬರುವ ಪರಿಯನ್ನು ಕುರಿತು ತಿಳಿಸುತ್ತಾ ಕಾಡಿನ ನಾಶದಿಂದಾಗುವ ದುಷ್ಪರಿಣಾಮಗಳ ಮೇಲೆ ಬೆಳಕು ಚೆಲ್ಲುತ್ತದೆ.

ಮಲೆನಾಡಿನ ಹಳ್ಳಿಗಳು ಪ್ರಕೃತಿಯ ಮಡಿಲಲ್ಲಿ ಜೀವ ತಳೆದಿದ್ದು ಮುಂದಾಲೋಚನೆ ಇಲ್ಲದ ಸರ್ಕಾರದ ಯೋಜನೆಗಳು, ಹಾಗೂ ನಾಗರೀಕತೆಯ ಮುಖವಾಡ ಧರಿಸಿ ಅನಾಗರೀಕನಂತೆ ವರ್ತಿಸುತ್ತಿರುವ ಮಾನವನ ಹಸ್ತಕ್ಷೇಪದಿಂದ ಸಮೃದ್ಧ ಮಲೆನಾಡು ಬರಿದಾಗುತ್ತಿರುವ, ಮುಂದೊಂದು ದಿನ ಬಯಲುಸೀಮೆಯಂತಾಗುವ ಮುನ್ಸೂಚನೆಯನ್ನು ಕತೆಯು ಧ್ವನಿಸುತ್ತದೆ, ಇಲ್ಲಿ ಹೆಗಡೆಯರ ತೋಟಕ್ಕೆ ಕಾಡುಕೋಣವೊಂದು ನುಗ್ಗಿರುವುದು ಕಾಡಿನ ನಾಶದ ಪರಿಣಾಮವನ್ನು ಸಂಕೇತಿಸುತ್ತದೆ.

ಕತೆಯ ಮುಖ್ಯ ಪಾತ್ರವಾಗಿ ಬರುವ 'ಈರಣ್ಣ' ಮಲೆನಾಡಿನ ಕಾಡು, ಅಲ್ಲಿನ ಪ್ರಾಣಿಪಕ್ಷಿಗಳು, ಮರ, ಗಿಡ, ಗಿಡಮೂಲಿಕೆಗಳು, ಬಳ್ಳಿಗಳ ಪರಿಪೂರ್ಣ ಅರಿವಿದ್ದು ಅಡಿಕೆ, ಮಾವು, ನಿಂಬೆಯಂತಹ ಮರ-ಗಿಡಗಳಿಗೆ ಹುಳು ಹಿಡಿದಾಗ ಜಾನುವಾರು ಖಾಯಿಲೆ ಬಿದ್ದಾಗ ಗಿಡಮೂಲಿಕೆ ಔಷಧಿ ನೀಡಿ ಗುಣಪಡಿಸುವುದನ್ನು ಕಂಡರೆ ಆತ 'ಆಯುರ್ವೇದ ಪಂಡಿತ'ನಂತೆ ಗೋಚರಿಸುತ್ತಾನೆ. ಅವನಿಗೆ ಹೆಂಡತಿ, ಐವರು ಗಂಡುಮಕ್ಕಳಿದ್ದರೂ ಕೊನೆಗಾಲದಲ್ಲಿ ದೂರಮಾಡಿರುವುದು ದುರಾದುಷ್ಟಕರ. ಕತೆಯ ಕೊನೆಯ ಭಾಗದಲ್ಲಿ ಹೆಗಡೆಯವರ ತೋಟಕ್ಕೆ ನುಗ್ಗಿದ್ದ ಕಾಡುಕೋಣವನ್ನು ಅದರ ಸಂಬಂಧಿಗಳ ಹಿಂಡು ಬಂದು ಕರೆದೊಯ್ಯುವುದನ್ನು ಕುರಿತು ಈರಣ್ಣ ಹೇಳುವ "ಮನುಷ್ಯರ ಬುದ್ಧಿ ಅದಕ್ಕೆ ಎಲ್ಲಿ ಬರಬೇಕು ಒಡೆಯ ಕಳ್ಳುಬಳ್ಳಿ ಸಂಬಂಧಾನ ಅವು ಮರೆಯೋದುಂಟ"[೩] ಎಂದು ಕಣ್ಣೊರೆಸಿಕೊಳ್ಳುತ್ತಾ ಹೇಳುವ ಮಾತು ಅಂತರಂಗವನ್ನು ಕಲಕುತ್ತದೆ. ಇಂದಿನ ನಾಗರೀಕ ಸಮಾಜದಲ್ಲಿ ಕಣ್ಮರೆಯಾಗುತ್ತಿರುವ ಮಾನವ ಸಂಬಂಧಗಳನ್ನು ಸ್ಪರ್ಶಿಸುತ್ತಾ 'ಮಾನವನಿಗಿಂತ ಕಾಡುಪ್ರಾಣಿಗಳೇ ಮೇಲು' ಎಂಬ ಅಂಶವನ್ನು ಎತ್ತಿ ಹಿಡಿಯುತ್ತದೆ.

ಕಾಗೋಡಿಗೆ ಬಸ್ಸು ಬಂದದ್ದು: ಮಲೆನಾಡಿನ ಪರಿಸರವನ್ನು ಆಧುನಿಕತೆ ಎಂಬುದು ಹೇಗೆ ಆವರಿಸಿಕೊಳ್ಳುತ್ತಾ ಹೋಯಿತು ಎಂಬುದೇ ಇಲ್ಲಿನ ಕತಾವಸ್ತು.

ಆಧುನಿಕತೆಯ ಗಂಧ-ಗಾಳಿ ಬೀಸಿರದ ಮಲೆನಾಡಿಗೆ ಬಸ್ಸು, ಪೇಟೆ, ಹೊಟೇಲ್, ಸಿನಿಮಾ ಎಂಬೆಲ್ಲಾ ನವ ನಾಗರೀಕತೆಯ ಅಂಶಗಳು ಹೊಚ್ಚ ಹೊಸದಾಗಿದ್ದು ಬಹಳಷ್ಟು ಮಂದಿ ಅವುಗಳ ದರ್ಶನ ಕೂಡ ಮಾಡಿಲ್ಲ. ಹಾಗಿರುವಾಗ

[illegible]

ಗೌಡರು ಸಾಕಷ್ಟು ಪ್ರಯತ್ನಿಸಿ ಕಾಗೋಡಿಗೆ ಬಸ್ಸು ಬರುವಂತೆ ಮಾಡಿದ್ದು ಸಾಹಸವೇ ಸರಿ. ಬಸ್ ಎನ್ನುವ ಅದ್ಭುತ ಹಳ್ಳಿ ಬಾಗಿಲಿಗೆ ಬರುತ್ತದೆಂಬುದು ಕಾಗೋಡು ಒಳಗೊಂಡಂತೆ ಸುತ್ತಲಿನ ಹಳ್ಳಿಗರಿಗೆ ರೋಮಾಂಚನದ ವಿಷಯವಾಗುತ್ತದೆ. ಮೊದಲ ಸಾರಿ ತಮ್ಮೂರಿಗೆ ಬಸ್ ಬರುವುದನ್ನು ಹಳ್ಳಿಯ ಜನರು ತಳಿರು-ತೋರಣ ಕಟ್ಟಿ ಸ್ವಾಗತಿಸುವ ರೀತಿ, ಚಾಪೆ, ಕಂಬಳಿ, ಹುಲ್ಲು, ಸೊಪ್ಪು ಹಾಸಿ ಕುಳಿತು ಕಣ್ಣು ಮಿಟಕಿಸದಂತೆ ಬಸ್ ಬರುವ ದಾರಿಯನ್ನೇ ಬಹಳ ಹೊತ್ತಿನಿಂದಲೂ ಕಾಯುತ್ತಾ ಕುಳಿತಿರುವ ಪರಿ, ಅದರೊಟ್ಟಿಗೆ ನಡೆಯುವ ಹಳ್ಳಿಗರ ಸಂಭಾಷಣೆಗಳು "ಹೌದಪ್ಪ. . . ಇನ್ನು ಹೋಟಲು ಬತ್ತದೆ, ಸಿನಿಮಾ ಬತ್ತದೆ. . . ಪ್ಯಾಟೆಯೊಳಗೆ ಏನೇನು ಐತೋ ಅದೆಲ್ಲ ಬತ್ತದೆ....."[೪] ಎಂಬ ಮಾತುಗಳು ಮಲೆನಾಡಿಗರ ಮುಗ್ಧತೆ ಹಾಗೂ ಆಧುನಿಕತೆಯು ಮಲೆನಾಡಿಗೆ ಪ್ರವೇಶಿಸುತ್ತಿರುವುದನ್ನು ಸಂಕೇತಿಸುತ್ತದೆ.

ಗೌಡರು ಕರೆತಂದಿದ್ದ ಬಸ್ಸಿನಲ್ಲಿ ಗೇಣಿ ರೈತನೊಬ್ಬ ಅವರಿಗೆ ಸರಿಸಮನಾಗಿ ಬಂದದ್ದು ಕಂಡ ಗೌಡರು ಬಾಯಿಗೆ ಬಂದಂತೆ ಬೈಯ್ದು. ಆಳುಗಳಿಂದ ಹಿಗ್ಗಾ-ಮುಗ್ಗಾ ಥಳಿಸುವುದು ಮಲೆನಾಡಿನ ಪರಿಸರದ ಜಮೀನ್ದಾರರು, ಗೌಡರ ದಬ್ಬಾಳಿಕೆ, ಶೋಷಣೆಯ ಕ್ರೂರ ಮುಖವನ್ನು ಅನಾವರಣಗೊಳಿಸುತ್ತದೆ.

'ಕತೆಯ ಕೊನೆಯ ಭಾಗದಲ್ಲಿ ಕತೆಗಾರರು ಹೇಳುವಂತೆ ಕಾಲ ಬದಲಾದಂತೆ ಮಲೆನಾಡು ಬದಲಾಗಿ ಇಂದು ಆಧುನಿಕತೆಯು ಮಲೆನಾಡನ್ನು ಪೂರ್ಣವ್ಯಾಪಿಸಿ ಅಲ್ಲಿನ ಬದಲಾದ ಪರಿಸರ ದರ್ಶನವನ್ನು ಮಾಡಿಸುತ್ತಾರೆ.

ಪ್ರಬಂಧ: ಸಹ್ಯಾದ್ರಿ ಪರ್ವತ ಶ್ರೇಣಿಯಲ್ಲಿರುವ ಗುಡ್ಡಗಾಡು ಜನಾಂಗಗಳು, ಕಣಿವೆಗಳು ಅಲ್ಲಿನ ಪರಿಸರ, ಅವರ ನಂಬಿಕೆ, ಆಚರಣೆಗಳು, ಪ್ರಕೃತಿಯೊಂದಿಗೆ ಅವರ ಅವಿನಾಭಾವ ಸಂಬಂಧ, ಅವಲಂಬನೆ ಬಗ್ಗೆ ಈ ಕತೆಯು ಬೆಳಕು ಚೆಲ್ಲುತ್ತದೆ.

ಡಾಕ್ಟರೇಟ್ ಮಹಾಪ್ರಬಂಧ ರಚಿಸಲು ಸಹ್ಯಾದ್ರಿ ಪರ್ವತ ಶ್ರೇಣಿಯ ಗುಡ್ಡಗಾಡು ಜನಾಂಗಗಳ ಅಧ್ಯಯನಕ್ಕೆಂದು ಸ್ನೇಹಿತನೊಂದಿಗೆ ತೆರಳುವ ನಿರೂಪಕರು ತಮ್ಮ ಅನುಭವಗಳನ್ನು ಕತೆಯ ಮೂಲಕ ಹಂಚಿಕೊಳ್ಳುತ್ತಾರೆ. ಮಲೆಯರು, ಮಲೆಕುಡಿಯರು, ಜೇನುಕುರುಬರು, ಇರುಳರು, ಬಟ್ಟಿಗರು, ಹಸಲರು, ಗೊಂಢರು, ಕುಣಬಿಗಳು ಇನ್ನೂ ಹಲವಾರು ಗಿರಿಜನ ಹಾಡಿಗಳು ಸಹ್ಯಾದ್ರಿ ಪರ್ವತ ಶ್ರೇಣಿಯಲ್ಲಿದ್ದು ಪ್ರಕೃತಿಯೇ ಕಟ್ಟಿಕೊಟ್ಟಿರುವ ಬೆಟ್ಟಗಳ ಭದ್ರಗೋಡೆ, ಕುಸಿಯುವಂತಹ ಪಾತಾಳ ಕಣಿವೆ, ನಡುವೆ ಅಷ್ಟಗಲ ಜಾಗದಲ್ಲಿ ಗುಡಿಸಲು ಕಟ್ಟಿಕೊಂಡು ವಾಸಿಸುವ ಮಲೆಯರ ಬಗ್ಗೆ ವಿಶೇಷವಾಗಿ ಪ್ರಸ್ತಾಪಿಸುತ್ತಾರೆ. ಮಲೆಯರು ಪ್ರಕೃತಿ ಆರಾಧಕರಾಗಿದ್ದು ಅವರ ಪ್ರಾಕೃತಿಕ

ನಂಬಿಕೆಗಳು. ಆಚಾರ–ವಿಚಾರಗಳು, ಪ್ರಪಂಚದ ದೃಷ್ಟಿಯಲ್ಲಿ ಅಮಾನುಷವೆನಿಸುವ, ಮೌಢ್ಯವೆನಿಸುವ ಹಲವು ವಿಧಿ ವಿಧಾನಗಳು, ಉಡುಗೆ–ತೊಡುಗೆ, ಆಹಾರ ಪದ್ಧತಿ, ಹುಟ್ಟು, ಸಾವು, ಮದುವೆ, ಖಾಯಿಲೆ, ಉಪಶಮನ, ಪರಿಸರವನ್ನು ಅವಲಂಬಿಸಿದ ಅವರ ಗಿಡಮೂಲಿಕೆ ಹಸಿರು ವೈದ್ಯ ಪದ್ಧತಿ ಎಲ್ಲದರ ಬಗ್ಗೆ ಪರಿಪೂರ್ಣ ಮಾಹಿತಿ ತಿಳಿಸುತ್ತಾರೆ. ಸೌಪರ್ಣಿಕಾ ನದಿಯ ವಿವರ ಸಹ ಕತೆಯಲ್ಲಿದ್ದು ಪ್ರಕೃತಿಯ ಒಂದು ಅಂಶವಾಗಿ ಬದುಕುತ್ತಿರುವ ಹಾಡಿ ಜನ ನಾಗರಿಕ ಪ್ರಪಂಚದಿಂದ ದೂರವಿದ್ದು ಎಲ್ಲವುದಕ್ಕೂ ಪ್ರಕೃತಿಯನ್ನೇ ಆಶ್ರಯಿಸಿರುವ ಅವರ ಜೀವನ ಶೈಲಿಯನ್ನು ತೆರೆದಿಡುತ್ತದೆ. ಮಲೆಯರ ಹುಡುಗಿ ಗುತ್ತಿಯನ್ನು ಸ್ನೇಹಿತ ನಟರಾಜ ಮದುವೆಯಾಗಿ ಸೌಪರ್ಣಿಕಾ ನದಿಯ ದಂಡೆಯ ಮೇಲೆಯೇ ಗುಡಿಸಲು ಕಟ್ಟಿಕೊಂಡು ವಾಸ ಮಾಡುವುದು, ಹಾಡಿಯ ಜನರ ಪ್ರೀತಿ, ವಿಶ್ವಾಸ ಗಳಿಸಿ ಆ ಜನರಿಗೆ ಏನನ್ನಾದರೂ ಮಾಡಬೇಕೆಂದು ಬಯಸುವ ಆತನ ವ್ಯಕ್ತಿತ್ವ ನಿಜಕ್ಕೂ ಬಹಳ ದೊಡ್ಡದು. ಆಧುನಿಕ ಜೀವನ ಶೈಲಿಯೊಂದಿಗೆ ನಗರಗಳಲ್ಲಿ ಚೆನ್ನಾಗಿ ಬದುಕಿ–ಬಾಳಬೇಕೆಂದು ಬಯಸುವ ಬಹುತೇಕ ಜನರ ಮಧ್ಯೆ ಈತ ವಿಶಿಷ್ಟಪೂರ್ಣನಾಗಿ ಪ್ರಕೃತಿ ಆರಾಧಕನಂತೆ ಕಂಡುಬರುತ್ತಾನೆ.

[illegible]

ಅಡಿಟಿಪ್ಪಣಿ

೧. ಡಾ. ನಾ.ಡಿಸೋಜ, ಸಮಗ್ರ ಕಥೆಗಳು: ಸಂಪುಟ ೧, ಪು. ೭೦.

೨. ಡಾ. ನಾ.ಡಿಸೋಜ, ಸಮಗ್ರ ಕಥೆಗಳು: ಸಂಪುಟ ೨, ಪು. ೨೧೪.

೩. ಅದೇ, ಪು. ೪೦೪.

೪. ಅದೇ, ಪು. ೪೪೧

ಉಪಸಂಹಾರ

ಕನ್ನಡ ಸಂಶೋಧನೆಗೆ ಸುಮಾರು ನೂರು ವರ್ಷಗಳ ಇತಿಹಾಸವಿದೆ. ನಮ್ಮ ಸಂಶೋಧನೆಯು ಆರಂಭವಾದ ಸಂದರ್ಭದಲ್ಲಿ ಕೇವಲ ಸಂಗ್ರಹಣೆಗೆ ಮಾತ್ರ ಹೆಚ್ಚು ಒತ್ತುಕೊಟ್ಟಿತು. ಆದರೆ ಆಳವಾದ ವಿಶ್ಲೇಷಣೆಯನ್ನು ಒಳಗೊಂಡ ಸಂಶೋಧನೆಯು ಆರಂಭವಾದದ್ದು ಕಳೆದೆರಡು ದಶಕಗಳಿಂದೀಚೆಗೆ. ಆದಾಗ್ಯೂ ನಾವು ಇಂದಿಗೂ ಸಹ ಹೇಳಿಕೊಳ್ಳುವಂತಹ ಸಂಶೋಧನೆಯ ಹಾದಿ ಹಿಡಿದಿಲ್ಲ. ಸಾಹಿತ್ಯ ಕುರಿತಾದಂತಹ ಸಂಶೋಧನೆಗಳು ಇಂದು ಸರ್ಕಾರದ ಪ್ರೋತ್ಸಾಹದಿಂದ ಸ್ವಲ್ಪ ಉತ್ಸಾಹ ಕಂಡುಕೊಂಡಿದೆ. ನಮ್ಮಲ್ಲಿನ ಸೃಜನಶೀಲ ಸಾಹಿತ್ಯ ಬೃಹತ್ತಾಗಿ ಬೆಳೆದುನಿಂತಿದ್ದು ಇಂತಹ ಸಾಹಿತ್ಯ ಕುರಿತಾಗಿ ನಡೆಯಬೇಕಾದ ಸಂಶೋಧನೆಗಳು ಮೂಡಿಬರಬೇಕಾಗಿದೆ. ಇಂತಹ ಒಂದು ಪ್ರಯತ್ನದ ಫಲವಾಗಿಯೇ ಸಾಹಿತ್ಯದ ಮುಖ್ಯ ಪ್ರಕಾರವೆನಿಸಿದ ಕಥಾಸಾಹಿತ್ಯವನ್ನಿಟ್ಟುಕೊಂಡು ಸಮಾಜದ ವಾಸ್ತವ ಸ್ಥಿತಿಗತಿಗಳೊಡನೆ ಹೋಲಿಸಿ ಅಧ್ಯಯನ ಮಾಡುವ ಪ್ರಯತ್ನಮಾಡಿದ್ದೇನೆ.

ನಾ.ಡಿಸೋಜ ಅವರು ತಾವು ಬರೆದ ಒಂದೊಂದು ಕತೆಯಲ್ಲಿಯೂ ಬದುಕಿನ ಒಂದೊಂದು ಮುಖವನ್ನು ಪರಿಚಯಿಸುತ್ತಾರೆ. ಅವರ ಕತೆಗಳನ್ನು ಅಧ್ಯಯನ ಮಾಡುವುದೆಂದರೆ ನಮ್ಮ ಸುತ್ತಲಿನ ವಿಸ್ತಾರವಾದ ಜಗತ್ತನ್ನು ಸಾಹಿತ್ಯದ ಮೂಲಕ ಅರ್ಥೈಸಿಕೊಳ್ಳುವುದು ಎಂದೆನ್ನಬಹುದು. ಬದುಕಿನ ಎಲ್ಲ ಮುಖದ ಪರಿಚಯ ಮಾಡಿಕೊಡಬೇಕೆಂಬ ಧಾವಂತ ಅವರಿಗಿರುವುದರಿಂದಲೇ ಡಿಸೋಜ ಕಳೆದ ಐದು ದಶಕಗಳಿಂದ ಬರೆಯುತ್ತಲೆ ಇದ್ದಾರೆ ಬರೆದಷ್ಟೂ ಅವರಿಗೆ ಜಗತ್ತು ಇನ್ನಷ್ಟು ವಿಶಾಲವಾಗಿ ತೆರೆದುಕೊಳ್ಳುತ್ತಿರುತ್ತದೆ. ಕತೆ ಅವರಿಗೆ ಪ್ರಿಯವಾದ ಅಭಿವ್ಯಕ್ತಿಯ ಮಾಧ್ಯಮ ಕಥಾಪ್ರಕಾರದಿಂದ ಅವರು ಬೆಳೆದಿದ್ದಾರೆ. ಅದರೊಂದಿಗೆ ಕನ್ನಡ ಕಥನ ಸಾಹಿತ್ಯವೂ ಬೆಳೆದಿದೆ.

ಸಮಾಜ, ಧರ್ಮ, ಸಂಸ್ಕೃತಿ ಹಾಗೂ ಪರಿಸರದ ಬಗೆಗಿನ ಕಾಳಜಿಯಿಂದ ಈ ನಿಬಂಧ ರಚನೆಗೆ 'ಡಿಸೋಜರ ಕಥಾಸಾಹಿತ್ಯ'ವನ್ನು ಆಯ್ಕೆ ಮಾಡಿಕೊಂಡು ಸಾಮಾಜಿಕ-ಸಾಂಸ್ಕೃತಿಕ, ಕ್ರೈಸ್ತಧರ್ಮ, ಹಾಗೂ ಪರಿಸರಕಾಳಜಿಯ ನೆಲೆಗಟ್ಟಿನಲ್ಲಿ ವಸ್ತುವಿವೇಚನೆ ಮಾಡಿದ ನನ್ನ ಅಧ್ಯಯನ ತೃಪ್ತಿ ತಂದಿದೆ.

ನಾನು ವಿಭಾಗ ಮಾಡಿಕೊಂಡ ಅಧ್ಯಾಯಗಳಿಗೆ ಅನುಗುಣವಾಗಿ ಅಧ್ಯಯನವು ನಡೆದಿದೆ ಎಂದೂ, ನಿಬಂಧದ ಅಧ್ಯಯನ ವ್ಯಾಪ್ತಿಯನ್ನು ಯಾವ ಅಧ್ಯಾಯದಲ್ಲೂ

[illegible]

[illegible]

[illegible]

[illegible]

[illegible]

ಮೀರಿ ಹೋಗಿಲ್ಲವೆಂದು ಸ್ಪಷ್ಟಪಡಿಸುತ್ತೇನೆ. ಆಯ್ದುಕೊಂಡ ಕಥಾಸಾಹಿತ್ಯದ ಒಳಗೆ ನಿಂತು ಬದುಕಿನ ಮೌಲ್ಯಗಳನ್ನು ಗುರುತಿಸಿದ್ದೇನೆ.

ನಿಬಂಧ ರಚನೆಯಲ್ಲಿ ಗ್ರಂಥಾಲಯ ಮತ್ತು ಪುಸ್ತಕಮಳಿಗೆಗಳಲ್ಲಿ ದೊರೆತ ಪುಸ್ತಕಗಳು ಹಾಗೂ ಮಾರ್ಗದರ್ಶಕರು ನೀಡಿದ ಸಲಹೆ, ಸಹಕಾರ, ಅತ್ಯುತ್ತಮ ಮಾರ್ಗದರ್ಶನ ನನ್ನ ಅಧ್ಯಯನಕ್ಕೆ ಸಹಕಾರಿಯಾಯಿತು. ಒಟ್ಟು ಐದು ಅಧ್ಯಾಯಗಳಾಗಿ ವಿಂಗಡಿಸಿಕೊಂಡು ಅಧ್ಯಯನವನ್ನು ಪೂರ್ಣಗೊಳಿಸಿದ್ದೇನೆ. ಎಲ್ಲಾ ಅಧ್ಯಾಯಗಳನ್ನು ಉದ್ದೇಶ ಮತ್ತು ವ್ಯಾಪ್ತಿಗೆ ಅನುಗುಣವಾಗಿಯೇ ವಿಷಯ ವಿಶ್ಲೇಷಣೆ ಮಾಡಿದ್ದೇನೆ.

ಪ್ರತಿ ಅಧ್ಯಾಯದ ಕೊನೆಯಲ್ಲಿ ಅಡಿಟಿಪ್ಪಣೆಗಳ ವಿವರವನ್ನು ನೀಡಿದ್ದೇನೆ. ಅನುಬಂಧದಲ್ಲಿ ನಾ. ಡಿಸೋಜ ಕುರಿತ ಕೆಲವು ಹೇಳಿಕೆಗಳು, ರಚಿಸಿರುವ ಕೃತಿಗಳು ಹಾಗೂ ಸಂದ ಪ್ರಶಸ್ತಿ ಪುರಸ್ಕಾರಗಳ ವಿವರವನ್ನು ನೀಡಿದ್ದೇನೆ. ಒಟ್ಟಾರೆಯಾಗಿ ಆಯ್ದುಕೊಂಡ ವಿಷಯವನ್ನು ಅಧ್ಯಯನಕ್ಕೆ ಒಳಪಡಿಸುವಾಗ ಸಣ್ಣಕತೆಯು ಸಮಾಜದ ಮೇಲೆ ಬೀರುವ ಪ್ರಭಾವ ತೀಕ್ಷ್ಣತೆ ಹೆಚ್ಚೆಂದು ತಿಳಿದುಬರುತ್ತದೆ. ಅದರಲ್ಲೂ ನಾ.ಡಿಸೋಜರ ಸಣ್ಣಕತೆಗಳು ಸ್ವ ಅನುಭವದ ಮೂಲಕ ಪ್ರೇರಿತಗೊಂಡಿದ್ದು ಸಾಮಾಜಿಕ, ಸಾಂಸ್ಕೃತಿಕ, ಕ್ರೈಸ್ತಧರ್ಮ ಹಿನ್ನೆಲೆ ಹಾಗೂ ಪರಿಸರ ನೆಲೆಯಲ್ಲಿ ಹೆಚ್ಚಾಗಿ ಬರೆಯಲ್ಪಟ್ಟಿದ್ದು ಈ ನಿಬಂಧ ಸಾರ್ಥಕತೆ ಪಡೆದಿದೆ. ನಿಬಂಧದ ಕೊನೆಯಲ್ಲಿ ಮೂಲಗ್ರಂಥಗಳು ಹಾಗೂ ಪರಾಮರ್ಶನ ಮಾಡಿದ ಗ್ರಂಥಗಳ ವಿವರವನ್ನು ನೀಡಲಾಗಿದೆ.

[illegible]

[illegible]

[illegible]

ಅನುಬಂಧ – ೧

ನಾ. ಡಿಸೋಜ ಕುರಿತ ಕೆಲವು ಹೇಳಿಕೆಗಳು

- ನಾ ಡಿಸೋಜ ಅವರು ಕಥೆಯನ್ನೇ ಬರೆಯಲಿ, ಕಾದಂಬರಿಯನ್ನೇ ಬರೆಯಲಿ ಅಥವಾ ನಾಟಕವನ್ನೇ ಬರೆಯಲಿ ತುಂಬ ಮಾರ್ಮಿಕವಾಗಿ ಬರೆಯಬಲ್ಲರು.

  – ಡಾ. ಚಂದ್ರಶೇಖರ ಕಂಬಾರ

- ನಾ.ಡಿಸೋಜ ಅವರ ಸಾಹಿತ್ಯ ಮೂರು ಪ್ರಮುಖ ಕವಲುಗಳಲ್ಲಿ ಹರಿದಿದೆ ಎನಿಸುತ್ತದೆ. ಮೊದಲನೆಯದು – ಅವರದೇ ಸಮಾಜವಾದ ಕ್ರೈಸ್ತಸಮಾಜಕ್ಕೆ ಸಂಬಂಧಪಟ್ಟಿದ್ದು, ಅವರ ವೃತ್ತಿಜೀವನಕ್ಕೆ ಸಂಬಂಧಪಟ್ಟಿದ್ದು ಎರಡನೆಯದು, ಆ ಪ್ರದೇಶದ ಪರಿಸರಕ್ಕೆ ಸಂಬಂಧಪಟ್ಟಿದ್ದು ಮೂರನೆಯದು.

  – ಚದುರಂಗ

- ಸೃಜನಶೀಲತೆಯೆಂದರೆ ಹೊಸವಸ್ತುಗಳನ್ನು ಹುಟ್ಟಿಸುವುದಲ್ಲ, ವಸ್ತುಗಳನ್ನು ಹೊಸದಾಗಿಸುವುದು. ಬಾಲ್ತಿದಾರನ (ಬಣ್ಣ) ನವೀಕರಣದ ಕ್ರಿಯೆ ಒಂದು ಕರ್ಮಕಾಂಡವಾಗುವಂತೆ ಒಂದು ಅರ್ಥಪೂರ್ಣವಾದ ಕಥೆಯ ವ್ಯಾಪಾರವೂ ಹೌದು. ನಾ.ಡಿಸೋಜರ ಕಥೆಗಳು ಈ ಅರ್ಥದಲ್ಲಿ ಸಮರ್ಥ ಕಥೆಗಳು.

  – ಕೀರ್ತಿನಾಥ ಕುರ್ತಕೋಟಿ

- ಅವರ ಕಥಾವಸ್ತು ನಮ್ಮ ಎದುರಿನಲ್ಲಿಯೇ, ಪಕ್ಕದಲ್ಲಿಯೇ, ನಡೆದ ಘಟನೆಯಂತಿರುತ್ತದೆ. ವಾಸ್ತವಾಂಶದಿಂದ ಕೂಡಿರುತ್ತದೆ.

  – ಟಿ.ಮಹಾಬಲೇಶ್ವರ ಭಟ್ಟ

- ನಮ್ಮ ನಾ.ಡಿಸೋಜ ಅವರನ್ನು ನಮ್ಮ ಇಂದಿನ ಜಾಯಮಾನದ ಚೆಕೋವ್ ಎಂದು ನಾನು ಕರೆಯಬಲ್ಲ ಅವರು ಯಾವ ಒಂದು ಘಟನೆ, ವ್ಯಕ್ತಿ ವಿಶೇಷ, ಪ್ರಸಂಗ, ಕಾರ್ಯರಂಗದೊಳಗಿಂದಲೂ ಒಂದು ಸ್ವಾರಸ್ಯದ ಕಥೆಯನ್ನು ರೂಪಿಸಬಹುದು.

  – ಗೌರೀಶ ಕಾಯ್ಕಿಣಿ

- ನಾ.ಡಿಸೋಜ ಅಗಾಧ ಸಮಕಾಲೀನ ಪ್ರಜ್ಞೆ ಹಾಗೂ ಪರಿಸರ ಕಾಳಜಿಯ ಲೇಖಕರು.

  – ಡಾ. ಗಂಗೂ ಆರ್ ಮೂಲಿಮನಿ

ಅನುಬಂಧ – ೨

ನಾ. ಡಿಸೋಜ ರಚಿಸಿರುವ ಕೃತಿಗಳು

ಕಾದಂಬರಿಗಳು: ಅಜ್ಞಾ, ಆಸರೆ, ಇಂಜಿನಿಯರ್ ಆತ್ಮಕಥೆಯ ಮೊದಲ ಪುಟಗಳು, ಇಗರ್ಜಿಯ ಸುತ್ತಲಿನ ಮನೆಗಳು, ಬಂಜೆಬೆಂಕಿ (೨ನೇ ಮು), ಈ ನೆಲ ಈ ಜಲ (೨ನೇ ಮು), ಮಂಜಿನ ಕಾನು (೩ನೇ ಮು), ಕೆಂಪು ತ್ರಿಕೋನ, ಒಂದು ಜಲಪಾತದ ಸುತ್ತ, ಒಡ್ಡು, ಕಾಡಿನಬೆಂಕಿ, ಕುಂಜಾಲು ಕಣಿವೆಯ ಕೆಂಪು ಹೂವು, ಕೈತಾನ್ ಗಾಂಧಿಯ ಸ್ವಾತಂತ್ರ್ಯಹೋರಾಟ, ಕ್ರಯ ವಿಕ್ರಯ, ಗಾಂಧಿ ಬಂದರು, ಜೀವ ಕಳೆಯ ಮಹಾಸತಿ, ಜೀವಕಳೆ, ದ್ವೀಪ, ದುರ್ಗವೆಂಬ ವ್ಯೂಹ, ನಡುವೆ ನಿಂತ ಜನ, ನೀರಮ್ಮ ವ್ಯಾಧಿ ಪುರಾಣ, ನೆಲೆ, ಪ್ರಜ್ಞಾಬಲೆ, ಪ್ರೀತಿಯೆಂಬ ಚುಂಬಕ, ಪ್ರೀತಿಯೆಂಬುದೇ ಸಾಲದೇ, ಮಾನವ, ಮುಳುಗಡೆ, ವಿಷವರ್ತುಲ, ವಿಷಾನಿಲ, ವೀರಭದ್ರನಾಯಕ, ಶಿವನ ಡಂಗುರ, ಸುವಾಸಿನಿ, ತಿರುಗೋಡಿನ ರೈತ ಮಕ್ಕಳು (೨ನೇ ಮು), ಕಡಲು ಕಾಯುವುದಿಲ್ಲ, ಹಕ್ಕಿ ಹಾರಿತು, ಶರಾವತಿ ಎಂಬ ಮಾನಿನಿ, ಸೇತುವೆ, ಕೊಳಗ (೨ನೇ ಮು), ಬಾಮಣ್, ಬಣ್ಣ ಬಳಿದ ಸಮಾಧಿಗಳು, ಹರಿವನದಿ.

ಐತಿಹಾಸಿಕ ಕಾದಂಬರಿಗಳು: ಇಕ್ಕೇರಿಯಲ್ಲಿ ಕ್ರಾಂತಿ, ಶೃಂಗೇರಿಯಲ್ಲಿ ಶಾಂತಿ, ಚೆನ್ನಿ, ಚೆನ್ನಮ್ಮ, ಚೆನ್ನಮ್ಮಾಜಿ (೨ನೇ ಮು), ರಾಗವಿರಾಗ.

ಕಥಾಸಂಕಲನಗಳು: ಇಪ್ಪತ್ತೈದು ಕಥೆಗಳು (೧೯೮೯), ಗಿಳಿಯೇ ಓ ಗಿಳಿಯೇ, ನಿನ್ನುದ್ಧಾರವೆಷ್ಟಾಯಿತು?, ಪ್ರಜ್ಞಾ ಎಂಬ ನದಿ, ಸಣ್ಣಕಥೆ(೧೯೮೭) ಸ್ವರ್ಗದ ಬಾಗಿಲಲ್ಲೂ ನರಕ, ಹೊಸ ಕತೆಗಳು, ೨೫ ಕತೆಗಳು, ಅವರದ್ದೇ ಬೇರೆಕತೆ, ಸಮಗ್ರಕಥೆಗಳು ಸಂಪುಟ ೧, ಸಂಪುಟ ೨, ಸಂಪುಟ ೩.

ನಾಟಕಗಳು: ತಬ್ಬಲಿ, ದೇವರಿಗೇ ದಿಕ್ಕು, ದ್ವೀಪ, ಬೆತ್ತಲೆಸೇವೆ, ಭೂತದ ಎದುರು ಬೇತಾಳ, ಮುಂದೇನು (೨ನೇ ಮು), ಭೂತ (೨ನೇ ಮು), ಹಕ್ಕಿಗಳಿಗೆ ಬಂತು ಬಣ್ಣ, ಗೆಳೆಯರ ಬಳಗಕೆ ಜೈ, ಮಕ್ಕಳು ಕಲಿಸಿದ ಪಾಠ.

ಜನಪದ: ಚಿತ್ತಾರ, ಹೂವ ಚೆಲ್ಲುತ ಬಾ.

ರೇಡಿಯೋ ನಾಟಕಗಳು: ಭುವಿಗೆ ಬಂದ ಬೆಳಕು, ರೂಪದರ್ಶಿ, ಹಿಪ್ಪಿ ಮತ್ತು ಅಜ್ಜಿ, ಮಲೆನಾಡಿನ ಮದಕರಿ, ಬೆಳಗಾಗಿ ನಾನೆದ್ದು, ಊರಾಳು ಅರಮನೆಗೆ ಜನ ಬಂದರು, ಹಳೆಯ ಬಳಗಕ್ಕೆ ಜೈ (ಮಕ್ಕಳ ನಾಟಕ).

ಕಿರು ಕಾದಂಬರಿಗಳು: ಗುಡಿಗಾರರು, ತಿರುವುಗಳು, ಹಕ್ಕಿ ಹಾರಿತು, ನಾಯಕ, ಜಾತ್ರೆಯಲ್ಲಿ ಕಂಡವಳು, ಸುರಂಗ, ಮಹಾಸತಿ, ಇತಿಹಾಸದ ಕಪ್ಪು ಚುಕ್ಕೆ, ಎರಡುರಾತ್ರಿ ಒಂದು ಹಗಲು.

ಅನುವಾದ: ಹಲವು ಕತೆಗಳು ಕೊಂಕಣಿ, ಮಲೆಯಾಳಿ, ತೆಲುಗು, ತಮಿಳು, ಸಂಸ್ಕೃತ, ಹಿಂದಿಗೆ ಅನುವಾದಗೊಂಡಿವೆ. 'ಕುಂಜಾಲು' ತೆಲಗಿಗೆ, 'ಪ್ರೀತಿಯೊಂದೇ ಸಾಲದೇ', 'ಜಲಪಾತದ ಸುತ್ತ', 'ಇಗರ್ಜಿಯ ಸುತ್ತಲಿನ ಹತ್ತು ಮನೆಗಳು', 'ಕಾಡಿನ ಬೆಂಕಿ', 'ತಿರುವು' ಕೊಂಕಣಿಗೆ, 'ಬಾಲಗಂಧರ್ವ', 'ಏಸುಕ್ರಿಸ್ತ', 'ಇಗರ್ಜಿ' ಇಂಗ್ಲಿಷ್‌ಗೆ, 'ನೇತ್ರಾಣಿ ಗುಡ್ಡಕೆ ಯಾತ್ರೆ' ಹಿಂದಿಗೆ ಅನುವಾದಗೊಂಡಿವೆ.

ಸಂಕೀರ್ಣ: ಜೋಗ ಜಲಪಾತ (ಮೊದಲ ನೂರು ವರ್ಷಗಳು), ಶರಾವತಿ ಏಕೀ ಪರಿಸ್ಥಿತಿ, ರಾಸುಗನ್ನಡ ವಿವೇಕ ವಿವೇಚನೆ.

ಜೀವನಚಿತ್ರ: ಮೂಡುಗೋಡು ಹಿರಣ್ಯಪ್ಪ, ಏಸುಕ್ರಿಸ್ತ, ಮದರ್ ತೆರೇಜಾ, ಗೋಪಾಲಗೌಡರು.

ಮಕ್ಕಳ ಪುಸ್ತಕಗಳು: ಗೇರುಸೊಪ್ಪೆ, ಕದಂಬ ಮಯೂರಶರ್ಮ, ಬಾಲಗಂಧರ್ವ, ಪುಲಿನಬಿಹಾರಿದಾಸ್, ಸದಾಶಿವ ಬ್ರಹ್ಮೇಂದ್ರ, ಶರಾವತಿ, ಸಂಗೀತಪುರ, ಸೊರಬ, ದಂತ ಮತ್ತು ಗಂಧ, ಆನೆ ಬಂತೊಂದಾನೆ, ಆನೆ ಹುಡುಗ ಅಬ್ದುಲ್ಲಾ, ಗೋಡೆ ಬೇಡ, ಕಾಡಾನೆಯ ಕೊಲೆ, ಗೋಪಿಯ ಗೊಂಬೆ, ಕೋಳಿ ಅನಂತ.

ಇತರೆ: ವರಾಹಿ, ಸೊರಬ, ಮಗದೊಮ್ಮೆ ಹೇಳಿದ ಅಜ್ಜಿಕತೆಗಳು, ಕರ್ನಾಟಕದ ಅದ್ಭುತ ಜಲಪಾತಗಳು, ಸಮಯದ ಸದ್ಬಳಕೆ.

ಅನುಬಂಧ – ೩

ನಾ. ಡಿಸೋಜರವರಿಗೆ ಸಂದ ಪ್ರಶಸ್ತಿ – ಪುರಸ್ಕಾರಗಳು

೧೯೮೧ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರವಾಸ ಅನುದಾನ ಪಡೆದು ಮಹಾರಾಷ್ಟ್ರದಲ್ಲಿ ಒಂದು ತಿಂಗಳ ಪ್ರವಾಸ. ಮರಾಠಿ ನಾಟಕ, ಜನಪದ ಕಲೆಯ ಅಧ್ಯಯನ.

೧೯೮೩ "ಸುಧಾ" ಯುಗಾದಿ ಕಾದಂಬರಿ ಸ್ಪರ್ಧೆಯಲ್ಲಿ "ಮುಳುಗಡೆ" ಕಾದಂಬರಿಗೆ ಪ್ರಥಮ ಬಹುಮಾನ ರೂ. ೧೫,೦೦೦/–

೧೯೮೮ "ಬೆಳಕಿನೊಡನೆ ಬಂತು ನೆನಪು" ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪುರಸ್ಕಾರ

೧೯೮೮ ದಿ. ಗುಲ್ವಾಡಿ ವೆಂಕಟರಾವ್ ಪ್ರಶಸ್ತಿ

೧೯೮೮–೯೧ ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯ.

೧೯೯೦ "ಕಾಡಿನ ಬೆಂಕಿ" ಚಲನಚಿತ್ರವಾಗಿ ರಜತ ಕಮಲ, ರಾಜ್ಯ ಪ್ರಶಸ್ತಿ

೧೦/೧೯೯೨ ಸಾರ್ಕ ದೇಶಗಳ ಸಾಹಿತಿಗಳ ಸಮಾವೇಶದಲ್ಲಿ (ಬೆಂಗಳೂರು) ಸ್ವಂತ ಕತೆ ವಾಚನ.

೧೯೯೩ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

೧೦/೧೯೯೩ ರಾಜ್ಯಮಟ್ಟದ ಸನ್ಮಾನ, ಬೆಂಗಳೂರಿನಲ್ಲಿ "ನಾ.ಡಿಸೋಜ ಅಭಿನಂದನ" ಎಂಬ ಗ್ರಂಥ ಸಮರ್ಪಕ ಪ್ರಕಾಶನ: ಆಶೀರ್ವಾದ್, ೩೦ ಸೆಂಟ್ ಮಾರ್ಕ್ ರಸ್ತೆ, ಬೆಂಗಳೂರು–೧. ಪುಟ ೨೫೦, ಸಂಪಾದಕ ಸಿ.ಎಚ್.ಜಾಕೋಬ್ ಲೋಬೋ, ಶ್ರೀಯುತರಾದ ಚಂದ್ರಶೇಖರ ಕಂಬಾರ, ಚದುರಂಗ, ಅನಂತಮೂರ್ತಿ, ಟಿ.ಪಿ.ಅಶೋಕ್, ಚಂಪಾ, ನಾಗತಿಹಳ್ಳಿ, ಕೆ.ಟಿ.ಗಟ್ಟಿ, ಎಚ್.ಎಸ್.ಪಾರ್ವತಿ ಸುಬ್ಬಣ್ಣ, ಗೌರೀಶ ಕಾಯ್ಕಿಣಿ, ಚೆನ್ನವೀರ ಕಣವಿ, ಗುರುರಾವ ಬಾಪಟ, ವಿಲಿಯಂ, ಕೀರ್ತಿನಾಥ ಕುರ್ತಕೋಟಿ, ಸಾ.ಶಿ.ಮರಳಯ್ಯ, ದು ನಿಂ. ಬೆಳಗಲಿ ಮುಂತಾದ ಲೇಖಕರ ೫೦ಕ್ಕೂ ಮಿಕ್ಕ ಲೇಖನಗಳ ಸಂಗ್ರಹ.

೧೯೯೩–೯೫ ಸಿಂಡಿಕೇಟ್ ಸದಸ್ಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೯೯೫ ಸದಸ್ಯ, ಕೊಂಕಣಿ ಸಾಹಿತ್ಯ ಅಕಾಡೆಮಿ, ಮಂಗಳೂರು

೧೯೯೫ ಸದಸ್ಯ, ಪುಸ್ತಕ ಪ್ರಾಧಿಕಾರ, ಬೆಂಗಳೂರು

೧೯೯೭–೯೮ ಸೆನೆಟ್ ಸದಸ್ಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೯೯೭–೯೮ ಸೆನೆಟ್ ಸದಸ್ಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ಶಿವಮೊಗ್ಗ

೧೯೯೭ – ಸದಸ್ಯ, ಶಿವಮೊಗ್ಗ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಆಡಳಿತ ಪರಿಷತ್, ಶಿವಮೊಗ್ಗ

೧೯೯೦ – ಅಧ್ಯಕ್ಷ, ಯೂತ್ ಹಾಸ್ಟೆಲ್ ಅಸೋಸಿಯೇಶನ್, ಸಾಗರ ಘಟಕ, ಸಾಗರ

೧೯೯೦ – ಅಧ್ಯಕ್ಷ, "ಒಡನಾಟ" ಸಾಂಸ್ಕೃತಿಕ ಸಂಘ, ಸಾಗರ.

೧೯೯೮ – ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ

"ಸಂದೇಶ ಸಾಹಿತ್ಯ ಪ್ರಶಸ್ತಿ" ಮಂಗಳೂರು ನವದೆಹಲಿ "ಕಥಾ" ಪ್ರಶಸ್ತಿ.

೨೦೦೦ ಸದಸ್ಯ, ಕುವೆಂಪು ರಂಗಮಂದಿರ ಸಲಹಾ ಸಮಿತಿ, ಶಿವಮೊಗ್ಗ

೨೦೦೩ ನಿರಂಜನ ಸಾಹಿತ್ಯ ಪ್ರಶಸ್ತಿ, ಪುತ್ತೂರು.

೨೦೦೩ ಕಾಳಿಂಗ ನಾವಡಾ ಪ್ರತಿಷ್ಠಾನದ "ವರ್ಷದ ವ್ಯಕ್ತಿ" ಪ್ರಶಸ್ತಿ.

೨೦೦೩ ಕಾರ್ಯಾಧ್ಯಕ್ಷ, ಶಿವಮೊಗ್ಗ ತಾಳಗುಪ್ಪ ರೈಲ್ವೇ ಬ್ರಾಡಗೇಜ ಹೋರಾಟ ಸಮಿತಿ, ಸಾಗರ.

೨೦೦೪ ಕನ್ನಡ ರಾಜ್ಯೋತ್ಸವ ಸನ್ಮಾನ, ಕನ್ನಡ ಸಂಘ, ಚೆನ್ನೈ

೨೦೦೫ ಅಧ್ಯಕ್ಷ, ಸಂದೇಶ ಆಯ್ಕೆ ಸಮಿತಿ, ಮಂಗಳೂರು

೨೦೦೬ ಅಧ್ಯಕ್ಷ, ಅಖಿಲ ಭಾರತ ಕನ್ನಡ ಸಂಸ್ಕೃತಿ ಸಮ್ಮೇಳನ, ಮುಂಬೈ

೨೦೦೬ "ದ್ವೀಪ" ಚಲನಚಿತ್ರವಾಗಿ ಸ್ವರ್ಣ ಕಮಲ ರಾಜ್ಯ ಪ್ರಶಸ್ತಿ.

೨೦೦೬ ಆಳ್ವಾಸ್ ನುಡಿ ಸಿರಿ ಪ್ರಶಸ್ತಿ

೨೦೦೬ ಫೆಬ್ರವರಿ, ೨೩, ಅಧ್ಯಕ್ಷ, ಭಟ್ಕಳ ತಾಲೂಕು ದ್ವಿತೀಯ ಸಾಹಿತ್ಯ ಸಮ್ಮೇಳನ

೨೦೦೭ ಕುವೆಂಪು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್

೨೦೦೯ ಸದಸ್ಯ ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಅಧ್ಯಕ್ಷ, ಅಖಿಲ ಕರ್ನಾಟಕ ಮಕ್ಕಳ ಸಾಹಿತ್ಯ ಸಮ್ಮೇಳನ ಹುಬ್ಬಳ್ಳಿ ಮೇ, ೧೯, ೨೦ "ಇಗರ್ಜಿ ಸುತ್ತಲಿನ ಹತ್ತು ಮನೆಗಳು" ಕಾದಂಬರಿಗೆ ವರ್ಧಮಾನ ಪ್ರಶಸ್ತಿ (ರೂ. ೧೦,೦೦೦)

೨೦೧೦ ಅಧ್ಯಕ್ಷ, ಶಿವಮೊಗ್ಗ ಜಿಲ್ಲಾ ಸಾಹಿತ್ಯ ಸಮ್ಮೇಳನ

೨೦೧೦ ಶ್ರೀ ಶಿವಮೂರ್ತಿ ಶರಣ ಪ್ರಶಸ್ತಿ, ಚಿತ್ರದುರ್ಗ

೨೦೧೧ ಕೇಂದ್ರ ಸಾಹಿತ್ಯ ಅಕಾಡೆಮಿ, ಬಾಲ ಸಾಹಿತ್ಯ ಪುರಸ್ಕಾರ

೨೦೧೪ ಮಡಿಕೇರಿಯಲ್ಲಿ ನಡೆದ ೮೦ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ.

ಪರಾಮರ್ಶನ ಗ್ರಂಥಗಳು

೧. ನಾ.ಡಿಸೋಜ ಅವರ ಸಮಗ್ರ ಕಥೆಗಳು ಸಂಪುಟ –೧ ಸಂಪುಟ –೨ ಸಂಪುಟ –೩ (ಮೂಲಗ್ರಂಥಗಳು)	–	ನಾ. ಡಿಸೋಜ ಸಾಗರ್ ಪ್ರಕಾಶನ, ಬೆಂಗಳೂರು, ೨೦೧೦.
೨. ಕಥೆ – ಕಥನ	–	ಎಸ್.ಪ್ರಸಾದಸ್ವಾಮಿ ಧಾತ್ರಿ ಪುಸ್ತಕಮಾಲೆ, ಬೆಂಗಳೂರು, ೨೦೦೭
೩. ಶತಮಾನದ ಸಣ್ಣಕಥೆಗಳ ಸಮೀಕ್ಷೆ	–	ಕರೀಗೌಡ ಬೀಚನಹಳ್ಳಿ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು
೪. ನಾ.ಡಿಸೋಜ ಎಂಬ ಶರಾವತಿಯ ನಾಲ್ಕು ಜಲಧಾರೆ.....	–	ಡಾ. ಸರ್ಫ್ರಾಜ್ ಚಂದ್ರಗುತ್ತಿ, ಶ್ರುತಿಲೋಕ ಪ್ರಕಾಶನ, ಮೈಸೂರು, ೨೦೧೧
೫. ನಾ.ಡಿಸೋಜ ಅಭಿನಂದನ	–	ಎ.ಎಚ್.ಜಾಕೋಬ್ ಲೋಬೊ (ಸಂ)
ಪತ್ರಿಕಾ ಲೇಖನಗಳು		
೧. ಸ್ಪರ್ಧಾಚೈತ್ರ (ಮಾಸಿಕ)	:	ಜನವರಿ – ೨೦೧೪
೨. ಸ್ಪರ್ಧಾಸ್ಫೂರ್ತಿ (ಮಾಸಿಕ)	:	ನಾಡುನುಡಿ ಹಬ್ಬ ಜನವರಿ ೨೦೧೪
೩. ಜನಪದ (ಮಾಸಿಕ)	:	ಎನ್.ಆರ್.ವಿಶುಕುಮಾರ್ (ಸಂ) ವಾರ್ತಾಇಲಾಖೆ, ಬೆಂಗಳೂರು ಫೆಬ್ರವರಿ–೨೦೧೪.

*****